ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 11 | ಸಂಚಿಕೆ 45 | ಪುಟ 16 | ಅಕ್ಟೋಬರ್ 30– ನವೆಂಬರ್ 5, 2017 | ರೂ. 10/-

web: www.janashakthi.co.in e-mail : js_weekly@yahoo.com



ಪಿ.ಸಾಯಿನಾಥ್ ಬಸವ ಪ್ರಶಸ್ತಿ

ಸಂಸತ್ತಿಗೆ ಲಕ್ಷಾಂತರ ಕಾರ್ಮಿಕರ ಲಗ್ಗೆ

ನವೆಂಬರ್ 9-11: ಮಹಾಪಡಾವ್



ಕೈ ಉತ್ಪನ್ನಗಳ ಮೇಲೆ GST ಬೇಡ!



ಟಿಪ್ಪು ಜಯಂತಿ ಆಚರಣೆ ಏಕೆ, ಹೇಗೆ?



ಯುಪಿ ಅಂಗನವಾಡಿ ತಾಯಂದಿರಿಗೆ ಯೋಗಿ 'ಪೂಜೆ'




ಕಾರ್ಮಿಕರು ಸೆ. 14 ಭರವಸೆ ನೆನಪಿಸಿದರು

ನವೆಂಬರ್ 8: ನೋಟು ನಿಷೇಧ 'ಶ್ರಾದ್ಧ' ಮಾಡಿ

ನೋಟುರದ್ಧತಿಯ ಮೊದಲ ವಾರ್ಷಿಕ: ವಿಧ್ವಂಸಕಾರಿ ಆರ್ಥಿಕ ಧೋರಣೆಗಳ ವಿರುದ್ಧ

ನವಂಬರ್ 8ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ–ಎಡಪಕ್ಷಗಳ ಕರೆ



ಬಿಜೆಪಿಯ 'ಕಪ್ಪು ಹಣ–ವಿರೋಧಿ' ದಿನಾಚರಣೆ–ಕಪ್ಪನ್ನು ಬಿಳುಪಾಗಿಸಿದ ಅತ್ಯಂತ ದೊಡ್ಡ ಕ್ರಮದ ಸ್ಮರಣಾರ್ಥ!

ನವಂಬರ್ 8ರನ್ನು 'ಕಪ್ಪು–ಹಣ ವಿರೋಧಿ ದಿನ'ವಾಗಿ ಆಚರಿಸಲಾಗುವುದು ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಇದು ಕಪ್ಪು ಹಣವನ್ನೆಲ್ಲ ಬಿಳಿಯಾಗಿಸಲು ಕಾಳ ದಾಸ್ತಾನುದಾರರಿಗೆ ನೆರವಾದ ನೋಟುರದ್ಧತಿಯ ನೆನಪಿನಲ್ಲಿ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಲೇವಡಿ ಮಾಡಿದ್ದಾರೆ.

ಭಾರತದ ಆರ್ಥಿಕತೆಯನ್ನು ಮತ್ತು ನಮ್ಮ ಬಹುಪಾಲು ಜನತೆಯ ಬದುಕಿನ ಪರಿಸ್ಥಿತಿಗಳನ್ನು ಹಾಳುಗೆಡವುತ್ತಿರುವ ಆರ್ಥಿಕ ಧೋರಣೆಗಳ ವಿರುದ್ಧ ಪ್ರತಿಭಟನಾ ದಿನಾಚರಣೆಯನ್ನು ನಡೆಸಲು ಎಡಪಕ್ಷಗಳು ನಿರ್ಧರಿಸಿವೆ. ನೋಟುರದ್ಧತಿ ಮಾಡಿ ಒಂದು ವರ್ಷವಾಗುವ ನವಂಬರ್ 8ನ್ನು ಕೇಂದ್ರದಲ್ಲಿ ಮತ್ತು ಹಲವು ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ಸರಕಾರಗಳ ಆರ್ಥಿಕ ಧೋರಣೆಗಳ ವಿರುದ್ಧ 'ಪ್ರತಿಭಟನಾ ದಿನ'ವಾಗಿ ಆಚರಿಸಲು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್–ಲಿಬರೇಶನ್), ಅಖಿಲ ಭಾರತ ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ ಮತ್ತು ಎಸ್‌ಯುಸಿಐ (ಕಮುನಿಸ್ಟ್) ಈ ಆರು ಎಡಪಕ್ಷಗಳು ಕರೆ ನೀಡಿವೆ.

ದೇಶದ ಒಟ್ಟಾರೆ ಪರಿಸ್ಥಿತಿ ಹದಗೆಡುತ್ತಿದೆ ಮತ್ತು ಜನತೆಯ ಮೇಲೆ ವ್ಯಾಪಕ ಪ್ರಮಾಣದಲ್ಲಿ ದಾಳಿಗಳು ನಡೆಯುತ್ತಿವೆ ಎಂದು ಈ ಎಡಪಕ್ಷಗಳು ಆತಂಕ ವ್ಯಕ್ತಪಡಿಸಿವೆ. ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲಾಗುತ್ತಿದೆ, ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಬುಡಮೇಲು ಮಾಡಲಾಗುತ್ತಿದೆ ಮತ್ತು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ಮೇಲೆ ಹಲ್ಲೆಗಳು ಹೆಚ್ಚುತ್ತಿವೆ.

ಪ್ರಧಾನ ಮಂತ್ರಿಗಳು ಇದ್ದಕ್ಕಿದ್ದಂತೆ ಮತ್ತು ಏಕಪಕ್ಷೀಯವಾಗಿ ನೋಟುರದ್ಧತಿಯನ್ನು ಪ್ರಕಟಿಸಿ ಒಂದು ವರ್ಷ ಪೂರೈಸುತ್ತಿದೆ. ಈ ನಡೆ, ಎಡಪಕ್ಷಗಳು ಎಚ್ಚರಿಸಿದಂತೆ, ಭಾರತೀಯ ಆರ್ಥಿಕದ ಆರೋಗ್ಯದ ಮೇಲೆ ವಿನಾಶಕಾರಿ ದುಷ್ಪರಿಣಾಮಗಳನ್ನು ಬೀರಿದೆ ಮತ್ತು ನಮ್ಮ ಬಹುಪಾಲು ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹಾಕಿದೆ.

ನೋಟುರದ್ಧತಿಯ ಘೋಷಿತ ಉದ್ದೇಶಗಳು ಯಾವವೂ ಈಡೇರಿಲ್ಲ. ಸುಮಾರಾಗಿ ಎಲ್ಲ ರದ್ದತಿಯಾದ ಹಣ ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬಂದಿದ್ದು, ಕಪ್ಪು ಹಣವನ್ನೆಲ್ಲ ಬಿಳಿ ಹಣವಾಗಿ ಪರಿವರ್ತಿಸಲಾಗಿದೆ, ಮತ್ತು ಈ ಪ್ರಕ್ರಿಯೆಯಲ್ಲಿ ಒಬ್ಬನಾದರೂ ಅಪರಾಧಿಗೂ ಶಿಕ್ಷೆಯಾಗಿಲ್ಲ. ಖೋಟಾ ಕರೆನ್ಸಿ ಕಾನೂನುಬದ್ಧಗೊಂಡಿದೆ. ಭಯೋತ್ಪಾದಕ ಚಟುವಟಿಕೆಗಳನ್ನು ಅಡಗಿಸುವ ಪ್ರಕಟಿತ ಉದ್ದೇಶಸಾಧನೆಗೆ ತದ್ವಿರುದ್ಧವಾಗಿ ಬಹಳಷ್ಟು ಸೇನಾಸಿಬ್ಬಂದಿ, ಭದ್ರತಾಪಡೆಗಳ ಸಿಬ್ಬಂದಿ ಮತ್ತು ಜನಸಾಮಾನ್ಯರು ಭಯೋತ್ಪಾದಕ ದಾಳಿಗಳಿಂದಾಗಿ ಪ್ರಾಣ ಕಳಕೊಂಡಿದ್ದಾರೆ. ವಾಸ್ತವವಾಗಿ ಭ್ರಷ್ಟಾಚಾರದ ಪ್ರಮಾಣ ದ್ವಿಗುಣಗೊಂಡಿದೆ ಎಂದು ಎಡಪಕ್ಷಗಳು ಅಭಿಪ್ರಾಯ ಪಟ್ಟಿವೆ.

ಇನ್ನೊಂದೆಡೆಯಲ್ಲಿ ನಮ್ಮ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ)ಗೆ ಮೂರನೇ ಒಂದು ಭಾಗಕ್ಕಿಂತಲೂ ಹೆಚ್ಚು ಕೊಡುಗೆ ನೀಡುವ, 60ಶೇಕಡಾಕ್ಕಿಂತಲೂ ಹೆಚ್ಚು ಉದ್ಯೋಗಗಳನ್ನು ನೀಡಿರುವ ಅಸಂಘಟಿತ ವಲಯವನ್ನು ನೋಟುರದ್ಧತಿ ಪುಡಿಪುಡಿ ಮಾಡಿದೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಯೋಜನೆಯ ಅಡಿಯಲ್ಲಿನ ನೀಡಿಕೆಗಳಲ್ಲಿ ತೀವ್ರ ಕಡಿತ, ಸಾರ್ವಜನಿಕ ವಿತರಣಾ ವ್ಯವಸ್ಥೆ ಸುಮಾರಾಗಿ ಕುಸಿದೇ ಹೋಗಿರುವುದು ಮತ್ತು ಆಧಾರ್ ಕಾರ್ಡ್ ಶರತ್ತುಗಳನ್ನು ಹೇರಿರುವುದು ನಮ್ಮ ಅತ್ಯಂತ ಅಂಚಿಗೆ ತಳ್ಳಲ್ಪಟ್ಟಿರುವ, ಅಸಹಾಯ ಜನವಿಭಾಗಗಳನ್ನು ವಂಚನೆಗೆ ಗುರಿಪಡಿಸಿದೆ.

ಈ ಸರಕಾರದ ಆರ್ಥಿಕ ಧೋರಣೆಗಳಿಂದಾಗಿ ಎಲ್ಲ ಮೂರು ವಲಯಗಳಲ್ಲೂ ಅಂದರೆ, ಕೃಷಿ, ಕೈಗಾರಿಕೆ ಮತ್ತು ಸೇವಾವಲಯಗಳಲ್ಲೂ ಆರ್ಥಿಕ ಚಟುವಟಿಕೆಗಳು ಗಮನಾರ್ಹ ಪ್ರಮಾಣದಲ್ಲಿ ನಿಧಾನಗೊಂಡಿವೆ. ಇದರ ಪರಿಣಾಮವಾಗಿ ನಿರುದ್ಯೋಗ ತೀವ್ರವಾಗಿ ಹೆಚ್ಚಿದೆ ಮತ್ತು ಕೃಷಿ ಸಂಕಟ ಇನ್ನಷ್ಟು ಉಲ್ಬಣಗೊಂಡಿದೆ. ನಮ್ಮ ಯುವಜನ, ನಮ್ಮ ಜನಸಂಖ್ಯಾ ಅನುಕೂಲತೆಗ:ಳಿಂದಾಗಿ ದೇಶಕ್ಕೆ ಒಂದು ಆಸ್ತಿಯಾಗುವ ಬದಲು ಗೊತ್ತುಗುರಿಯಿಲ್ಲದೆ ಅಲೆಯುವಂತಾಗಿ ತೀವ್ರ ಆರ್ಥಿಕ ಮತ್ತು ಸಾಮಾಜಿಕ ಅಭದ್ರತೆಗೆ ಒಳಗಾಗುವಂತಾಗಿದೆ. ರೈತರ ಆತ್ಮಹತ್ಯೆಗಳು ಅಭೂತಪೂರ್ವ ಪ್ರಮಾಣವನ್ನು ತಲುಪಿವೆಯಷ್ಟೇ ಅಲ್ಲ, ಸರ್ವವ್ಯಾಪಿ ಕೃಷಿ ಬಿಕ್ಕಟ್ಟು ಗ್ರಾಮೀಣ ಪ್ರದೇಶಗಳಲ್ಲಿ ಜೀವನ ಪರಿಸ್ಥಿತಿಗಳನ್ನು ಶೋಚನೀಯಗೊಳಿಸಿದೆ. ಹಸಿವಿನಿಂದ ಸಾವುಗಳ ವರದಿಗಳು ಹೆಚ್ಚುತ್ತಿರುವುದು ಅತ್ಯಂತ ಆತಂಕಕಾರಿ ಎಂದು ಎಡಪಕ್ಷಗಳು ಹೇಳಿವೆ.

ಇವೆಲ್ಲವೂ ಈ ಸರಕಾರದ ಧೋರಣೆಗಳು ಸಾಮಾನ್ಯ ಶ್ರಮಜೀವಿ ಜನಗಳ ಹಿತಗಳನ್ನು ಬಲಿಗೊಟ್ಟು ಜಾಗತಿಕ ಮತ್ತು ಸ್ಥಳೀಯ ಕಾರ್ಪೊರೇಟ್‌ಗಳು ಮತ್ತು ಆಳುವ ವರ್ಗಗಳ ಸೇವೆ ಮಾಡುವ ಉದ್ದೇಶ ಹೊಂದಿವೆ ಎಂಬುದನ್ನು ಸಾಬೀತು ಪಡಿಸಿವೆ.

ಈ ಹಿನ್ನೆಲೆಯಲ್ಲಿ ಎಡಪಕ್ಷಗಳು ನವಂಬರ್ 8ನ್ನು 'ಪ್ರತಿಭಟನಾದಿನ'ವಾಗಿ ಆಚರಿಸಲು ನಿರ್ಧರಿಸಿವೆ. ಪ್ರತಿಭಟನೆಯ ಸ್ವರೂಪಗಳನ್ನು ದೇಶಾದ್ಯಂತ ಎಡಪಕ್ಷಗಳ ಸಂಬಂಧಪಟ್ಟ ರಾಜ್ಯಸಮಿತಿಗಳು ನಿರ್ಧರಿಸುತ್ತವೆ.

ತಕ್ಷಣವೇ ಮೋದಿ ಸರಕಾರ 2014ರಲ್ಲಿ ನೀಡಿದ ಆಶ್ವಾಸನೆಗಳನ್ನು, ಕೃಷಿ ಸಾಲಗಳ ಮನ್ನಾ, ಕನಿಷ್ಟ ಬೆಂಬಲ ಬೆಲೆಗಳನ್ನು ಉತ್ಪಾದನಾ ವೆಚ್ಚದ ಒಂದೂವರೆ ಪಟ್ಟಿನ ಮಟ್ಟಗಳಿಗೆ ಏರಿಸುವುದು ಮತ್ತು ಪ್ರತಿ ವರ್ಷ 2ಕೋಟಿ, ಅಂದರೆ ಈ ಸರಕಾರದ ಅಧಿಕಾರಾವಧಿಯಲ್ಲಿ 10 ಕೋಟಿ ಉದ್ಯೋಗಾವಕಾಶಗಳ ನಿರ್ಮಾಣದ ಆಶ್ವಾಸನೆಗಳನ್ನು ಜಾರಿಗೆ ತರಬೇಕು ಎಂದು ಎಡಪಕ್ಷಗಳು ಆಗ್ರಹಿಸಿವೆ.

ಎಲ್ಲ ಜನತೆ ಮುಂದೆ ಬಂದು ಈ ಸರಕಾರ ಮತ್ತು ಅದು ಹೊರಿಸುತ್ತಿರುವ ಸಂಕಟಗಳ ವಿರುದ್ಧ ಬಲವಾದ ಪ್ರತಿಭಟನೆಯನ್ನು ದಾಖಲಿಸಬೇಕು ಎಂದು ಎಡಪಕ್ಷಗಳು ಮನವಿ ಮಾಡಿಕೊಂಡಿವೆ. ಈ ಪ್ರತಿಭಟನಾ ಕಾರ್ಯಾಚರಣೆಯಲ್ಲಿ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಮನಸ್ಸಿನ ಜನಗಳು ಮತ್ತು ಪಕ್ಷಗಳು ಸೇರಿಕೊಳ್ಳಬೇಕು ಎಂದೂ ಎಡಪಕಗಳು ಮನವಿ ಮಾಡಿಕೊಂಡಿವೆ.

ಜನಗಳ ಹೋರಾಟಗಳಿಗೆ ಎಡಪಕ್ಷಗಳ ಬೆಂಬಲ

ಎಡಪಕ್ಷಗಳು ರಾಜಸ್ತಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ಛತ್ತಿಸ್‌ಗಡ ಮುಂತಾದ ರಾಜ್ಯಗಳಲ್ಲಿ ರೈತರು ಬೆಂಬಲ ಬೆಲೆಗಳು ಮತ್ತು ಕೃಷಿ ಸಾಲ ಮನ್ನಾಕ್ಕಾಗಿ ಹೋರಾಟಕ್ಕೆ ಇಳಿದಿರುವುದಕ್ಕೆ ಅವರನ್ನು ಅಭಿನಂದಿಸಿವೆ.

ಕಾರ್ಮಿಕ ಸಂಘಗಳು ಪ್ರಕಟಿಸಿರುವ ನವಂಬರ್ 9ರಿಂದ 11 ರವರೆಗಿನ ಮಹಾಪಡಾವ್ ಕಾರ್ಯಕ್ರಮಕ್ಕೆ, ನವಂಬರ್20ರ ರೈತರ ಪಾರ್ಲಿಮೆಂಟ್ ಚಲೋ ರ್‍ಯಾಲಿ ಮತ್ತು ಜನಪ್ರಿಯ ಹೋರಾಟಗಳ ಜನ ಏಕತಾ ಮತ್ತು ಜನ ಅಧಿಕಾರ್ ಮಂಚ್‌ನ ಹೋರಾಟಗಳಿಗೆ ಎಡಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ. ಮೋದಿ ಸರಕಾರದ ಆರ್ಥಿಕ ಧೋರಣೆಗಳ ವಿಧ್ವಂಸಕಾರಿ ಪರಿಣಾಮಗಳಿಂದ ನರಳುತ್ತಿರುವ ಜನಗಳು ಈ ಪ್ರತಿಭಟನೆಗಳಲ್ಲಿ ಸೇರಿಕೊಳ್ಳಬೇಕು ಎಂದು ಹೇಳಿವೆ.

ರೊಹಿಂಗ್ಯ ನಿರಾಶ್ರಿತರನ್ನು ಸಾವಿನ ದವಡೆಗೆ ಕಳಿಸಬೇಡಿ

ರೊಹಿಂಗ್ಯ ಜನಗಳನ್ನು ನಿರಾಶ್ರಿತರೆಂದು ಪರಿಗಣಿಸಬೇಕು ಎಂದು ಎಡಪಕ್ಷಗಳು ಸರಕಾರಕ್ಕೆ ಕರೆ ನೀಡಿವೆ. ಅವರನ್ನು ಮ್ಯಾನ್ಮರ್‌ಗೆ ಹಿಂದಕ್ಕೆ ಕಳಿಸಬಾರದು, ಏಕೆಂದರೆ ಹಿಂದಕ್ಕೇನಾದರೂ ಕಳಿಸಿದರೆ ಅವರ ಸಾವು ಖಂಡಿತ. ಮ್ಯಾನ್ಮರ್‌ನಲ್ಲಿ ಆಂತರಿಕ ಸಾಮೂಹಿಕ ಹತ್ಯಾಕಾಂಡವನ್ನು ನಿಲ್ಲಿಸಲು ಅಂತರ್‍ರಾಷ್ಟ್ರೀಯ ವೇದಿಕೆಗಳಲ್ಲಿ ಎಲ್ಲ ಸಾಧನಗಳನ್ನು ಬಳಸಬೇಕು, ಇದೊಂದು ಅಂತರ್‍ರಾಷ್ಟ್ರೀಯ ಮಾನವೀಯ ಬಿಕ್ಕಟ್ಟು ಎಂದು ಪರಿಗಣಿಸಿ ವಿಶ್ವಸಂಸ್ಥೆಯನ್ನು ಒಳಗೊಳ್ಳಬೇಕು ಎಂದು ಸರಕಾರವನ್ನು ಎಡಪಕ್ಷಗಳು ಆಗ್ರಹಿಸಿವೆ.

ಜನತೆಯ 2.11 ಲಕ ಕೋಟಿ ರೂ.ಗಳಿಂದ ಕಾರ್ಪೊರೇಟ್ ಸುಸ್ತಿದಾರರಿಗೆ ಕಮಾದಾನ
ಇದು ಅತ್ಯಂತ ಕೆಟ್ಟ ಚಮ್‌ಚಾ ಬಂಡವಾಳಶಾಹಿ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೇಂದ್ರ ಸರಕಾರ ಸಾರ್ವಜನಿಕ ವಲಯದ ಬ್ಯಾಂಕುಗಳ ಮರುಬಂಡವಾಳೀಕರಣಕ್ಕೆ 2.11 ಲಕ್ಷ ಕೋಟಿ ರೂ.ಗಳ ಒಂದು ಭಾರೀ ದೊಡ್ಡ ಮೊತ್ತವನ್ನು ಕೊಡಲು ನಿರ್ಧರಿಸಿದೆ. ಬ್ಯಾಂಕುಗಳ 'ಕಾರ್ಯ ನಿರ್ವಹಿಸದ ಆಸ್ತಿ'ಗಳ ಹೊರೆ ಬೃಹದಾಕಾರ ಪಡೆದಿರುವ ಸಮಯದಲ್ಲಿ ಈ ನಿರ್ಧಾರ ಬಂದಿದೆ. ಬ್ಯಾಂಕುಗಳಿಂದ ಪಡೆದ ದೊಡ್ಡ ಮೊತ್ತದ ಸಾಲಗಳನ್ನು ಹಿಂದಿರುಗಿಸದ ದೊಡ್ಡ ಕಾರ್ಪೊರೇಟ್‌ಗಳಿಂದ ಅವನ್ನು ವಸೂಲು ಮಾಡುವ ಬದಲು ಈ ದೊಡ್ಡ ಸುಸ್ತಿದಾರರಿಗೆ ಸರಕಾರ ಕ್ಷಮಾದಾನ ಮಾಡಿದಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಅಂತರ್‍ರಾಷ್ಟ್ರೀಯ ಸಾಲ ಶ್ರೇಯಾಂಕವನ್ನು ಗುರುತಿಸುವ ಸಂಸ್ಥೆ ಕ್ರಿಸಿಲ್ ಪ್ರಕಾರ ಬ್ಯಾಂಕುಗಳಿಗೆ ಬರಬೇಕಾಗಿರುವ ಸಾಲಬಾಕಿ ಮತ್ತು ಬಡ್ಡಿಯ ಮೊತ್ತ 11.5 ಲಕ್ಷ ಕೋಟಿ ರೂ.ಗಳಷ್ಟಿದೆ.

ಈ ಬಿಜೆಪಿ ಸರಕಾರ ಕಳೆದ ಈ ಮೂರು ವರ್ಷಗಳಲ್ಲಿ ಸುಮಾರು 2 ಲಕ್ಷ ಕೋಟಿ ರೂ. ಗಳಷ್ಟು ಸಾಲಗಳನ್ನು ಲೆಕ್ಕದಿಂದ ತೆಗೆದಿದೆ. ಈಗ ಕಾರ್ಪೊರೇಟ್‌ಗಳಿಗೆ ಮಹಾ ರಿಯಾಯ್ತಿಯನ್ನು ಕೊಡಮಾಡಲು ಈ ರೀತಿ ಮರುಬಂಡವಾಳೀಕರಣಕ್ಕೆ ಸಾರ್ವಜನಿಕ ನಿಧಿಯನ್ನು ಅದು ಬಳಸುತ್ತಿದೆ.

ಅಂದರೆ ಕಾರ್ಪೊರೇಟ್‌ಗಳು ಲೂಟಿ ಹೊಡೆದ ಬ್ಯಾಂಕುಗಳನ್ನು ಭಾರತೀಯ ಜನತೆಯ ಹಣದಿಂದ ಬಚಾವ್ ಮಾಡಿದಂತಾಗಿದೆ ಎಂದಿರುವ ಸಿಪಿಐ(ಎಂ) ಇದಕ್ಕಿಂತ ಕೆಟ್ಟ ಚಮ್‌ಚಾ ಬಂಡವಾಳಶಾಹಿ ಸಾಧ್ಯವೇ ಎಂದು ಖಾರವಾಗಿ ಪ್ರಶ್ನಿಸಿದೆ. ಕೃಷಿ ಸಂಕಟದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರಿಗೆ ಸಾಲಮನ್ನಾವನ್ನು ನಿರಾಕರಿಸುತ್ತಿರುವಾಗಲೇ ಕೋಟ್ಯಂತರ ಭಾರತೀಯರು ಠೇವಣಿಯಿಟ್ಟ ಹಣದಿಂದ ಪಡೆದ ಸಾಲವನ್ನು ಹಿಂದಿರುಗಿಸದೆ ಓಡಿಹೋಗುತ್ತಿರುವ ಕಾರ್ಪೊರೇಟ್ ಮಂದಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಅದು ಹೇಳಿದೆ.

ಈ ಮರುಬಂಡವಾಳೀಕರಣಕ್ಕೆ ಹಣಕಾಸು ಮಂತ್ರಿಗಳು ಕೊಟ್ಟಿರುವ ತರ್ಕವೆಂದರೆ, ಈ ರೀತಿ ಬ್ಯಾಂಕುಗಳ ಮರುಬಂಡವಾಳೀಕರಣ ನಡೆದರೆ ಅವು ಕಾರ್ಪೊರೇಟ್‌ಗಳಿಗೆ ಇನ್ನಷ್ಟು ಸಾಲಗಳನ್ನು ಕೊಡಲು ಅವಕಾಶವಾಗುತ್ತದೆ, ಇದರಿಂದ ಉದ್ಯೋಗಾವಕಾಶಗಳು ಮತ್ತು ಆರ್ಥಿಕದ ಬೆಳವಣಿಗೆ ನಡೆಯುತ್ತದೆ ಎಂಬುದು. ಆದರೆ ಇದೊಂದು ದೋಷಪೂರಿತ ತರ್ಕ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಏಕೆಂದರೆ ಹೂಡಿಕೆ ಹೆಚ್ಚುವುದರಿಂದ ತಂತಾನೇ ಉದ್ಯೋಗಾವಕಾಶಗಳೇನೂ ಹೆಚ್ಚುವುದಿಲ್ಲ, ಬೆಳವಣಿಗೆ ದರಗಳೂ ಏರುವುದಿಲ್ಲ. ಇದು ಸಾಧ್ಯವಾಗಬೇಕಾದರೆ ಈ ಹೂಡಿಕೆಗಳಿಂದ ಆದ ಉತ್ಪಾದನೆಗಳ ಮಾರಾಟ ನಡೆಯಬೇಕು. ವ್ಯಾಪಾರ ಸಂಕುಚನಗೊಳ್ಳುತ್ತಿರುವ ಜಗತ್ತಿನಲ್ಲಿ ಭಾರತದ ರಫ್ತು ಇಪ್ಪತ್ತು ವರ್ಷಗಳಲ್ಲಿ ಕಾಣದ ಮಟ್ಟಕ್ಕೆ ಕುಸಿದಿವೆ. ನೋಟುರದ್ಧತಿ ಮತ್ತು ಜಿಎಸ್‌ಟಿಯಿಂದಾಗಿ ಭಾರತೀಯ ಜನತೆಯ ಕೊಳ್ಳುವ ಶಕ್ತಿ ಗಮನಾರ್ಹವಾಗಿ ಕ್ಷೀಣಗೊಂಡಿದೆ, ಅದ–ರಿಂದಾಗಿ ಆಂತರಿಕ ಬೇಡಿಕೆಗಳು ತೀವ್ರ ಪ್ರಮಾಣದಲ್ಲಿ ಕುಸಿಯುತ್ತಿವೆ. ಇಂತಹ ಸನ್ನಿವೇಶದಲ್ಲಿ ಹಣಕಾಸು ಮಂತ್ರಿಗಳ ತರ್ಕ ಖಂಡಿತಾ ಈಡೇರುವಂತದ್ದಲ್ಲ ಎಂದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಜನಗಳನ್ನು ಆರ್ಥಿಕವಾಗಿ ಸಬಲೀಕರಿಸದೆ, ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸದೆ ಆರ್ಥಿಕ ಬೆಳವಣಿಗೆಯಾಗಲೀ ಸಂಕಟಗ್ರಸ್ತ ಜನಗಳಿಗೆ ಪರಿಹಾರವಾಗಲೀ ಸಾಧ್ಯವಿಲ್ಲ. ಇದು ದೊಡ್ಡ ಪ್ರಮಾಣದ ಸಾರ್ವಜನಿಕ ಹೂಡಿಕೆಗಳ ಮೂಲಕ ನಮ್ಮ ಬಹಳ ಅಗತ್ಯವಾಗಿರುವ ಮೂಲರಚನೆಗಳನ್ನು ಕಟ್ಟುವ ಮೂಲಕ ಮತ್ತು ನಮ್ಮ ಯುವಜನರಿಗೆ ಬೃಹತ್ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಮೂಲಕ ಮಾತ್ರವೇ ಸಾಧ್ಯ.

ಆದರೆ ಈ ಸರಕಾರ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಆಣತಿಯನನ್ನುಸರಿಸಿ ವಿದೇಶಿ ಮತ್ತು ಭಾರತೀಯ ಕಾರ್ಪೊರೇಟ್‌ಗಳನ್ನಷ್ಟೇ ಪ್ರೋತ್ಸಾಹಿಸುವ ನವ–ಉದಾರವಾದಿ ಧೋರಣೆಗಳನ್ನು ಅನುಸರಿಸಿ ನಮ್ಮ ಬಹುಪಾಲು ಜನಗಳ ಮೇಲೆ ಮತ್ತಷ್ಟು ಹೊರೆಗಳನ್ನು ಹೇರುವ ಮಾರ್ಗವನ್ನೇ ಹಿಡಿದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ,ಸರಕಾರ ತಕ್ಷಣವೇ ತಮ್ಮ ಸಾಲಗಳನ್ನು ಹಿಂದಿರುಗಿಸದೆ ಬಾಕಿ ಮಾಡುತ್ತಿರುವ ಕಾರ್ಪೊರೇಟ್‌ಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಆಗ್ರಹಿಸಿದೆ. ಕಾರ್ಪೊರೇಟ್ ಲೂಟಿಯನ್ನು ರಕ್ಷಿಸಲು ಜನತೆ ಹಣ ತೆರಬೇಕು ಎಂದು ಕೇಳಲು ಸಾಧ್ಯವಿಲ್ಲ ಎಂದು ಅದು ಹೇಳಿದೆ.

ಸಿಪಿಸಿ 19ನೇ ಮಹಾಧಿವೇಶನ–ಕ್ಸಿ ಜಿನ್ಪಿಂಗ್‌ರವರ ಮರು ಆಯ್ಕೆಗೆ ಸಿಪಿಐ(ಎಂ) ಶುಭಾಶಯ

ಚೀನಾ ಕಮುನಿಸ್ಟ್ ಪಕ್ಷದ 19ನೇ ಮಹಾಧಿವೇಶನ ಮುಕ್ತಾಯವಾಗಿದ್ದು ಕ್ಸಿ ಜಿನ್ಪಿಂಗ್ ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆಗೊಂಡಿದ್ದಾರೆ. ಇದಕ್ಕೆ ಸಿಪಿಐ(ಎಂ) ಕೇಂದ್ರಸಮಿತಿಯ ಪರವಾಗಿ ಕಳಿಸಿರುವ ಶುಭಾಶಯ ಸಂದೇಶದಲ್ಲಿ ಸೀತಾರಾಮ್ ಯೆಚುರಿಯವರು ಈ ಮಹಾಧಿವೇಶನ ಚೀನೀ ಗುಣಲಕ್ಷಣಗಳಿರುವ ಸಮಾಜವಾದದ ದಾರಿ, ಸಿದ್ಧಾಂತ, ವ್ಯವಸ್ಥೆ ಮತ್ತು ಸಂಸ್ಕೃತಿಯಲ್ಲಿ ಸಮಸ್ತ ಚೀನೀ ಜನತೆಯ ವಿಶ್ವಾಸವನ್ನು ಬಲಗೊಳಿಸುವ ಒಂದು ಮೈಲಿಗಲ್ಲಾಗುವ ನಿರ್ಣಯವನ್ನು ಕೈಗೊಂಡಿದೆ ಎಂದಿದ್ದಾರೆ.

ತಕ್ಕ ಮಟ್ಟಿಗೆ ಮುಂದುವರೆದ ಸಮಾಜವೊಂದರ ನಿರ್ಮಾಣ, ಸುಧಾರಣೆಗಳನ್ನು ಆಳಗೊಳಿಸುವುದು, ಕಾನೂನಿನ ಆಳ್ವಿಕೆ ಮತ್ತು ಕಟ್ಟುನಿಟ್ಟಾದ ಪಕ್ಷದ ಆಳಿಕೆಯನ್ನು ಬಲಪಡಿಸುವುದು – ಈ 'ನಾಲ್ಕು ಸಮಗ್ರಗಳ' ಸಿದ್ಧಾಂತ ಎಲ್ಲ ಅನ್ಯ ಪ್ರವೃತ್ತಿಗಳ ವಿರುದ್ಧ ಸೆಣಸುತ್ತಲೇ ಚೀನೀ ಗುಣಲಕ್ಷಣಗಳಿರುವ ಸಮಾಜವಾದವನ್ನು ಇನ್ನಷ್ಟು ಬಲಪಡಿಸುವುದರ ಮೇಲೆ ಆಳವಾದ ಪ್ರಭಾವ ಬೀರುತ್ತದೆ ಎನ್ನುತ್ತ ಯೆಚುರಿಯವರು ಈ ಚಾರಿತ್ರಿಕ ಸಂದರ್ಭದಲ್ಲಿ ಜಿಂಗ್ಪಿಂಗ್‌ರವರಿಗೆ ಪ್ರಧಾನ ಕಾರ್ಯದರ್ಶಿಯಾಗಿ ಸಮಸ್ತ ಯಶಸ್ಸು ಸಿಗಲಿ ಎಂದು ಹಾರೈಸಿದ್ದಾರೆ.

ಟಿಪ್ಪು ಜಯಂತಿ ಆಚರಿಸಬೇಕು. ಹೇಗೆ?

ಸಂಪಾದಕೀಯ

ಟಿಪ್ಪು ಜಯಂತಿ ಮತ್ತೆ ಬಂದಿದೆ. ಅದೂ ಕರ್ನಾಟಕ ವಿಧಾನಸಭೆ ಚುನಾವಣೆಗಳ ಕೆಲವು ತಿಂಗಳುಗಳ ಮೊದಲು ಬಂದಿದೆ. ಟಿಪ್ಪು ಮತ್ತೆ ಕಾಂಗ್ರೆಸ್–ಬಿಜೆಪಿಗಳ "ವೋಟು–ಬ್ಯಾಂಕ್" ರಾಜಕೀಯಕ್ಕೆ ಬಲಿಯಾಗುತ್ತಿದ್ದಾನೆ. ಬಿಜೆಪಿ–ಆರೆಸ್ಸೆಸ್ ಯಥಾಪ್ರಕಾರ ಟಿಪ್ಪು ಸುಲ್ತಾನ್ ನನ್ನು ಕೋಮುವಾದಿ ಸಂಕಥನದಲ್ಲಿ ಬಂಧಿಸಲು, ಕೋಮು ಉನ್ಮಾದ ಕೆರಳಿಸಲು, ಕೋಮು ಧ್ರುವೀಕರಣ ಸಾಧಿಸಲು, ಕೋಮುಗಲಭೆ ಸೃಷ್ಟಿಸಲು ಶತಪ್ರಯತ್ನಗಳನ್ನು ಮಾಡುತ್ತಿದೆ. ಕಾಂಗ್ರೆಸ್ ಪಕ್ಷ ಮತ್ತು ಸರಕಾರ ಬಿಜೆಪಿ–ಆರೆಸ್ಸೆಸ್ ನ ಆಕ್ರಾಮಕ ನೀತಿ ಎದುರಿಸಲು ಯಾವುದೇ ವ್ಯೂಹ ರಚಿಸಿದಂತಿಲ್ಲ. ಯಥಾ ಪ್ರಕಾರ ಸರಕಾರಿ ಒಣ ಆಚರಣೆ, ರಾಜಕೀಯ ಲೆಕ್ಕಾಚಾರದ ಮೇಲಿನ ಕೆಸರಾಟ ಬಿಟ್ಟು ಬೇರೇನೂ ಯೋಜಿಸಿದಂತಿಲ್ಲ.

ಈ ಬಾರಿ ಟಿಪ್ಪು ಜಯಂತಿ ನೆಪದಲ್ಲಿ ಬಿಜೆಪಿಯ ಕೋಮು ರಾಜಕಾರಣದ ಮಟ್ಟ ಇನ್ನಷ್ಟು ಕೆಳಗೆ ಹೋಗಿದೆ. ಇನ್ನಷ್ಟು ಹೀನಾಯವಾಗಿದೆ. 'ದಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್ ಕಾದಂಬರಿಯನ್ನು ಆಧರಿಸಿ ಸಂಜಯ್ ಖಾನ್ ಧಾರಾವಾಹಿ ನಿರ್ಮಿ ಸಿದ್ದರು. ಅವರ ಸೆಟ್ಗೆ ಬೆಂಕಿ ಬಿದ್ದು ಚಿತ್ರ ಸಾಮ್ರಾಜ್ಯವೇ ನಾಶವಾಗಿತ್ತು. ಉದ್ಯಮಿ ವಿಜಯ್ ಮಲ್ಯ ಟಿಪ್ಪುವಿನ ಖಡ್ಗ ಖರೀದಿಸಿದ್ದರು. ಬಳಿಕ ಅವರ ವ್ಯವಹಾರವೇ ಬಿದ್ದು ಹೋಯಿತು. ಸಿದ್ದರಾಮಯ್ಯ ಅವರು ಟಿಪ್ಪು ಜಯಂತಿ ಆಚರಿಸುತ್ತಿದ್ದು, ಆರು ತಿಂಗಳಲ್ಲಿ ಅವರ ರಾಜಕೀಯ ಸಾಮ್ರಾಜ್ಯ ಪತನ ಹೊಂದಲಿದೆ' ಎಂದು ಅ–ಸಂಸದೀಯ ಸಂಸದ ಪ್ರತಾಪ್ ಸಿಂಹ ತಮ್ಮ ಉದ್ಧಟತನ ಮಾತ್ರವಲ್ಲ, ಭೀಕರ ಮೌಢ್ಯವನ್ನು ತೋರಿಸಿ 'ಬೆತ್ತಲಾಗಿದ್ದಾರೆ". ಇನ್ನೊಬ್ಬ ಅ–ಸಂಸದೀಯ ಸಂಸದ ಮತ್ತು ಕೇಂದ್ರ ಮಂತ್ರಿ ಅನಂತ ಹೆಗಡೆ ತನ್ನ ಹೆಸರನ್ನು ಟಿಪ್ಪು ಜಯಂತಿ ಆಮಂತ್ರಣ ಪತ್ರಿಕೆಗಳಲ್ಲಿ ಹಾಕಬೇಡಿ. ಹಾಕಿದರೆ ಟಿಪ್ಪು ಸುಲ್ತಾನ್ ಬಗ್ಗೆ ನನ್ನ ಅಭಿಪ್ರಾಯ (ಅಂದರೆ ಅತ್ಯಂತ ಅಸಂಸದೀಯ ಭಾಷೆಯಲ್ಲಿ ಹಳಿದು) ಹೇಳಿ ವಾಕೌಟ್ ಮಾಡುತ್ತೇನೆ. ತಾಕತ್ತಿದ್ದರೆ ನನ್ನ ಹೆಸರು ಹಾಕಿ ಎಂದು ತೊಡೆ ತಟ್ಟಿದ್ದಾರೆ. ತಮ್ಮ ಹೊಸ ಕೇಂದ್ರೀಯ ನಾಯಕರ ಬೆದರಿಕೆಯನ್ನು ಮಂಗಳೂರು ಮತ್ತು ಉಡುಪಿ ಸಂಸದರಾದ ನಳಿನ್ ಕಟೀಲ್ ಮತ್ತು ಶೋಭಾ ಕರಂದ್ಲಾಜೆ ಸಹ ಮಾರ್ದನಿಸಿದ್ದಾರೆ.

'ವಿವಾದಿತ ವ್ಯಕ್ತಿಯಾದ ಟಿಪ್ಪುವಿನ ಜಯಂತಿ ಆಚರಣೆ ಮಾಡಲು ರಾಜ್ಯ ಸರ್ಕಾರ ಹೊರಟಿರುವುದು ಅಪರಾಧ. ಇಂತಹ ಜಯಂತಿ ಆಚರಿಸುವವರನ್ನು ಗಲ್ಲಿಗೇರಿಸಬೇಕು' ಎಂದು ಕೊಡಗಿನ ಟಿಪ್ಪು ಜಯಂತಿ ವಿರೋಧಿ ಹೋರಾಟ ಸಮಿತಿಯ ಸಂಚಾಲಕ ಅದ್ದಂಡ ಕಾರ್ಯಪ್ಪ ಅಪ್ಪಣೆ ಕೊಡಿಸಿದ್ದಾರೆ. 'ಕೊಡವರ ಮನೆಗಳ ನಾಯಿಗಳಿಗೆ ಟಿಪ್ಪುವಿನ ಹೆಸರು ಇಡಲಾಗಿದೆ. ಮುಸ್ಲಿಮರು ನಾಯಿಗಳನ್ನು ಮುಟ್ಟು ವುದಿಲ್ಲ. ನಾಯಿ ಕಂಡರೆ ಅವರಿಗೆ ಆಗುವುದಿಲ್ಲ. ಹೀಗಾಗಿ ಟಿಪ್ಪುವಿಗೆ ಅಪಮಾನ ಮಾಡುವ ಉದ್ದೇಶದಿಂದ ನಾಯಿಗಳಿಗೆ ಈ ಹೆಸರು ಇಟ್ಟಿದ್ದೇವೆ' ಎಂದು ಅತ್ಯಂತ ಕೀಳು ಮಟ್ಟಕ್ಕೆ ಇಳಿದಿದ್ದಾರೆ. ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಡಿ.ಎಸ್.ವೀರಯ್ಯ, 'ಮಲ ಹೊರುವ ಪದ್ಧತಿಯನ್ನು ಜಾರಿ ಗೊಳಿಸಿದ್ದೇ ಟಿಪ್ಪು. ಬಹುಪತ್ನಿಯರ ಮಲವನ್ನು ಎತ್ತಲು ಆತ ಕೈದಿಗಳನ್ನು ಬಳಕೆ ಮಾಡಿ ಕೊಂಡಿದ್ದ. ಅದು ಅಸ್ಪೃಶ್ಯತೆಯಾಗಿ ಬೆಳೆಯಿತು' ಎಂದು ಅಸ್ಪೃಶ್ಯತೆಯ ಮೂಲದ ಬಗ್ಗೆ ಹೊಸ ಅಸಂಬದ್ಧ ಥಿಯರಿ ಕಾರಿಕೊಂಡಿದ್ದಾರೆ. ಇದಲ್ಲದೆ ಮದಕರಿ ನಾಯಕನ ಹೆಸರಲ್ಲಿ, ಒನಕೆ ಓಬವ್ವ ಹೆಸರಲ್ಲಿ ಆಯಾ ಸಮುದಾಯಗಳನ್ನು ಪ್ರಚೋದಿಸುವ ಪ್ರಯತ್ನ ಮಾಡಲಾಗುತ್ತಿದೆ. ಜಿಲ್ಲಾ ಕೇಂದ್ರಗಳಲ್ಲಿ ಒನಕೆ ಪ್ರತಿಭಟನೆ, ಕಪ್ಪು ಬಾವುಟ ಪ್ರದರ್ಶನ ಹಾಗೂ ಪಂಜಿನ ಮೆರವಣಿಗೆ ಯೋಜಿಸಲಾಗಿದೆ. ನವೆಂಬರ್ 2ರಂದು ಆರಂಭವಾಗುವ ಬಿಜೆಪಿಯ ಚುನಾವಣಾ ಜಾಥಾ, ಬೈಕ್ ರ್ಯಾಲಿಗಳನ್ನೂ ಇದರ ಜತೆ ಸೇರಿಸಿ ಕೋಮು ಗಲಭೆ ಸೃಷ್ಟಿಸುವ ಪ್ರಯತ್ನ ನಡೆದಿದೆ.

ಬಿಜೆಪಿಯ ಟಿಪ್ಪು ಜಯಂತಿ ಕೋಮು ರಾಜಕಾರಣ ಈ ಬಾರಿ ಕೆಲವು ಮುಜುಗರ ಹಿನ್ನಡೆಗಳನ್ನೂ ಅನುಭವಿಸಿದೆ. ವಿಧಾನ ಸಭೆಯ ವಜ್ರ ಮಹೋತ್ಸವದ ಭಾಷಣದಲ್ಲಿ ರಾಷ್ಟ್ರಪತಿ ಕೊವಿಂದ್ ಅವರು "ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಟಿಪ್ಪು ಸುಲ್ತಾನ್ ಮುಂಚೂಣಿಯಲ್ಲಿದ್ದರು. ರಾಜ್ಯವನ್ನು ಅವರು ಅಭಿವೃದ್ಧಿಯ ಪಥದತ್ತ ಕೊಂಡೊಯ್ದಿದ್ದರು. ಯುದ್ಧದಲ್ಲಿ ಟಿಪ್ಪು ಸುಲ್ತಾನ್ ರಾಕೆಟ್'ಗಳನ್ನು ಬಳಕೆ ಮಾಡಿದ್ದರು. ಟಿಪ್ಪುವಿನ ರಾಕೆಟ್ ತಂತ್ರಜ್ಞಾನವನ್ನು ಯೂರೋಪಿಯನ್ನರು ಅಳವಡಿಸಿಕೊಂಡರು" ಎಂದು ಕೊಂಡಾಡಿದ್ದು ಬಿಜೆಪಿಗೆ ಮುಜುಗರ ತಂದಿದೆ. ರಾಷ್ಟ್ರಪತಿ ರಾಮ್ನಾಥ್ ಕೋವಿಂದ್ ಅವರಿಗೆ ರಾಜ್ಯ ಸರ್ಕಾರವೇ ಭಾಷಣ ಬರೆದು ಕೊಟ್ಟಿದೆ ಎಂದು ತಮ್ಮ ಮುಜುಗರ ಮುಚ್ಚಿಕೊಳ್ಳಲು ಕೆಲವು ಬಿಜೆಪಿ ನಾಯಕರ ಸ್ಪಷ್ಟಿಕರಣಕ್ಕೆ ಮುಖ್ಯಮಂತ್ರಿಯವರ ತೀಕ್ಷ್ಣ ಪ್ರತಿಕ್ರಿಯೆ, ಮಾಧ್ಯಮಗಳಲ್ಲಿ ಮತ್ತು ಸಾರ್ವಜನಿಕರಿಂದ ಬಂದ ಪ್ರತಿಕ್ರಿಯೆ ಬಿಜೆಪಿಯ ಮುಜುಗರವನ್ನು ಇನ್ನಷ್ಟು ಹೆಚ್ಚಿಸಿದೆ. ಆದರೂ ಇದಕ್ಕೆ ಪ್ರತಿಕ್ರಿಯೆಯಾಗಿ ಸಂಸದ ಪ್ರತಾಪ ಸಿಂಹ ತಮ್ಮ ಟಿಪ್ಪು ಬಗೆಗಿನ ಚರಿತ್ರೆಯ ಅಜ್ಞಾನವನ್ನು ರಾಷ್ಟ್ರಪತಿ ಅವರ ಮೇಲೆ ಟ್ವಿಟರ್ ಮೂಲಕ ಸಾರ್ವಜನಿಕವಾಗಿ ಹೇರುವ ಅಸಹ್ಯಕರ ಪ್ರಯತ್ನ, ಸಾಮಾಜಿಕ ಮಾಧ್ಯಮಗಳಲ್ಲಿ ಇನ್ನಷ್ಟು ಅಪಹಾಸ್ಯಕ್ಕೆ ಈಡಾಯಿತು. ಇದಕ್ಕಿಂತ ಮೊದಲೇ ಹಿಂದೆ ಟಿಪ್ಪು ಸುಲ್ತಾನ್ ಧರಿಸುತ್ತಿದ್ದ ಮಾದರಿಯ ಪೇಟ, ಖಡ್ಗ ಹಿಡಿದು ಕಾಣಿಸಿಕೊಂಡಿದ್ದ ಬಿಜೆಪಿ ನಾಯಕರ ಭಾವಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ, ವಿಧಾನಸಭೆ ವಿರೋಧ ಪಕ್ಷದ ನಾಯಕ ಜಗದೀಶ ಶೆಟ್ಟರ್, ಶಾಸಕ ಆರ್. ಅಶೋಕ್, ಸಂಸದರಾದ ಶೋಭಾ ಕರಂದ್ಲಾಜೆ, ಪಿ.ಸಿ. ಮೋಹನ್ ಟಿಪ್ಪು ಜಯಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ಚಿತ್ರಗಳು, ಹೇಳಿಕೆಗಳು ಫೇಸ್ ಬುಕ್ ಮತ್ತು ವಾಟ್ಸ್ ಆ್ಯಪ್ ಗ್ರೂಪ್ಗಳಲ್ಲಿ ಹರಿದಾಡಿ ಬಿಜೆಪಿ ಅಪಹಾಸ್ಯಕ್ಕೆ ತುತ್ತಾಗಿದೆ.

ಈ ಹಿನ್ನೆಲೆಯಲ್ಲಿ ಸರಕಾರಿ ಸಮಾರಂಭಗಳ ಜತೆ ಗುರುತಿಸಿಕೊಳ್ಳದೆ, ಕಾಂಗ್ರೆಸಿನ ರಾಜಕೀಯ ಕೆಸರಾಟದಿಂದ ದೂರ ನಿಂತು ಸ್ವತಂತ್ರ ಪ್ರಚಾರದ ಮೂಲಕ ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಟಿಪ್ಪು ಸುಲ್ತಾನ್ ವಿಶಿಷ್ಟ ವ್ಯಕ್ತಿತ್ವವನ್ನು ಎತ್ತಿ ಹಿಡಿಯಬೇಕಾಗಿದೆ. ಟಿಪ್ಪು ಸುಲ್ತಾನ್ ಒಬ್ಬ ದೇಶಪ್ರೇಮಿ, ಬ್ರಿಟಿಶ್ ವಸಾಹತಶಾಹಿ–ವಿರೋಧಿ, ಪ್ರಗತಿಪರ, ಆಧುನಿಕ ಅಭಿವೃದ್ಧಿಯ ಹರಿಕಾರನಾದ ರಾಜ ಎಂಬ ಅಂಶವನ್ನು ಒತ್ತಿ ಹೇಳಬೇಕಾಗಿದೆ. ಆತ ಬ್ರಿಟಿಶರಿಗೆ ಸಿಂಹಸ್ವಪ್ನವಾಗಿದ್ದು, ಅವರಿಗೆ ಕೊನೆವರೆಗೂ ಪ್ರತಿರೋಧ ಒಡ್ಡಿದ ದೇಶಪ್ರೇಮಿ ಎಂದು ಅದಕ್ಕೆ ಸಂಬಂಧಪಟ್ಟ ಇತಿಹಾಸದ ಪ್ರಕರಣಗಳೊಂದಿಗೆ ಒತ್ತಿ ಹೇಳಬೇಕಾಗಿದೆ. ಬಿಜೆಪಿ–ಆರೆಸ್ಸೆಸ್ ಬ್ರಿಟಿಶ್ ವಸಾಹತಶಾಹಿ ಪರವಿದ್ದು ಅವರ ಜತೆ ಶಾಮೀಲಾಗಿದ್ದರಿಂದಾಗಿ ಟಿಪ್ಪುವನ್ನು ವಿರೋಧಿಸುತ್ತದೆ. ಬ್ರಿಟಿಶರ ಜತೆ ಶಾಮೀಲಾಗಿ ಟಿಪ್ಪು ಮತ್ತು ಮೈಸೂರು ರಾಜ್ಯಕ್ಕೆ ದ್ರೋಹ ಬಗೆದ ಪೂರ್ಣಯ್ಯ ಮತ್ತು ಮೀರ್ ಸಾದಿಕ್, ಇನ್ನೊಂದು ಕಡೆ ಮರಾಠಾ, ಹೈದರಾಬಾದ್ ನಿಜಾಮರನ್ನು ಏಕೆ ಅದು "ದೇಶದ್ರೋಹಿ"ಗಳೆಂದು ಕರೆಯುವುದಿಲ್ಲ ಎಂದು ಕೇಳಬೇಕಾಗಿದೆ. ಏಕೆಂದರೆ ಆರೆಸ್ಸೆಸ್ ಸ್ವಾತಂತ್ರ್ಯ ಚಳುವಳಿಯ ಉದ್ದಕ್ಕೂ ಮಾಡಿದ್ದು ಇದನ್ನೇ. ಅದರ ಕೋಮುವಾದಿ ಇತಿಹಾಸಕ್ಕೆ ತಾಳೆಯಾಗದಿರುವುದರಿಂದ ಅದು ಟಿಪ್ಪು ಸುಲ್ತಾನ್ ವಿರುದ್ಧ ಕತ್ತಿ ಮಸೆಯುತ್ತಿದೆ. ಮೈಸೂರು ಪ್ರದೇಶ ಪ್ರಗತಿಪರ ಅಭಿವೃದ್ಧ ರಾಜ್ಯ ಎಂದು ಇವತ್ತು ಬಿಂಬಿತವಾಗಲು ಅಗತ್ಯ ಅಡಿಪಾಯ ಹಾಕಿದ್ದು ಟಿಪ್ಪು ಎಂದು ನೆನಪಿಸಬೇಕಾಗಿದೆ. ಲಾಲ್ ಬಾಗ್, ರೇಷ್ಮೆ, ರೈತ–ಪರವಿದ್ದ ಕೃಷಿ ಕಂದಾಯ ಮತ್ತಿತರ ಆಡಳಿತ ಸುಧಾರಣೆಗಳು ಟಿಪ್ಪು ಕೊಡುಗೆ ಎಂದು ಆತನ ಸಕಾರಾತ್ಮಕ ವಿಶಿಷ್ಟ ಕೊಡುಗೆಗಳನ್ನು ನೆನಪಿಸಬೇಕು. ಟಿಪ್ಪು ಮತಾಂಧನಲ್ಲ, ಮತಸಹಿಷ್ಣು ಆಗಿದ್ದ ಎಂದೂ ಸಂಬಂಧಪಟ್ಟ ಇತಿಹಾಸದ ಪ್ರಕರಣಗಳೊಂದಿಗೆ ತಿಳಿಸಬೇಕಾಗಿದೆ.

ಅದೇ ಸಮಯದಲ್ಲಿ ಟಿಪ್ಪುವನ್ನು ವೈಭವೀಕರಿಸುವ ಅಗತ್ಯವಿಲ್ಲ. ಆತ 18ನೇ ಶತಮಾನದ ರಾಜನಾಗಿ ಸಾಮ್ರಾಜ್ಯ ವಿಸ್ತರಣೆಯ ದಾಹದಿಂದ, ರಾಜ್ಯೊಳಗಿನ ಹೊರಗಿನ ವಿರೋಧ– ಪಿತೂರಿಗಳನ್ನು ಕ್ರೂರವಾಗಿ ಹಿಂಸಾತ್ಮಕವಾಗಿ ದಮನ ಮಾಡಿರಬಹುದು. ಟಿಪ್ಪುವಿಗೆ ವಿರುದ್ಧವಾಗಿದ್ದ ಕೊಡವರ, ಮಲಬಾರಿನ ನಾಯರಿಗಳ, ಮಂಗಳೂರಿನ ಕ್ಯಾಥೊಲಿಕರ ದಮನ ಮಾಡಿದ ರೀತಿಯ ಬಗ್ಗೆ ಸಂಘಿ ಪ್ರಚಾರದ ಐತಿಹಾಸಿಕ ಸತ್ಯಾಸತ್ಯತೆಗಳ ಬಗ್ಗೆ ತೀವ್ರ ಅನುಮಾನಗಳು ಇವೆ. ಕೆಲವಕ್ಕೆ ಆಧಾರಗಳೇ ಇಲ್ಲ. ಉಳಿದವು ಟಿಪ್ಪು ವಿರುದ್ಧ ಯುದ್ಧದಲ್ಲಿ ಭಾಗವಹಿಸಿದ ಬ್ರಿಟಿಶರ ಏಕಮುಖಿ ಹೇಳಿಕೆಗಳ ಮೇಲೆ ಆಧರಿಸಿದ್ದು. ಯಾವುದೆ ಸ್ವತಂತ್ರ ಆಧಾರಗಳಿಲ್ಲವೆಂದು ತಿಳಿಸಬೇಕಾಗಿದೆ. ಆದರೆ, ಟಿಪ್ಪು ಮಾಡಿರಬಹುದಾದ ಎಲ್ಲಾ ಕೃತ್ಯಗಳನ್ನು ಸಮರ್ಥಿಸಿಕೊಳ್ಳುವ ಅಗತ್ಯವಿಲ್ಲ. ಟಿಪ್ಪುವಿನ ಮೇಲೆ 19/20ನೇ ಶತಮಾನದ ಪರಿಕಲ್ಪನೆಗಳಾದ ರಾಷ್ಟ್ರೀಯತೆ, ಸೆಕ್ಯುಲರ್ ಮೌಲ್ಯಗಳನ್ನು ಹೇರುವ ಅಗತ್ಯವೂ ಇಲ್ಲ.

ಟಿಪ್ಪು ಜಯಂತಿ ಸಂದರ್ಭದಲ್ಲಿ ಬಿಜೆಪಿ–ಆರೆಸ್ಸೆಸ್ ಗಳ ಕೋಮು ಗಲಭೆ ಸೃಷ್ಟಿಯ ಪ್ರಯತ್ನಗಳ ವಿರುದ್ಧ ಕಟು ಕ್ರಮಕ್ಕೆ ಒತ್ತಾಯ ಮಾಡಬೇಕಾಗಿದೆ.



ನಾಳಿನ ಕಾರ್ಯಕ್ರಮಗಳು

☒ ಭೂಮಿ ಹೋರಾಟ–ಅಹೋರಾತ್ರಿ ಧರಣಿ	– ಅಕ್ಟೋಬರ್ 12–30	☒ ಜನ ಏಕತಾ ಪಂಜಿನ ಮೆರವಣಿಗೆ	ಅಕ್ಟೋಬರ್ 30, ದೇಶದಾದ್ಯಂತ
☒ ಕಾರ್ಮಿಕರ ಮಹಾಪಡಾವ್	ದೆಹಲಿ, ನವೆಂಬರ್ 9–11	☒ ಕಿಸಾನ್ ಸಂಸತ್ ಚಲೋ,	ದೆಹಲಿ, ನವೆಂಬರ್ 20
☒ ಸಿಪಿಐ(ಎಂ) ರಾಜ್ಯ ಸಮ್ಮೇಳನ	ಜನವರಿ 5–8, ಮೂಡಬಿದರೆ	☒ ಸೌಹಾರ್ದ ಕರ್ನಾಟಕ ಮಾನವ ಸರಪಣಿ	ಜನವರಿ 30, ರಾಜ್ಯದಾದ್ಯಂತ

ಹೆಚ್ಚುವರಿ ರೈಲಿಗೆ ಬೈಂದೂರು ಸಿಪಿಐ(ಎಂ) ಆಗ್ರಹ

ಕದಲ್ಲ ಕದಿ

ವಾಸುದೇವ ಉಚ್ಚಿಲ



ಬೆಂಗಳೂರು-ಕಾರವಾರ ನಡುವೆ ಈಗ ರಾತ್ರಿ ಒಂದು ರೈಲು ಮೈಸೂರು-ಹಾಸನ-ಮಂಗಳೂರು ಮಾರ್ಗವಾಗಿ ಸಾಗುತ್ತಿದೆ. ವಾರದ 3 ದಿನಗಳಲ್ಲಿ ಹಗಲು ರೈಲು ಅರಸೀಕೆರೆ-ಹಾಸನ-ಮಂಗಳೂರು ಮಾರ್ಗವಾಗಿ ಸಾಗುತ್ತಿದೆ. ಕಾರವಾರ ಉಡುಪಿಗಳ ಮಧ್ಯೆ ಸಾಕಷ್ಟು ಸಂಖ್ಯೆ ಪ್ರಯಾಣಿಕರಿದ್ದರೂ, ವೇಗರಹಿತ ರೈಲು ಪ್ರಯಾಣದಿಂದಲಾಗಿ ಬೆಂಗಳೂರು-ಕಾರವಾರದ ನಡುವಿನ ಸಂಚಾರ ಅವಧಿ 20 ಗಂಟೆಗಳಿಗೂ ಮೀರುತ್ತದೆ. ಇದರಿಂದಾಗಿ ಕಾರವಾರ ಉಡುಪಿಗಳ ನಡುವಿನ ರೈಲು ಪ್ರಯಾಣಿಕರಿಗೆ ಈ ರೈಲುಗಳು ಕಡಿಮೆ ಪ್ರಯೋಜನಕಾರಿಯಾಗಿವೆ. ಈ ರೈಲು ಸಂಚಾರಗಳ ಮಧ್ಯೆ ಮಂಗಳೂರು ಸೆಂಟ್ರಲ್ ನಿಲ್ದಾಣಕ್ಕೆ ತಲುಪುವ ಕಾರಣದಿಂದಲಾಗಿ ಹೆಚ್ಚಿಗೆ ಸಮಯವನ್ನೂ ತೆಗೆದುಕೊಳ್ಳುತ್ತದೆ. ಮಂಗಳೂರು ಜಂಕ್ಷನ್ ನಿಲ್ದಾಣದಿಂದಲೇ ರೈಲು ತಿರುವು ಪಡೆಯುವುದಾದರೆ ಅನಗತ್ಯ ವಿಳಂಬವನ್ನು ತಪ್ಪಿಸಬಹುದಾಗಿದೆ. ಈ ರೀತಿಯಲ್ಲಿ ಕಡಿಮೆ ಅವಧಿಯಲ್ಲಿ ತಲುಪುವಂತೆ ರೈಲು ವೇಳಾಪಟ್ಟಿಯನ್ನು ಪರಿಷ್ಕರಿಸಿ ರೈಲಿಗೆ ವೇಗ ನೀಡಿ ಜನರಿಗೆ ಶೀಘ್ರ ಪ್ರಯಾಣಕ್ಕೆ ಅನುಕೂಲ ಕಲ್ಪಿಸಬೇಕೆಂದು ಜೊತೆಯಲ್ಲಿ ಹೆಚ್ಚುವರಿ ರೈಲೊಂದನ್ನು ರಾತ್ರಿ ವೇಳೆಗೆ ಹೊಸತಾಗಿ ರಚಿಸಲಾದ ಬೆಂಗಳೂರು-ಕುಣಿಗಲ್-ಶ್ರವಣಬೆಳ್ಗೊಳ-ಹಾಸನ ಮಾರ್ಗವಾಗಿ ಮಂಗಳೂರು ಮೂಲಕ ಕಾರವಾರಕ್ಕೆ ಒದಗಿಸಬೇಕೆಂದೂ ಆಗ್ರಹಿಸಿ ಸಿಪಿಐ(ಎಂ) ಬೈಂದೂರು ವಲಯ ಸಮಿತಿಯ ಆಶ್ರಯದಲ್ಲಿ ಅಕ್ಟೋಬರ್ 23 ರಂದು ಬೈಂದೂರು ಮೂಕಾಂಬಿಕಾ ರೋಡ್ ರೈಲು ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಾರವಾರ-ಬೆಂಗಳೂರು ಹಗಲು ರೈಲನ್ನು ನಿಲ್ಲಿಸುವ ಪ್ರಸ್ತಾಪವನ್ನೂ ಕೈ ಬಿಡಬೇಕೆಂದೂ ಆಗ್ರಹಿಸಲಾಯಿತು. ಬೈಂದೂರು ಸಮೀಪದ ಬಂಕೇಶ್ವರ ಲೆವೆಲ್ ಕ್ರಾಸ್‌ಗೆ ಮೇಲ್ಸೇತುವೆ ಅಥವಾ ಅಂಡರ್‌ಪಾಸ್ ನಿರ್ಮಿಸಬೇಕು, ಸೇನಾಪುರ ನಿಲ್ದಾಣದಲ್ಲಿ ಎಕ್ಸ್‌ಪ್ರೆಸ್ ರೈಲುಗಳನ್ನು ನಿಲ್ಲಿಸಬೇಕೆಂದೂ ಆಗ್ರಹಿಸಲಾಯಿತು. ಮಂಗಳೂರಿಗೆ ಪ್ರತ್ಯೇಕ ರೈಲ್ವೇ ವಿಭಾಗವನ್ನು ತೆರೆಯಬೇಕೆಂದೂ ಆಗ್ರಹಿಸಲಾಯಿತು.

ಈ ಕುರಿತು ಪಕ್ಷವು ಎರಡು ವರ್ಷಗಳಿಂದ ಹೋರಾಟ ನಡೆಸುತ್ತಿದೆ. ಅಂದಿನ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಬೈಂದೂರು ವಲಯ ಸಮಿತಿ ಕಾರ್ಯದರ್ಶಿ ಸುರೇಶ್‌ಕಲ್ಲಾಗರ, ವಲಯ ಸಮಿತಿ ಮುಖಂಡರಾದ ವೆಂಕಟೇಶ ಕೋಣಿ, ರಾಜೀವ ಪಡುಕೋಣೆ ಭಾಗವಹಿಸಿದ್ದರು. 150 ಮಂದಿಯಷ್ಟಿದ್ದ ಪ್ರತಿಭಟನಾಕಾರರು ರೈಲುತಡೆ ನಡೆಸುವ ಉದ್ದೇಶದಿಂದ ಬೈಂದೂರು ನಿಲ್ದಾಣದ ಒಳಕ್ಕೆ ಹೋಗಲು ಮುಂದಾದಾಗ, ಪೋಲೀಸರು ಅವರನ್ನು ಒಳಗೆ ಹೋಗದಂತೆ ತಡೆದರು. ಆಗ ನಿಲ್ದಾಣದ ಪ್ರವೇಶ ದ್ವಾರದಲ್ಲಿಯೇ ಬೇಡಿಕೆಗಳ ಬಗ್ಗೆ ಘೋಷಣೆ ಕೂಗಿ ಪ್ರತಿಭಟಿಸಲಾಯಿತು. ಬಳಿಕ ರೈಲ್ವೇ ಟ್ರಾಫಿಕ್ ಮ್ಯಾನೇಜರ್ ಅವರಿಗೆ ಮನವಿಪತ್ರ ಸಲ್ಲಿಸಲಾಯಿತು.



ಕೃತಕ ಮರಳು ಅಭಾವ ಖಂಡಿಸಿ ಮಂಗಳೂರಿನಲ್ಲಿ ಪ್ರತಿಭಟನೆ:

ಜಿಲ್ಲೆಯ ನದಿಗಳಲ್ಲಿ ಸಾಕಷ್ಟು ಮರಳು ಲಭ್ಯವಿದ್ದರೂ, ಜಿಲ್ಲಾಡಳಿತ ಮರಳಿನ ಕೃತಕ ಅಭಾವ ಸೃಷ್ಟಿಸಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ಸದಸ್ಯರು ಅಕ್ಟೋಬರ್ 23 ರಂದು ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಅಕ್ರಮ ಮರಳು ಸಾಗಣಿಯನ್ನು ತಡೆಕಟ್ಟಬೇಕು. ಜನಪರ ಮರಳು ನೀತಿ ಜಾರಿಗೊಳಿಸಬೇಕು. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆಯಬೇಕು ಎಂಬುದಾಗಿ ಪ್ರತಿಭಟನಾಕಾರರು ಒತ್ತಾಯಿಸಿದರು. ಹಿಂದಿನ ಬಿಜೆಪಿ ಸರಕಾರದಲ್ಲಿ ಸಚಿವರಾಗಿದ್ದ ಜೆ.ಕೃಷ್ಣ ಪಾಲೇಮಾರ್ ಅವರ ಸ್ವಜನಪಕ್ಷಪಾತ ಧೋರಣೆಯ ಫಲವಾಗಿ ಜಿಲ್ಲೆಯಲ್ಲಿ ಮರಳು ಪೂರೈಕೆ ಹಳಿ ತಪ್ಪಿದ್ದು, ಇದರಿಂದಾಗಿ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರು ಕೆಲಸವಿಲ್ಲದೆ ಬೀದಿಗೆ ಬೀಳುವಂತಾಗಿದೆ. ಪೋಲೀಸರು ಕಣ್ಣು ಮುಚ್ಚಿರುವ ಪರಿಣಾಮ ಹೊರರಾಜ್ಯಗಳಿಗೆ ಭಾರೀ ಪ್ರಮಾಣದ ಮರಳು ಕಳ್ಳಸಾಗಣೆಯಾಗುತ್ತಿದೆ. ಜಿಲ್ಲೆಯಲ್ಲಿ ದುಬಾರಿ ದರಕ್ಕೆ ಮರಳು ಮಾರಾಟ ಮಾಡಲಾಗುತ್ತಿದೆ ಎಂದು ಮಾತನಾಡಿದ ಮುಖಂಡರು ಟೀಕಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಫೆಡರೇಶನ್ನಿನ ಜಿಲ್ಲಾ ಘಟಕದ ಅಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಮಾತನಾಡಿದರು. ಸಿಐಟಿಯು ಜಿಲ್ಲಾ ಮುಖಂಡರಾದ ಸದಾಶಿವ ದಾಸ್, ಕೃಷ್ಣಪ್ಪ ಸಾಲ್ಯಾನ್, ಫೆಡರೇಶನ್ನಿನ ಮುಖಂಡರಾದ ಕೆ.ಪಿ.ಜಾನಿ, ರವಿಚಂದ್ರ ಕೊಂಚಾಡಿ, ಜನಾರ್ಧನ ಕುತ್ತಾರ್, ಸಂತೋಷ್ ಶಕ್ತಿನಗರ, ವಸಂತಿ ಕುಪ್ಪೆಪದವು, ಜಯಶೀಲ, ಶಂಕರ ಮೂಡಬಿದರೆ, ಶಿವರಾಮೇ ಗೌಡ, ಚಂದ್ರಹಾಸ ಪಿಲಾರ್, ಪ್ರೇಮನಾಥ ಜಲ್ಲಿಗುಡ್ಡೆ, ರೋಹಿದಾಸ್, ಅಶೋಕ್ ಶ್ರೀಯಾನ್, ಅನಿಲ್, ಚಂದ್ರಶೇಖರ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮ್ಯಾನ್‌ಹೋಲ್‌ಗೆ ಕಾರ್ಮಿಕರನ್ನು ಇಳಿಸಿದ್ದಕ್ಕೆ ಪ್ರತಿಭಟನೆ:

ಬುದ್ಧಿವಂತರ ಜಿಲ್ಲೆ ಎಂದು ಹೆಸರು ಪಡೆದ ದ.ಕ. ಜಿಲ್ಲೆಯ ಕೇಂದ್ರ ಮಂಗಳೂರು ನಗರದಲ್ಲಿ 2 ದಿನಗಳ ಅಂತರದಲ್ಲಿ ಒಳಚರಂಡಿ ವ್ಯವಸ್ಥೆಗೆ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಪೌರಕಾರ್ಮಿಕರನ್ನು ಇಳಿಸಿದ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದು ಬಂದರೂ ನಗರಾಡಳಿತವಾಗಲೀ, ಜನಪ್ರತಿನಿಧಿಗಳಾಗಲೀ ಕಣ್ಣುಮುಚ್ಚಿ ಮೂಗುಮುಚ್ಚಿ ಸಾಗುವ ವರ್ತಮಾನ ಮಂಗಳೂರಿನಲ್ಲಿ ನಡೆಯುತ್ತಿದೆ. ಅಧಿಕಾರಿಗಳು, ಮೇಯರ್, ಪಾಲಿಕೆ ಪ್ರತಿನಿಧಿಗಳ ಅಮಾನವೀಯ ನಿರ್ಲಕ್ಷ್ಯವನ್ನು ಖಂಡಿಸಿ ಅಕ್ಟೋಬರ್ 21 ರಂದು ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿಯ ನೇತೃತ್ವದಲ್ಲಿ ಮಹಾನಗರ ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿ ಖಂಡಿಸಲಾಯಿತು.

ಒಂದು ಘಟನೆಯು ಮಂಗಳೂರು ಬಂದರ್ ಪೋಲೀಸ್ ಠಾಣೆಯ ಸಮೀಪದಲ್ಲಿಯೇ ನಡೆದಿರುತ್ತದೆ. ಇನ್ನೊಂದು ಘಟನೆ ನಗರ ಕೇಂದ್ರದಲ್ಲಿರುವ ಡಾನ್‌ಬಾಸ್ಕೋ ಹಾಲ್‌ನ ಪಕ್ಕದಲ್ಲೇ ನಡೆದಿರುತ್ತದೆ. ಈ ಕೃತ್ಯಗಳನ್ನು ನಡೆಸಲು ಅನುಮತಿ ನೀಡಿದ ನಗರ ಪಾಲಿಕೆ ಅಧಿಕಾರಿ ಹಾಗೂ ಸ್ವಚ್ಛತಾ ಗುತ್ತಿಗೆದಾರನ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ದಸಂಸ ರಾಜ್ಯ ಸಂಚಾಲಕರಾದ ಎಂ.ದೇವದಾಸ್, ಸಿಪಿಐ(ಎಂ) ಜಿಲ್ಲಾ ಸಮಿತಿಯ ವಾಸುದೇವ ಉಚ್ಚಿಲ, ಯೋಗೀಶ್ ಜಪ್ಪಿನಮೊಗರು ಮಾತನಾಡಿದರು. ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕ ತಿಮ್ಮಯ್ಯ ಕೊಂಚಾಡಿ ಹಾಗೂ ಸಿಪಿಐ(ಎಂ) ನಗರ ಸಮಿತಿ ಸದಸ್ಯರು ಉಪಸ್ಥಿತರಿದ್ದರು.



ಹಕ್ಕಿಪಿಕ್ಕಿ ಜನ ಮನೆ ಒಡೆಯರಾಗುವುದು ಸಾಧ್ಯವೇ?

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ವೀವರ್ಸ್ ಕಾಲೊನಿಯಲ್ಲಿ ಅರಣ್ಯಕ್ಕೆ ಹೊಂದಿಕೊಂಡಂತೆ ಹಕ್ಕಿಪಿಕ್ಕಿ ಜನಾಂಗ ಹಲವಾರು ವರ್ಷಗಳಿಂದ ಇಲ್ಲಿ ನೆಲೆ ಕಂಡುಕೊಂಡಿದೆ. ಆದರೆ ಅರಣ್ಯ ಇಲಾಖೆ ಈ ಜನರನ್ನು ಬಲವಂತವಾಗಿ ಒಕ್ಕಲೆಬ್ಬಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ.

ಅರಣ್ಯ ಇಲಾಖೆಯ ದೌರ್ಜನ್ಯ ವಿರೋಧಿಸಿ, ಈಗಿರುವ ವಾಸಸ್ಥಳದಿಂದ ಕದಲುವುದಿಲ್ಲ ಎಂದು ರಸ್ತೆತಡೆದು



ಪ್ರತಿಭಟನೆ ನಡೆಸಿದರು. ಸಂಸದರು, ಅಧಿಕಾರಿಗಳು ಹಾಗು ಅರಣ್ಯಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಸ್ಥಳಾಂತರಿಸುವುದಿಲ್ಲ ಎಂದು ವಾಗ್ದಾನ ನೀಡಿದರು.

ಆದರೆ....

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ "ವಾಸಿಸುವವನೇ ಮನೆ ಒಡೆಯ" ಕಾಯ್ದೆಗೆ ರಾಷ್ಟ್ರಪತಿಗಳ ಸಹಿ ಬೀಳಲಿದೆ ಎನ್ನಲಾಗುತ್ತಿದ್ದರೂ ಅರಣ್ಯಾಧಿಕಾರಿಗಳ ಈ ನಡೆಯಿಂದ ಹಕ್ಕಿಪಿಕ್ಕಿ ಜನಾಂಗ ಮನೆ ಒಡೆಯರಾಗುವುದು ಸಾಧ್ಯವೇ? ಎಂಬ ಪ್ರಶ್ನೆ ಎದುರಾಗಿದೆ.

ಮ್ಯಾನ್‌ಹೋಲ್‌ಗೆ ಕಾರ್ಮಿಕರು: ಪ್ರಕರಣ ದಾಖಲು:

ಯಾವುದೇ ಸುರಕ್ಷಾ ಸೌಕರ್ಯಗಳನ್ನು ನೀಡದೆ ಒಳಚರಂಡಿ ಗುಂಡಿಗೆ ಇಳಿಸದಂತೆ ಕಾನೂನು ಇದ್ದರೂ ಕಾನೂನನ್ನು ಉಲ್ಲಂಘಿಸಿದ ಮಹಾನಗರ ಪಾಲಿಕೆ ಗುತ್ತಿಗೆದಾರ, ಪಾಲಿಕೆಯ ಇಂಜಿನಿಯರ್ ಮತ್ತು ಈ ಕೃತ್ಯಕ್ಕೆ ಕಾರಣ-ರಾದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಕೋರಿ, ಸಿಐಟಿಯು ನಗರ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು ಮಂಗಳೂರು ದಕ್ಷಿಣ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.



"ನಮ್ಮ ಕೆರೆ ನಮ್ಮ ಹಕ್ಕು" ಬಗ್ಗೆ ವಿಶಿಷ್ಟ ಸಂವಾದ

ನಾವೆಲ್ಲರೂ ಅಧಿಕಾರಿಗಳಿಗೆ ಬೆನ್ನೆಲುಬಾಗಿ ನಿಂತರೆ ಮಾತ್ರವೇ ಜಿಲ್ಲೆಯ ಕೆರೆಗಳ ರಕ್ಷಣೆ ಸಾಧ್ಯ ಎಂದು ಭೀಮಸೇನೆ ರಾಜ್ಯಾಧ್ಯಕ್ಷ ಪಂಡಿತ್ ಮುನಿವೆಂಕಟಪ್ಪ ಅಭಿಪ್ರಾಯಪಟ್ಟರು. ನಗರದ ಪತ್ರಕರ್ತರ ಭವನದಲ್ಲಿ ಭೀಮಸೇನೆ ಕರ್ನಾಟಕ ಹಾಗೂ ಪ್ರಗತಿ ಪರ ಸಂಘಟನೆಗಳ ವತಿಯಿಂದ ಅ 26ರಂದು ಕೋಲಾರದಲ್ಲಿ ಹಮ್ಮಿಕೊಂಡಿದ್ದ "ನಮ್ಮ ಕೆರೆ ನಮ್ಮ ಹಕ್ಕು" ಒಂದು ದಿನದ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೆರೆಗಳ ರಕ್ಷಣೆಗಾಗಿ ಅನೇಕ ಅಧಿಕಾರಿಗಳು ಸಾಕಷ್ಟು ಪ್ರಯತ್ನ ಪಟ್ಟು ಒಂದು ಹೆಜ್ಜೆ ಮುಂದೆ ಹೋಗುತ್ತಿದ್ದಂತೆಯೇ ಅವರನ್ನು ಜಿಲ್ಲೆಯಿಂದ ಎತ್ತಂಗಡಿ ಮಾಡುವ ಕೆಲಸ ಸಾಮಾನ್ಯವಾಗಿ ಬಿಟ್ಟಿದೆ. ಹೀಗಾಗಿ ಕೆಲ ಅಧಿಕಾರಿಗಳು ಕೆರೆಗಳ ಕುರಿತಾಗಿ ಹೆಚ್ಚಿನ ಗಮನ ನೀಡುತ್ತಿಲ್ಲ ಎಂದು ವಿಷಾಧಿಸಿದರು.

ಈ ಹಿಂದಿನ ಜಿಲ್ಲಾಧಿಕಾರಿ ಡಿ.ಕೆ.ರವಿ ಅವರು ಕೆರೆಗಳ ಉಳಿವಿಗಾಗಿ ಸಾಕಷ್ಟು ಶ್ರಮಿಸಿದ್ದರು. ಅವರ ಹಾದಿಯಲ್ಲಿಯೇ ಡಾ.ಕೆ.ವಿ. ತ್ರಿಲೋಕ್‌ಚಂದ್ರ ಸಹ ಮುಂದಾದರು. ಆದರೆ, ಕೆಲಸ ಕೈಗೆತ್ತಿಕೊಳ್ಳುವ ಮುನ್ನವೇ ಜಿಲ್ಲೆಯಿಂದ ವರ್ಗಾವಣೆಯಾಗಿದ್ದಾರೆ. ಈಗಿನ ಜಿಲ್ಲಾಧಿಕಾರಿಗಳಿಗೂ ಸಾಕಷ್ಟು ಆಸಕ್ತಿಯಿದ್ದು, ಯಾವ ರೀತಿ ಕ್ರಮಕೈಗೊಳ್ಳಲಿದ್ದಾರೆ ಎನ್ನುವುದನ್ನು ಕಾದುನೋಡಬೇಕು. ಜತೆಗೆ ಸಂಘಟನೆಗಳಿಂದಲೂ ಅಧಿಕಾರಿಗಳಿಗೆ ಸಹಕಾರ ಅಗತ್ಯ ಎಂದರು.

ಗ್ರಾಮ ಪಂಚಾಯಿತಿವಾರು ಕೆರೆಗಳ ಹರಾಜನ್ನು ಮೀನುಗಾರಿಕೆ ಸೇರಿದಂತೆ ಇನ್ನಿತರೆ ಚಟುವಟಿಕೆಗಳಿಗೆ ಖಾಸಗಿಯವರಿಗೆ ನೀಡಲಾಗುತ್ತಿದೆ. ಅದನ್ನು ತಡೆದು, ಹರಾಜಿನ ಬದಲಿಗೆ ಮೀನುಮರಿಗಳನ್ನು ಕೆರೆಗೆ ಬಿಟ್ಟಲ್ಲಿ ಜಲ ಸಂಪತ್ತು ವೃದ್ಧಿಯಾಗುತ್ತದೆ ಎಂದು ಹೇಳಿದರು.

ಈ ಹಿಂದೆ ಕೆರೆ ಎಂದರೆ ನೀರು, ಮೀನು ಎನ್ನುವಂತಿತ್ತು. ಆದರೆ, ಇದೀಗ ಜಾಲಿ ಮತ್ತು ನೀಲಗಿರಿಯಿಂದಾಗಿ ಕೆರೆ ಸಂಪತ್ತು ಸಂಪೂರ್ಣವಾಗಿ ನಾಶವಾಗಿದೆ. ನೀಲಗಿರಿ ನಿಷೇದದ ಕಾನೂನು ಕೇವಲ ಕಾನೂನಾಗಿಯೇ ಉಳಿದಿದ್ದು, ಯಾರಿಗೂ ಕಾಳಜಿ ಇಲ್ಲದಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಾಕಷ್ಟು ವರ್ಷಗಳ ಬಳಿಕ ತುಂಬಿರುವ ಕೆರೆಗಳ ಬಳಿ ಜನ ಆನಂದ ಅನುಭವಿಸಲು ತೆರಳಿದರೆ ಪೊಲೀಸರ ಕಾವಲು ಹಾಕಿ ಅದಕ್ಕೂ ಅಡ್ಡಿಪಡಿಸಲಾಗುತ್ತಿದೆ. ಹೀಗಾದರೆ ಹೊಸ ಪೀಳಿಗೆಗೆ ಕೆರೆಯ ಅನುಭವಗಳಾಗುವುದಾದರೂ ಹೇಗೆ ಎಂದು ಪ್ರಶ್ನಿಸಿದ ಅವರು, "ನಮ್ಮ ಕೆರೆ ನಮ್ಮ ಹಕ್ಕು" ಎನ್ನುವುದನ್ನು ಸಾಭೀತು ಪಡಿಸುವ ಮೂಲಕ ಕೆರೆಗಳನ್ನು ಉಳಿಸಿಕೊಳ್ಳಲು ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷೆ ವಿ.ಗೀತಾ ಮಾತನಾಡಿ ಜಿಲ್ಲೆಯಲ್ಲಿ ನೀರಿನ ಹೆಸರಿನಲ್ಲಿ ರಾಜಕಾರಣ ನಡೆಯುತ್ತಿದೆ, ನೀರಿನ ಸಮಸ್ಯೆಗೆ ಜಿಲ್ಲೆಯ ರಾಜಕೀಯ ನಾಯಕರಿಂದ ಯಾವುದೇ ಪ್ರಾಮಾಣಿಕ ಪ್ರಯತ್ನ ನಡೆಯುತ್ತಿಲ್ಲ, ಕೆರೆ ತುಂಬಿ ಕೋಡಿ ಹೋದಾಗ ಬಾಗೀನ ಅರ್ಪಿಸಲು ಮುಂದಾಗುವ ರಾಜಕಾರಣಿಗಳು ಅದಕ್ಕೂ ಮುಂಚೆ ಆಸಕ್ತಿ ತೋರಿ ಕೆರೆಗಳಲ್ಲಿ ಹೂಳು ತೆಗೆದಿದ್ದರೆ ಜಿಲ್ಲೆಯಲ್ಲಿ ಬಿದ್ಧ ಮಳೆಯ ನೀರು ವ್ಯರ್ಥವಾಗಿ ಹರಿದು ತಮಿಳು ನಾಡಿಗೆ ಹೋಗುತ್ತಿರಲಿಲ್ಲ ಎಂದು ಕಿಡಿ ಕಾರಿದರು.

ಜಿಲ್ಲೆಯಲ್ಲಿ 2180 ಕೆರೆಗಳಿದ್ದು ಆ ಕೆರೆಗಳಲ್ಲಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಕೆರೆಗಳಲ್ಲಿನ ಹೂಳು ತೆಗೆಯಬಹುದಿತ್ತು. ನಮ್ಮ ರಾಜಕಾರಣಿಗಳು ಮತ್ತು ಅಧಿಕಾರಸ್ಥರು ಪ್ರಾಮಾಣಿಕ ಪ್ರಯತ್ನ ಮಾಡಿದ್ದರೆ ಕಳೆದ 11 ವರ್ಷಗಳಲ್ಲಿ ಎಲ್ಲಾ ಕೆರೆಗಳಲ್ಲಿ ಹೂಳು ತೆಗೆಯಬಹುದಿತ್ತು ಆದರೆ ಇದ-ಕ್ಕೆ ಬದಲಾಗಿ ರಸ್ತೆಗಳಿಗೆ ಮತ್ತು ಚರಂಡಿಗಳನ್ನು ಮಾಡಿ ಹಣ ಮಾಡಿಕೊಂಡರು ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಜನರಲ್ಲಿ ನಮ್ಮ ಕೆರೆ ನಮ್ಮ ಹಕ್ಕು ಎಂಬುದರ ಕುರಿತು ಜಾಗೃತಿ ಮೂಡಿಸಬೇಕಾದ ಅವಶ್ಯಕತೆ ಇದ್ದು ಸಂಘಟನೆಗಳು ಇದರ ಹೊಣೆ ಹೊತ್ತು ಈ ಕೆಲಸವನ್ನು ಮಾಡಿದಾಗ ಜಿಲ್ಲೆಯ ಕೆರೆಗಳಲ್ಲಿ ನೀರು ಉಳಿಸಿ ಅಂತರ್ಜಲವನ್ನು ಹೆಚ್ಚಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕ ಶಿವಪ್ಪ ಜಿ.ಅರಿವು ಮಾತನಾಡಿ, ಕೆರೆಗಳನ್ನು ಉಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಇದಕ್ಕೆ ಪ್ರಾಮಾಣಿಕ ಪ್ರಯತ್ನ ಅಗತ್ಯ ಎಂದು ಹೇಳಿದರು.

ಪರಿಯರ್ಾಯ ಉದ್ಯೋಗ/ ಪರಿಹಾರ, ಕನಿಷ್ಟ ಕೂಲಿ 350ರೂ. ಗೆ ಬೀಡಿ ಕಾರ್ಮಿಕರ ಒತ್ತಾಯ

ತುಮಕೂರು ಜಿಲ್ಲೆಯಲ್ಲಿ ಇರುವ ಸುಮಾರು ಲಕ್ಷ ಬೀಡಿ ಕಾರ್ಮಿಕರ ಬದುಕು ಸರ್ಕಾರದ ನೀತಿಗಳಿಂದ ಹಾಗೂ ಮಾಲೀಕರ ಲಾಭದಾಹಿತನದಿಂದಾಗಿ ಸಂಕಷ್ಟಗಳ ಸರಮಾಲೆಯಿಂದ ಕೂಡಿದೆ. ಕೇಂದ್ರ ಸರ್ಕಾರದ ಧೂಮಪಾನ ನಿಷೇಧ ನೀತಿಯಿಂದಾಗಿ ತಂಬಾಕು ಉತ್ಪನ್ನಗಳ ಮೇಲೆ ನಿರಂತರ ತೆರಿಗೆ ಏರಿಕೆ, ಮಾರಾಟದ ನಿಯಂತ್ರಣದಿಂದಾಗಿ ಬೀಡಿ ಕಾರ್ಮಿಕರಿಗೆ ನಿರಂತರವಾಗಿ ಕೆಲಸ ಇಲ್ಲದಂತಾಗುತ್ತಿದೆ. ಇದ-ರಿಂದ ಬಡ ಬೀಡಿ ಕಾರ್ಮಿಕರು ಹಸಿವಿನಿಂದ ಸಾಯುವಂತಹ ಸ್ಥಿತಿ ನಿರ್ಮಾಣವಾಗುತ್ತಿದೆ. ಈ ಸಂಬಂಧ ಸರ್ಕಾರ ರಾಜ್ಯದಲ್ಲಿರುವ ಎಲ್ಲ ಬೀಡಿ ಕಾರ್ಮಿಕರನ್ನು ಸರ್ವೆಯನ್ನು (ಗಣತಿ) ಈ ತಕ್ಷಣ ಕೈಗೊಳ್ಳಬೇಕು.



ರಾಜ್ಯ ಸರ್ಕಾರಗಳು ಬೀಡಿ ಕಾರ್ಮಿಕರಿಗೆ ನಿರಂತರವಾಗಿ ಅನ್ಯಾಯವೆಸಗುತ್ತಾ ಬಂದಿದೆ. ಬೀಡಿ ಕಾರ್ಮಿಕರ ಕನಿಷ್ಠ ವೇತನವನ್ನು ಕಳೆದ ಏಳು ವರ್ಷಗಳಿಂಧ ಪರಿಷ್ಕರಣೆಗೆ ಒಳಪಡಿಸಿಲ್ಲ. ಘನ ರಾಜ್ಯ ಸರ್ಕಾರ ಕನಿಷ್ಠ ವೇತನ ಕಲಂ 5.1 (ಎ) ಅಡಿಯಲ್ಲಿ ನೇಮಿಸಿರುವ ಸಮಿತಿಯು ಅವೈಜ್ಞಾನಿಕವಾಗಿದ್ದು ಬೀಡಿ ಉದ್ಯಮದ ಅನುಭವವನ್ನು ಹೊಂದಿರುವ ನೈಜ ಬೀಡಿ ಕಾರ್ಮಿಕರ ಪ್ರತಿನಿಧಿಗಳನ್ನು ಒಳಗೊಂಡಿಲ್ಲ ಹಾಗೂ 2014-15 ರ ತುಟ್ಟಿ ಭತ್ಯೆಯುನ್ನು ನೀಡದಂತೆ ಮಾಡಿರುವುದನ್ನು ವಿರೋಧಿಸಿ ದಿನಾಂಕ; 25-10-2017 ರ ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಪದಾದಿಕಾರಿಗಳು ಜಿಲ್ಲಾ ಕಾರ್ಮಿಕ ಆಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸಿ ಕಾರ್ಮಿಕ ಅಧಿಕಾರಿಗಳ ಮೂಲಕ ಮನವಿ ಪತ್ರವನ್ನು ಅರ್ಪಿಸಿದರು.

ಈ ಹೋರಾಟದ ಲ್ಲಿ ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯಧರ್ಶಿ ಸೈಯದ್ ಮುಜೀಬ್ , ಹಿರಿಯ ಉಪಾಧ್ಯಕ್ಷರಾದ ನಿಸಾರ್ ಅಹಮದ್ ಶಿರಾ, ಕಾಯಧರ್ಶಿ ಅಬ್ದುಲ್ ಮುನಾಪ್, ಕುಣಿಗಲ್, ವಹಿದಾ, ಲಕ್ಷ ಮ್ಮ, ಡಿವೈಎಫೈನ ನಗರ ಅಧ್ಯಕ್ಷ ದರ್ಶನ್,ಮತ್ತಿತರರು ಹಾಜರಿದ್ದರು.

ಬಸ್ ಸೌಲಭ್ಯಕ್ಕೆ ರಸ್ತೆ ತಡೆ

ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ನಗರದ ಹೊರವಲಯದ ಸ್ಯಾನಿಟೋರಿಯಂ ಬಳಿ ಕೋಲಾರದಲ್ಲಿ ಅಕ್ಟೋಬರ್ 26ರಂದು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಸ್ಯಾನಿಟೋರಿಯಂ ಸಮೀಪ 3-4 ಕಾಲೇಜುಗಳು ಇರುವುದರಿಂದಾಗಿ ಬಸ್ ನಿಲುಗಡೆಗೆ ಫಲಕ ಅಳವಡಿಸಬೇಕು. ಬಸ್‌ಪಾಸ್ ಹೊಂದಿರುವ ಕಾರಣ ವಿದ್ಯಾರ್ಥಿಗಳನ್ನು ಕಂಡರೆ ಕೆಲ ಚಾಲಕರು ಬಸ್ ನಿಲ್ಲಿಸದೆ ಹೋಗುತ್ತಿದ್ದು, ಅಂತಹವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಾಕಷ್ಟು ಮಂದಿ ನಿರ್ವಾಹಕರು ವಿದ್ಯಾರ್ಥಿಗಳನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಬಸ್‌ಗೆ ಹತ್ತಿಸಿಕೊಳ್ಳದೆ ಹೋಗುತ್ತಿದ್ದಾರೆ. ಈ ಬಗ್ಗೆ ಸಾಕಷ್ಟು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾಲೇಜು ಬಿಡುವ ಸಮಯಕ್ಕೆ ಬಸ್‌ಗಳನ್ನು ಹೆಚ್ಚುವರಿಯಾಗಿ ಕಳುಹಿಸಬೇಕು. ಈ ಹಿಂದೆ ಇದ್ದ ಹಾಗೆಯೇ ನಗರಸಾರಿಗೆ ಸೌಲಭ್ಯವನ್ನು ಮತ್ತಷ್ಟು ಹೆಚ್ಚಾಗಿ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಕೆಎಸ್‌ಆರ್‌ಟಿಸಿ ಘಟಕದ ಡಿಟಿಒ ನಿರಂಜನ್ ಮನವಿ ಸ್ವೀಕರಿಸಿ, ಈ ಬಗ್ಗೆ ಪರಿಶೀಲಿಸಿ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಭರವಸೆ ನೀಡಿದ ಬಳಿಕ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಕೆ.ವಾಸುದೇವರೆಡ್ಡಿ, ಕಾರ್ಯದರ್ಶಿ ಶಿವಪ್ಪ, ಉಪಾಧ್ಯಕ್ಷ ಮುಸ್ತಾಪ, ತಾಲೂಕು ಅಧ್ಯಕ್ಷೆ ಗಾಯತ್ರಿ, ಕಾರ್ಯದರ್ಶಿ ಶ್ರೀಕಾಂತ್, ಜನವಾದಿ ಮಹಿಳಾ ಸಂಘಟನೆ ಜಿಲ್ಲಾ ಕಾರ್ಯದರ್ಶಿ ವಿಜಯಕುಮಾರಿ, ಮುಖಂಡರಾದ ರಾಜು, ಪ್ರೇಮ್‌ಕುಮಾರ್, ಅವಿನಾಶ್, ದಿವಾಕರ್, ಸುಹಾಸ್ ವಹಿಸಿದ್ದರು.

ವರದಿ: ಲಿಂಗರಾಜು



ಗಾಂಜಾ ಜಾಲದಲ್ಲಿ ಬಿಜೆಪಿ ಶಾಸಕ

ಗಾಂಜಾ ಜಾಲ ಬಿಜೆಪಿಯ ಬುಡದಲ್ಲಿ ಬೆಳೆ. ಎಂಥ ಕೌಶಲ್ಯ!! ಇದೇನು ಕಮ್ಯುನಿಸ್ಟ್ ರು ಹೇಳೋದಲ್ಲ. ಸ್ವತಃ ಬಿಜೆಪಿ ಶಾಸಕರಿರುವ ಸುಸಂಸ್ಕೃತ ಎಂದು ಕರೆಸಿಕೊಂಡು ಊರುತುಂಬೆಲ್ಲ ಹಿಂದುತ್ವದ ಬಗ್ಗೆ ಮಾತನಾಡುವವರ ಪಕ್ಷದಲ್ಲಿ ಕ್ಷೇತ್ರದಲ್ಲಿ ಈ ಸಾಗಾಣಿಕೆ ಜಾಲ ಇದೆ. ಅದರಲ್ಲೂ ಕೌಶಲ್ಯಾಭಿವೃದ್ಧಿ ಮಂತ್ರಿ ಹಿಂದುತ್ವದ ಹಾರ್ಡಕೋರ್ ಬಿಜೆಪಿಯ ಅನಂತಕುಮಾರ್ ಕ್ಷೇತ್ರದಲ್ಲಿ. ನಿನ್ನೆಯಷ್ಟೇ (ಅ. 26) ಅವರ ಪಕ್ಷದ ನಾಯಕರು ಗಾಂಜಾ ಜಾಲದ ಬಗ್ಗೆ ರಾಜ್ಯ ಸರ್ಕಾರದ ವಿರುದ್ಧ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ ಏನೇನೋ ಹೇಳಿದ್ದರು.

ವರದಿ: ಯಮುನಾ ಗಾಂವ್ಕರ್

ಅತಿಥಿ ಅಂಕಣ



ರಾಜೇಂದ್ರ ಚೆನ್ನಿ

ಭಾರತವು ಒಂದು ಹಿಂದೂ ರಾಷ್ಟ್ರವಾಗಿದೆ; ಇನ್ನೆಲ್ಲರೂ ಅನ್ಯರು, ಆಕ್ರಮಣಕಾರರು, ದರೋಡೆಕೋರರು ಎನ್ನುವುದು ಚರಿತ್ರೆಯ ಈ ಮಾದರಿಯ ಬುನಾದಿಯಾದರೆ ಯಾವುದೇ ಮುಸ್ಲಿಮ್ ಯಾವುದೇ ಕ್ರಿಶ್ಚಿಯನ್ ಈ ದೇಶದ ಚರಿತ್ರೆಗೆ ಏನನ್ನೂ ಕೊಟ್ಟಿಲ್ಲವೆಂದು ಅದರ ಮೂಲತರ್ಕವೇ ಆಗಿರುತ್ತದೆ. ಹೀಗಾಗಿ ಟಿಪ್ಪು ಆದರೇನು, ಅಕ್ಬರ್ ಆದರೇನು ಅವನು ಮತಾಂಧನಾಗಿರಲೇಬೇಕು. ಅವನು ಜಾತ್ಯಾತೀತನೂ ಆಗಲಾರ; ದೇಶಪ್ರೇಮಿಯೂ ಆಗಲಾರ. ಚರಿತ್ರೆಯ ಯಾವ ದಾಖಲೆಯನ್ನು ತಂದರೂ ಈ ತರ್ಕ ಬದಲಾಗುವುದಿಲ್ಲ. ಇಲ್ಲಿ ಸಂವಾದ, ಚರ್ಚೆ ಇವುಗಳು ಸಾಧ್ಯವೇ ಇಲ್ಲ. ಏಕೆಂದರೆ ವಸ್ತುನಿಷ್ಠವಾಗಿ ಚರ್ಚೆ ಮಾಡಬೇಕೆಂದರೆ ಮೊದಲು ಸಾವರ್ಕರ್ ಮಾದರಿಯ ಚರಿತ್ರೆಯ ಕಥನವನ್ನು ತ್ಯಜಿಸಬೇಕಾಗುತ್ತದೆ. ಅದನ್ನು ತ್ಯಜಿಸಿದರೆ ಬಲಪಂಥೀಯರಿಗೆ ಇನ್ನಾವ ಸಿದ್ಧಾಂತವೂ ಇಲ್ಲ. ಚಿಂತನೆಯ ಮಾದರಿಯೂ ಇಲ್ಲ. ಆದ್ದರಿಂದ ಅವರು ದೊಂಬಿ ಮಾಡಬಹುದೇ ಹೊರತು ಚರಿತ್ರೆಯ ಬಗ್ಗೆ ಸಂವಾದವನ್ನಲ್ಲ.

ದೊಂಬಿಗಳ ಮಧ್ಯ ಚರಿತ್ರೆಯ ಓದು!

ಎಲ್ಲಾ ಇತಿಹಾಸಕಾರರು ಒಪ್ಪುವಂತೆ ಬಲಪಂಥೀಯ ಸಿದ್ಧಾಂತಗಳು ಹಾಗೂ ಪಕ್ಷಗಳು ಪ್ರಬಲವಾಗಿ ಬೆಳೆಯತೊಡಗಿದ ಮೇಲೆ ಅತ್ಯಂತ ಆಕ್ರಾಮಕವಾದ ಹಾಗೂ ಅಸಮರ್ಥನೀಯವಾದ ವೈಚಾರಿಕವಾದ ದಾಳಿಗಳು ನಡೆದದ್ದು ಇತಿಹಾಸವೆನ್ನುವ ಜ್ಞಾನಪ್ರಕಾರದ ಮೇಲೆಯೇ. ಅನೇಕ ಅಕ್ಯಾಡೆಮಿಕ್ ಇತಿಹಾಸಕಾರರು ಎಲ್ಲಾ ಸಿದ್ಧಾಂತಗಳು ಚರಿತ್ರೆಯನ್ನು ತಿರುಚಿ ನೋಡುತ್ತವೆಯೆಂದು ವಾದಿಸುತ್ತಾರೆಯಾದರೂ ಇತಿಹಾಸಕಾರರಾಗಿ ಅವರಿಗೆ ಗೊತ್ತಿರುವ ಸಂಗತಿಯೆಂದರೆ ಭಾರತೀಯ ಇತಿಹಾಸ ರಚನೆಯ ಮೇಲೆ ಒತ್ತಡಗಳು ಆರಂಭವಾದದ್ದು ವಸಾಹತುಶಾಹಿ ಕಾಲದಲ್ಲಿ. ನಮ್ಮ ವೈಚಾರಿಕತೆಯ ವಸಾಹತೀಕರಣದ ಮೊದಲ ಹೆಜ್ಜೆಯೆಂದರೆ ಜೇಮ್ಸ್ ಮಿಲ್ ರಂಥ ಬ್ರಿಟಿಷ್ ಚರಿತ್ರೆಕಾರರು ಭಾರತದ ಇತಿಹಾಸವನ್ನು ಬರೆದದ್ದು. ಈ ಚರಿತ್ರೆಯ ನೇರ ಹಾಗೂ ಖಚಿತ ಉದ್ದೇಶವೆಂದರೆ ಭಾರತೀಯ ನಾಗರೀಕತೆಯನ್ನು ಅದರ ಚರಿತ್ರೆಯ ಮೂಲಕ ತುಚ್ಛೀಕರಿಸುವುದು. ಭಾರತಕ್ಕೆ ಚರಿತ್ರೆಯೆ ಇರಲಿಲ್ಲ, ಇದ್ದರೂ ಅದು ಸರ್ವಾಧಿಕಾರಿ ರಾಜರುಗಳ ಹಾಗೂ ಎಂದು ಬದಲಾಗದ ಹಳ್ಳಿಗಳ ಪೆದ್ದುಚರಿತ್ರೆ ಎನ್ನುವ ಪುರಾಣಗಳನ್ನು ಇಂಥ ಚರಿತ್ರೆಯ ಕಥನದಿಂದ ಸೃಷ್ಟಿಸಲಾಯಿತು. ಹೀಗಾಗಿ ಬ್ರಿಟಿಷ್ ವಸಾಹತುಶಾಹಿಯು ಮೊದಲ ಬಾರಿಗೆ ಭಾರತವನ್ನು ಆಧುನಿಕ ಚರಿತ್ರೆಯ ಬೆಳಕಿಗೆ ತಂದ ಮಹಾನ್ ನಾಗರೀಕ ವಿದ್ಯಮಾನವೆಂದು ಸಮರ್ಥಿಸಲಾಯಿತು. ಭಾರತಕ್ಕೆ ಎಂದೂ ಹೆಜ್ಜೆ ಇಡದ ಹಾಗೂ ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿದ್ದ ಜೇಮ್ಸ್ ಮಿಲ್ ಮಾಡಿದ ಇನ್ನೊಂದು ಘೋರ ಅಪರಾಧವೆಂದರೆ ಭಾರತದ ಇತಿಹಾಸವನ್ನು ಹಿಂದೂ ಯುಗ, ಮುಸ್ಲಿಮ್ ಯುಗ ಹಾಗೂ ಬ್ರಿಟಿಷ್ ಯುಗವೆನ್ನುವ ಕಾಲವಿಭಜನೆಯನ್ನು ಮಾಡಿದ್ದು. ಅಂದಿನಿಂದ ಇಂದಿನವರೆಗೆ ನಮ್ಮ ದೇಶದ ಮನಸ್ಸಿನಲ್ಲಿ ಈ ವೈಚಾರಿಕ ಕ್ಯಾನ್ಸರ್ ಬೆಳೆಯುತ್ತಲೇ ಇದೆ.



20ನೇ ಶತಮಾನದ ಶುರುವಾಚೆಗೆ ಮುನ್ನೆಲೆಗೆ ಬರತೊಡಗಿದ ಹಿಂದುತ್ವವಾದಿ ಚಿಂತಕರಾದ ಸಾವರ್ಕರ್ ಅವರು ಮಿಲ್‌ನ ಚರಿತ್ರೆಯ ಕಥನವನ್ನೇ ಒಪ್ಪಿಕೊಂಡರು. ಅವರ ಪ್ರಕಾರ ಭಾರತವೆನ್ನುವುದು ಮೂಲತಃ ಹಿಂದೂ ರಾಷ್ಟ್ರ, ಈ ಭೂಮಿಯಲ್ಲಿ ಹುಟ್ಟಿದ ಜನಾಂಗದವರು (race) ಹಿಂದೂಗಳು. ಉಳಿದವರೆಲ್ಲರೂ ಹೊರಗಿನಿಂದ ಬಂದ ಆಕ್ರಮಣಕಾರರು. ಮುಂದೆ ಇಲ್ಲಿ ಹುಟ್ಟಿದವರೇ ಮುಸ್ಲಿಮ್ ಅಥವಾ ಕ್ರಿಶ್ಚಿಯನ್‌ರಾಗಿ ಧರ್ಮಾಂತರ ಹೊಂದಿದರೆ ಅವರು ಹಿಂದೂಗಳಾಗಲಾರರು. ಏಕೆಂದರೆ ಅವರಿಗೆ ಹಿಂದುಸ್ತಾನವು ಪಿತೃಭೂಮಿ; ಆದರೆ ಪುಣ್ಯಭೂಮಿಯಲ್ಲ. ಅವರಿಗೆ ಮೆಕ್ಕಾ, ಮದೀನಾ, ಜೆರೂಸ್‌ಲೇಮ್ ಇವುಗಳು ಪುಣ್ಯಭೂಮಿ. ಹೀಗಾಗಿ ಅವರು ಇಲ್ಲಿಯ ನಾಗರೀಕರಾಗುವುದು ಅಸಾಧ್ಯ. ಅವರು ಏನೇ ಇದ್ದರೂ ಅತಿಥಿಗಳು. ಅಥವಾ ದಾಳಿಕೋರರು ಮತ್ತು ದರೋಡೆಕೋರರು. [ಇಲ್ಲಿ ನಾನು ಬಳಸಿದ ಪ್ರತಿಯೊಂದು ಪದವನ್ನು ಸಾವರ್ಕರ್ ಹಾಗೂ ಗೋಳ್‌ವಲ್ಕರ್ ಅವರ ಅಧಿಕೃತ ಬರಹದಿಂದ ಆಯ್ದುಕೊಂಡಿದ್ದೇನೆ]. ಇಲ್ಲಿ ಗಮನಿಸಲೇಬೇಕಾದ ಸಂಗತಿಗಳೆಂದರೆ ಈ ಹಿಂದುತ್ವ ಚರಿತ್ರೆ ಕಥನದ ಒಂದು ಪರಿಕಲ್ಪನೆಯೂ ಭಾರತೀಯವಲ್ಲ. 'ಹಿಂದೂ' ಎನ್ನುವ ಪದ 'ಸಿಂಧೂ' ಎನ್ನುವ ಭೂಗೋಳವಾಚಕ ಅರೇಬಿಕ್-ಸೆಮಿಟಿಕ್ ಪದ. ಮುಸ್ಲಿಮ್ ದಾಳಿಕೋರರು ಬರುವ ಮೊದಲಿನ ಕಾಲವು 'ಹಿಂದೂ ಯುಗವೆಂದು' ಯಾವುದೇ ಹಿಂದೂ ಗ್ರಂಥ, ಭಾರತೀಯ ಗ್ರಂಥ ಹೇಳಿಯೇ ಇರಲಿಲ್ಲ. ಅದು ಬ್ರಿಟಿಷ್ ಚರಿತ್ರೆಕಾರರ ಪರಿಕಲ್ಪನೆ. 'ಪಿತೃಭೂಮಿ' ಯೆನ್ನುವುದು ಜರ್ಮನ್-ಯುರೋಪಿಯನ್ ಪದ. ಮುಂದೆ ಹಿಟ್ಲರ್‌ನ ಅನುಯಾಯಿಗಳಾದ ನಾಝಿಗಳು 'fatherland' ಎಂದೇ ಹೇಳುತ್ತಿದ್ದರು. ಹೀಗೆ ಅಪ್ಪಟ ಅಭಾರತೀಯ, ಐರೋಪ್ಯ ಪದ ಹಾಗೂ ಪರಿಕಲ್ಪನೆಗಳಿಂದ ಸಾವರ್ಕರ್ 'ಹಿಂದುತ್ವ' ದ ಪರಿಭಾಷೆಯನ್ನು ಸೃಷ್ಟಿಸಿದರು. ಸಂಸ್ಕೃತವು ಜಗತ್ತಿನ 'ಮಾತೃಭಾಷೆ' ಎನ್ನುವ ಹೇಳಿಕೆ ಯುರೋಪಿಯನ್ ಓರಿಯಂಟಲಿಸ್ಟರ ಪರಿಕಲ್ಪನೆ. ಮುಂದೆ ಆರ್.ಎಸ್.ಎಸ್ ತನ್ನ ಸಮವಸ್ತ್ರವನ್ನು ಇಟಲಿಯ ಫ್ಯಾಸಿಸ್ಟರಿಂದ ಆಮದು ಮಾಡಿಕೊಂಡಿತು.

ನೀವು ಒಬ್ಬ ವಸ್ತುನಿಷ್ಠ ಚರಿತ್ರೆಕಾರರಾಗಿದ್ದರೆ ಪ್ರಾಯಶಃ ಭಾರತೀಯವೆನ್ನುವ ಅಂಶಗಳು ಅತ್ಯಂತ ಕಡಿಮೆ ಇದ್ದ ಸಿದ್ಧಾಂತವೆಂದರೆ ಹಿಂದುತ್ವ ಸಿದ್ಧಾಂತವೆಂದು ಹೇಳುತ್ತೀರಿ. ಇರಲಿ ಇದು ಮುಖ್ಯವಲ್ಲ.

ಮುಖ್ಯ ಪ್ರಶ್ನೆಯೆಂದರೆ ಭಾರತವು ಒಂದು ಹಿಂದೂ ರಾಷ್ಟ್ರವಾಗಿದೆ; ಇನ್ನೆಲ್ಲರೂ ಅನ್ಯರು, ಆಕ್ರಮಣಕಾರರು, ದರೋಡೆಕೋರರು ಎನ್ನುವುದು ಚರಿತ್ರೆಯ ಈ ಮಾದರಿಯ ಬುನಾದಿಯಾದರೆ ಯಾವುದೇ ಮುಸ್ಲಿಮ್ ಯಾವುದೇ ಕ್ರಿಶ್ಚಿಯನ್ ಈ ದೇಶದ ಚರಿತ್ರೆಗೆ ಏನನ್ನೂ ಕೊಟ್ಟಿಲ್ಲವೆಂದು ಅದರ ಮೂಲತರ್ಕವೇ ಆಗಿರುತ್ತದೆ. ಹೀಗಾಗಿ ಟಿಪ್ಪು ಆದರೇನು, ಅಕ್ಬರ್ ಆದರೇನು ಅವನು ಮತಾಂಧನಾಗಿರಲೇಬೇಕು. ಅವನು ಜಾತ್ಯಾತೀತನೂ ಆಗಲಾರ; ದೇಶಪ್ರೇಮಿಯೂ ಆಗಲಾರ. ಚರಿತ್ರೆಯ ಯಾವ ದಾಖಲೆಯನ್ನು ತಂದರೂ ಈ ತರ್ಕ ಬದಲಾಗುವುದಿಲ್ಲ. ಇಲ್ಲಿ ಸಂವಾದ, ಚರ್ಚೆ ಇವುಗಳು ಸಾಧ್ಯವೇ ಇಲ್ಲ. ಪ್ರಶ್ನೆ ಇರುವುದು ಟಿಪ್ಪು ಹಿಂದೂಗಳನ್ನು ಕೊಂದನೇ ಅಥವಾ ಕ್ರಿಶ್ಚಿಯನ್‌ರನ್ನು ಕೊಂದನೇ ಇಲ್ಲವೇ ಅನ್ನುವುದು ಅಲ್ಲವೇ ಅಲ್ಲ. ಸಂವಾದ ಆರಂಭಿಸಬೇಕೆಂದರೆ ಜಗತ್ತಿನ ಯಾವ ಕಾಲದ, ಯಾವ ಪ್ರದೇಶದ ಚರಿತ್ರೆಯೂ ಒಂದೇ ಧರ್ಮದ, ಒಂದೇ ಜನಾಂಗದ ಚರಿತ್ರೆಯಾಗಿಲ್ಲ. ಚರಿತ್ರೆಯಲ್ಲಿ ಎಲ್ಲವೂ ಸಂಕರವಾಗಿದೆ; ಹದವಾಗಿ ಮಿಶ್ರಣವಾಗಿದೆ; ಬಹುಮುಖಿಯಾಗಿದೆ. ಹಾಗೆಯೇ ಭಾರತೀಯ ಚರಿತ್ರೆಯಲ್ಲಿಯೂ ಶುದ್ಧ 'ಹಿಂದೂ' ವಾದದ್ದು ಯಾವುದೂ ಇಲ್ಲ. ಎಲ್ಲವೂ ಅಪ್ಪಟ ಭಾರತೀಯವಾಗಿದೆ. ಆದ್ದರಿಂದ ಮೊದಲು ಟಿಪ್ಪು ಜಯಂತಿಯನ್ನೇ ಧಿಕ್ಕರಿಸುತ್ತೇವೆ. ಎಂದವರು ಈಗ ತಮ್ಮ ಹಳೆಯಕಾಲದ ಟಿಪ್ಪೂ ಅಲಂಕಾರದ ಫೋಟೋಗಳನ್ನು ನೋಡಿ, ನಾವು ಚರ್ಚೆಗೆ ಸಿದ್ಧವೆಂದರೆ ಅವರನ್ನು ನಂಬಲಾಗದು. ಏಕೆಂದರೆ ವಸ್ತುನಿಷ್ಠವಾಗಿ ಚರ್ಚೆ ಮಾಡಬೇಕೆಂದರೆ ಮೊದಲು ಸಾವರ್ಕರ್ ಮಾದರಿಯ ಚರಿತ್ರೆಯ ಕಥನವನ್ನು ತ್ಯಜಿಸಬೇಕಾಗುತ್ತದೆ. ಅದನ್ನು ತ್ಯಜಿಸಿದರೆ ಬಲಪಂಥೀಯರಿಗೆ ಇನ್ನಾವ ಸಿದ್ಧಾಂತವೂ ಇಲ್ಲ. ಚಿಂತನೆಯ ಮಾದರಿಯೂ ಇಲ್ಲ. ಆದ್ದರಿಂದ ಅವರು ದೊಂಬಿ ಮಾಡಬಹುದೇ ಹೊರತು ಚರಿತ್ರೆಯ ಬಗ್ಗೆ ಸಂವಾದವನ್ನಲ್ಲ. ●

ಉಡುಪಿ ಡಿ.ಸಿ. ಕಛೇರಿ ಎದುರು : ಬೀಡಿ ಕಾರ್ಮಿಕರ ಪ್ರತಿಭಟನೆ

ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಸಂಘಗಳ ಫೆಡರೇಶನ್ ನೇತೃತ್ವದಲ್ಲಿ ಬೀಡಿ ಕಾರ್ಮಿಕರ ಹಕ್ಕೊತ್ತಾಯಗಳ ಈಡೇರಿಕೆಗೆ ಒತ್ತಾಯಿಸಿ 25 ಅಕ್ಟೋಬರ್ 2017 ರಂದು ಮಣಿಪಾಲ ರಜತಾದ್ರಿ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಮೂಲಕ ಮಾನ್ಯ ಮುಖ್ಯ ಮಂತ್ರಿ ಕರ್ನಾಟಕ ಸರಕಾರ ಇವರಿಗೆ ಮನವಿ ಪತ್ರ ಕೊಡುವ ಹೋರಾಟ ಕಾರ್ಯಕ್ರಮ ನಡೆಸಲಾಯಿತು.

ಸರಕಾರದ ನೀತಿಗಳಿಂದಾಗಿ ನಿರುದ್ಯೋಗಿಗಳಾಗುತ್ತಿರುವ ಬೀಡಿ ಕಾರ್ಮಿಕರಿಗೆ ಸೂಕ್ತ ಪರಿಹಾರ ಹಾಗೂ ಪರ್ಯಾಯ ಉದ್ಯೋಗ ನೀಡುವಂತೆ ಯೋಜನೆಯನ್ನು ಕೇಂದ್ರ ರಾಜ್ಯ ಸರಕಾರಗಳು ಜಾರಿಗೆ ತರಬೇಕು.

ಬೀಡಿ ಕಾರ್ಮಿಕರಿಗೆ 1000 ಬೀಡಿಗೆ ರೂ. 350/- ಕನಿಷ್ಠ ಕೂಲಿ ಹಾಗೂ ಅಂಕ ಒಂದಕ್ಕೆ 5 ಪೈಸೆಯಂತೆ ತುಟ್ಟಿಭತ್ಯೆಯನ್ನು ನಿಗದಿಗೊಳಿಸಬೇಕು.



ರಾಜ್ಯ ಸರಕಾರ ನೇಮಿಸಿರುವ ಕನಿಷ್ಠ ವೇತನ ಪಾವತಿ ಕಾಯಿದೆಯ ಸಮಿತಿಯಲ್ಲಿ ನೈಜ ಬೀಡಿ ಕಾರ್ಮಿಕರ ಪ್ರತಿನಿಧಿಗಳನ್ನು ಒಳಗೊಳ್ಳಬೇಕು. 2014-15 ನೇ ಸಾಲಿಗೆ ತುಟ್ಟಿಭತ್ಯೆಯನ್ನು ನೀಡದಂತೆ ಆದೇಶಿಸುವ ಮೂಲಕ ಸೃಷ್ಟಿಸಿರುವ ಗೊಂದಲವನ್ನು ಸರಿಪಡಿಸಿ, ಬೀಡಿ ಕಾರ್ಮಿಕರಿಗೆ ಬಾಕಿ ಸಮೇತ ತುಟ್ಟಿಭತ್ಯೆ ಸಿಗುವಂತೆ ಕ್ರಮವಹಿಸಬೇಕು.

ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಗಣತಿ ಕಾರ್ಯ ನಡೆಸಬೇಕು. ಕೇರಳ, ತ್ರಿಪುರ, ಮತ್ತು ಪಶ್ಚಿಮ ಬಂಗಾಳದಲ್ಲಿರುವಂತೆ ಭವಿಷ್ಯನಿಧಿ ಇಲ್ಲದ ಬೀಡಿ ಕಾರ್ಮಿಕರಿಗೆ ಮಾಸಿಕ ಪಿಂಚಣಿ, ಕರ್ನಾಟಕದಲ್ಲೂ ಜ್ಯಾರಿಗೊಳಿಸಬೇಕು. ರಾಜ್ಯ ಸರಕಾರ ಬೀಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಪುನರ್ ರಚಿಸಬೇಕು. ಬೀಡಿ ಕಾರ್ಮಿಕರಿಗೆ ಮನೆ, ನಿವೇಶನ, ಉಚಿತ ಸಾಮೂಹಿಕ ವಸತಿ ಯೋಜನೆ ರೂಪಿಸಬೇಕು. ಎಲ್ಲಾ ಬೀಡಿ ಕಾರ್ಮಿಕ ಕುಟುಂಬಗಳಿಗೆ ಬಿ.ಪಿ.ಎಲ್ ಪಡಿತರ ಚೀಟಿ ಕೊಡಬೇಕು.

ಬೀಡಿ ಕಾರ್ಮಿಕರ ಸಂಘಗಳ ಫೆಡರೇಶನ್ ಮುಖಂಡರಾದ ಕಾಪು ಲಕ್ಷ್ಮಣ, ಉಮೇಶ್ ಕುಂದರ್, ಕವಿರಾಜ ಎಸ್. ನಳಿನಿ ಎಸ್, ಸಿಐಟಿಯು ಮುಖಂಡರಾದ ಪಿ. ವಿಶ್ವನಾಥ ರೈ, ಕೆ. ಶಂಕರ, ಬಾಲಕೃಷ್ಣ ಶೆಟ್ಟಿ, ವಿಠಲ ಪೂಜಾರಿ, ಎಚ್. ನರಸಿಂಹ ಮೊದಲಾದವರು ಹೋರಾಟದ ನೇತೃತ್ವ ವಹಿಸಿದರು.

ವರದಿ : ವೆಂಕಟೇಶ ಕೋಣಿ

ಭ್ರಷ್ಟರು, ಶ್ರೀಮಂತರ ರಕ್ಷಣೆಗೆ ಸರ್ವಾಧಿಕಾರಿ ಹೆಜ್ಜೆಗಳು



ಈ ವಾರದ ಮೂರು ಪ್ರಕರಣಗಳು ಕಪ್ಪು ಹಣದ ವಿರುದ್ಧ ಕಿರಿಚಿಕೊಳ್ಳುತ್ತಲೇ ಮೋದಿ ಮತ್ತು ಬಿಜೆಪಿ ಸರಕಾರ ಭ್ರಷ್ಟರ ರಕ್ಷಿಸಲು ಹೆಚ್ಚೆಚ್ಚು ಸರ್ವಾಧಿಕಾರಿ ಕ್ರಮಗಳಿಗೆ ಮೊರೆಹೋಗಲೂ ಹೇಸುವುದಿಲ್ಲ ಎಂಬುದನ್ನು ತೋರಿಸುತ್ತಿವೆ. ಹೀಗಿರುವಾಗ ಅಧಿಕಾರಕ್ಕೆ ಬಂದು ಮೂರುವರೆ ವರ್ಷಗಳ ನಂತರವೂ ಕಾನೂನು ಪ್ರಕಾರ ಲೋಕಪಾಲ ರಚಿಸಲು ಯಾವುದೇ ಕ್ರಮ ಕೈಗೊಳ್ಳದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.



*** ಪ್ರಕಾಶ್ ಕಾರಟ್**

ಮೋದಿ ಸರಕಾರ ಮತ್ತು ಬಿಜೆಪಿ, ಕಪ್ಪು ಹಣ ಮತ್ತು ಭ್ರಷ್ಟಾಚಾರದ ವಿರುದ್ಧ ನೀಡುತ್ತಿರುವ ಕರ್ಕಶ ಹೇಳಿಕೆಗಳಿಗೆ ತದ್ವಿರುದ್ಧವಾಗಿ , ವಾಸ್ತವವಾಗಿ ಭ್ರಷ್ಟರನ್ನು ರಕ್ಷಿಸಲು ಹಾಗೂ ಶ್ರೀಮಂತರು ಕಪ್ಪು ಹಣವನ್ನು ಶುಭ್ರಗೊಳಿಸಲು ಅವಕಾಶ ನೀಡುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಇಂಥ ಮೂರು ಪ್ರಮುಖ ಪ್ರಕರಣಗಳು ನಡೆದಿವೆ.

ಮೊದಲ ಪ್ರಕರಣದಲ್ಲಿ, ಪಾನ್–ಆಧಾರ್ ಕಾರ್ಡ್ ವಿವರಗಳನ್ನು ಸಲ್ಲಿಸದೆ ಆಭರಣಗಳನ್ನು ಖರೀದಿಸುವ ಮಿತಿಯನ್ನು ಮೋದಿ ಸರಕಾರ ಪ್ರತಿಯೊಂದು ವ್ಯವಹಾರಕ್ಕೆ ಎರಡು ಲಕ್ಷ ರೂಪಾಯಿಗಳಿಗೆ ಏರಿಸಿದೆ. 50,000 ರೂಪಾಯಿಗಳಿಗಿಂತ ಅಧಿಕ ಮೊತ್ತದ ಆಭರಣಗಳನ್ನು ಖರೀದಿಸುವ ಪ್ರತಿ ವ್ಯವಹಾರಕ್ಕೆ ಪಾನ್ ಮತ್ತು ಆಧಾರ್ ಕಡ್ಡಾಯಗೊಳಿಸುವ ಸಲುವಾಗಿ ಸರಕಾರ ಇದೇ ಆಗಸ್ಟ್‌ನಲ್ಲಿ 'ಹಣ ಶುಭ್ರಗೊಳಿಸುವುದಕ್ಕೆ ತಡೆ ಕಾಯ್ದೆ'ಗೆ ತಿದ್ದುಪಡಿ ತಂದಿತ್ತು. ಅದರ ಪ್ರಕಾರ 50,000 ರೂಪಾಯಿಗಿಂತ ಅಧಿಕ ಮೊತ್ತದ ಚಿನ್ನ ಅಥವಾ ಇತರ ಸ್ವರೂಪಗಳ ಆಭರಣಗಳ ಖರೀದಿಗೆ ಕಟ್ಟುನಿಟ್ಟಿನ 'ನಿಮ್ಮ ಗ್ರಾಹಕರನ್ನು ಅರಿಯಿರಿ' (ನೋ ಯುವರ್ ಕಸ್ಟಮರ್– ಕೆವೈಸಿ) ನಿಯಮಗಳನ್ನು ಪಾಲಿಸಬೇಕಾಗಿತ್ತು. ಕಪ್ಪು ಹಣವನ್ನು ಬಿಳಿಯಾಗಿ ಪರಿವರ್ತಿಸಲಿಕ್ಕಾಗಿ ಆಭರಣಗಳನ್ನು ಖರೀದಿಸುವುದನ್ನು ತಡೆಯುವುದು ಈ ತಿದ್ದುಪಡಿಯ ಉದ್ದೇಶವಾಗಿತ್ತು.

ಆದರೆ ಈ ನಿಯಮವನ್ನು ದುರ್ಬಲಗೊಳಿಸಿ, ಎರಡು ಲಕ್ಷ ರೂಪಾಯಿವರೆಗಿನ ಆಭರಣಗಳ ಖರೀದಿಗೆ ಕೆವೈಸಿ ನಿಯಮವನ್ನು ಕಡ್ಡಾಯಗೊಳಿಸದಿರುವ ಮೂಲಕ ಕಪ್ಪು ಹಣದ ವಿರುದ್ಧ ಹೋರಾಟದ ತನ್ನ ದಾವೆಯನ್ನು ಸರಕಾರ ಸ್ವತಃ ತಾನೇ ಕಡೆಗಣಿಸಿದೆ. ಎರಡು ಲಕ್ಷ ರೂಪಾಯಿಗಿಂತ ಕಡಿಮೆ ಮೊತ್ತದ ಆಭರಣಗಳನ್ನು ಪದೇ ಪದೇ ಖರೀದಿಸುವುದರಿಂದ ಕಪ್ಪು ಹಣವನ್ನು ಪರಿವರ್ತಿಸಲು ಹಾಗೂ ಅದನ್ನು ಬಿಳಿ ಮಾಡಲು ಅವಕಾಶ ಕಲ್ಪಿಸಿದಂತಾಗುತ್ತದೆ.

ಶ್ರೀಮಂತರು ತೆರಿಗೆಗಳನ್ನು ತಪ್ಪಿಸಿಕೊಳ್ಳಬಹುದು ಹಾಗೂ ಸರಕಾರದ ಕೃಪಾಕಟಾಕ್ಷದಲ್ಲೇ ಕಪ್ಪು ಹಣವನ್ನು ಪರಿವರ್ತಿಸಬಹುದು, ಆದರೆ ಬಡವರು ಪಡಿತರ ಮತ್ತು ಇತರ ಮೂಲ ಸೌಲಭ್ಯಗಳನ್ನು ಪಡೆಯಬೇಕಾದರೆ ಆಧಾರ್ ಸಂಪರ್ಕ ಕಲ್ಪಿಸಬೇಕೆಂಬ ಕಟ್ಟುನಿಟ್ಟಿನ ಷರತ್ತುಗಳನ್ನು ಎದುರಿಸಬೇಕು ಎಂಬುದರ ಸೂಚನೆಯಾಗಿದೆ ಇದು.

ಎರಡನೇ ಪ್ರಕರಣ, ಸರಕಾರಿ ನೌಕರರು, ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟ್‌ಗಳನ್ನು ಭ್ರಷ್ಟಾಚಾರದ ಆರೋಪಗಳಿಂದ ರಕ್ಷಿಸಲು ರಾಜಸ್ತಾನ ಬಿಜೆಪಿ ಸರಕಾರ ಹೊರಡಿಸಿದ ಸುಗ್ರೀವಾಜ್ಞೆ. ಕ್ರಿಮಿನಲ್ ಕಾನೂನುಗಳ (ರಾಜಸ್ತಾನ ತಿದ್ದುಪಡಿ) ಸುಗ್ರೀವಾಜ್ಞೆ, 2017 ಇದು ಸೆಪ್ಟೆಂಬರ್ ಆರರಿಂದಲೇ ಜಾರಿಗೆ ಬಂದಿದ್ದರೂ ಅದನ್ನು ಕಾನೂನಿನ ಭಾಗವನ್ನಾಗಿ ಮಾಡಲು ವಿಧಾನಸಭೆಯಲ್ಲಿ ಮಸೂದೆಯೊಂದನ್ನು ಮಂಡಿಸಲು ಸರಕಾರ ಮುಂದಾದಾಗಲಷ್ಟೇ ಅದು ಸಾರ್ವಜನಿಕರಿಗೆ ಗೊತ್ತಾಗಿದ್ದು. ಈಗಿರುವ ಕಾನೂನಿನ ಪ್ರಕಾರ ಸಂಬಂಧಪಟ್ಟ ಪ್ರಾಧಿಕಾರದ ಅನುಮತಿಯಿಲ್ಲದೆ ಸರಕಾರಿ ನೌಕರರ ವಿರುದ್ಧ ತನಿಖೆ ನಡೆಸಲು ಸಾಧ್ಯವಿಲ್ಲವಾದರೂ ಈ ಸುಗ್ರೀವಾಜ್ಞೆ ಅಂಥ ಪ್ರಕರಣಗಳನ್ನು ತೀವ್ರವಾಗಿ ಬೆನ್ನಟ್ಟಲು ಇನ್ನಷ್ಟು ಕಷ್ಟವಾಗುವಂತೆ ಮಾಡಿತ್ತು. ತನಿಖೆಗೆ ಅನುಮತಿ ಮಂಜೂರು ಮಾಡಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆರು ತಿಂಗಳ ಕಾಲಾವಕಾಶ ಕಲ್ಪಿಸಲಾಗಿದೆ. ಅಷ್ಟು ಮಾತ್ರವಲ್ಲದೆ ಯಾವ ವ್ಯಕ್ತಿಯ ವಿರುದ್ಧ ದೂರು ಬಂದಿದೆಯೋ ಅಂಥವರ ಗುರುತನ್ನು ಬಹಿರಂಗಪಡಿಸಿದರೆ ಎರಡು ವರ್ಷ ಜೈಲುವಾಸ ವರೆಗಿನ ಕಠಿಣ ಕ್ರಮವನ್ನು ಎದುರಿಸಬೇಕಾಗುತ್ತಿತ್ತು. ಮಾಧ್ಯಮ ಮತ್ತು ಇತರ ಯಾವುದೇ ಖಾಸಗಿ ವ್ಯಕ್ತಿ–ಸಂಸ್ಥೆಗಳು ಭ್ರಷ್ಟಾಚಾರದ ಯಾವುದೇ ಪ್ರಕರಣಗಳನ್ನು ಬಯಲು ಮಾಡದಂತೆ ಅವರ ದನಿಯನ್ನು ಅಡಗಿಸುವ ಪ್ರಯತ್ನ ಇದಾಗಿದೆ.

ವ್ಯಾಪಕ ಸಾರ್ವಜನಿಕ ವಿರೋಧದ ಹಿನ್ನೆಲೆಯಲ್ಲಿ ರಾಜಸ್ತಾನ ವಿಧಾನ ಸಭೆ ಇದನ್ನು ಸೆಲಕ್ಟ್ ಕಮಿಟಿಗೆ ಒಪ್ಪಿಸಿದೆ. ಆದರೆ ಆ ಸುಗ್ರೀವಾಜ್ಞೆ ಇನ್ನೂ ಜಾರಿಯಲ್ಲಿದೆ.

ಮೂರನೇ ಉದಾಹರಣೆಯೆಂದರೆ, ಬಿಜೆಪಿ ಅಧ್ಯಕ್ಷ ಅಮಿತ್ ಷಾ ಪುತ್ರ ಜಯ್ ಷಾ ಹಗರಣದಲ್ಲಿ ಮಾಧ್ಯಮದ ಕತ್ತು ಹಿಸುಕಲು ಕೇಂದ್ರ ಸರಕಾರ ಮತ್ತು ಬಿಜೆಪಿ ಮುಂದಾಗಿರುವ ರೀತಿ. ಹಗರಣವನ್ನು ಬಯಲು ಮಾಡಿದ 'ದಿ ವೈರ್' ಆನ್‌ಲೈನ್ ಸುದ್ದಿ ತಾಣದ ಸಂಪಾದಕರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲಾಗಿದೆ. ಮತ್ತು ಜಯ್ ಷಾನ ವ್ಯವಹಾರಗಳ ಕುರಿತು 'ದಿ ವೈರ್'ನಲ್ಲಿ ಯಾವುದೇ ಸುದ್ದಿಗಳನ್ನು ಪ್ರಕಟಿಸಬಾರದು ಎಂದು ಅಹಮದಾಬಾದ್‌ನ ಒಂದು ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ (ಇಂಜಂಕ್ಷನ್) ಪಡೆಯಲಾಗಿದೆ. ಷಾ ಪರವಾಗಿ ನ್ಯಾಯಾಲಯದಲ್ಲಿ ಹಾಜರಾಗಲು ಹೆಚ್ಚುವರಿ ಸೊಲಿಸಿಟರ್ ಜನರಲ್‌ಗೆ ಮೋದಿ ಸರಕಾರ ಅವಕಾಶ ನೀಡಿದೆ. ಪ್ರಕರಣದ ಕುರಿತು ತನಿಖೆ ನಡೆಸುವ ಬದಲಿಗೆ, ಅಮಿತ್ ಷಾ ಮಗನನ್ನು ಆತನ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಪರೀಕ್ಷೆಯಿಂದ ತಪ್ಪಿಸಿಕೊಳ್ಳಲು ನೆರವಾಗಲು ಮೋದಿ ಸರಕಾರ ಟೊಂಕ ಕಟ್ಟಿದಂತೆ ಕಾಣುತ್ತದೆ.

ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವವರನ್ನು ರಕ್ಷಿಸಲು ಈ ರೀತಿಯ ನಗ್ನ ಪ್ರಯತ್ನಗಳನ್ನು ಗಮನಿಸಿದಾಗ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದು ಮೂರುವರೆ ವರ್ಷಗಳ ನಂತರವೂ ಕಾನೂನು ಪ್ರಕಾರ ಲೋಕಪಾಲ ರಚಿಸಲು ಯಾವುದೇ ಕ್ರಮ ಕೈಗೊಳ್ಳದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಭ್ರಷ್ಟರನ್ನು ರಕ್ಷಿಸಲು ರಾಜಸ್ತಾನದಂಥ ಸುಗ್ರೀವಾಜ್ಞೆಗಳು ಮತ್ತು ಮಾನನಷ್ಟ ಮೊಕದ್ದಮೆ ಮೂಲಕ ಮಾಧ್ಯಮದ ಕತ್ತು ಹಿಸುಕುವ ಹೆಚ್ಚೆಚ್ಚು ಸರ್ವಾಧಿಕಾರಿ ಕ್ರಮಗಳಿಗೆ ಮೊರೆ ಹೋಗಲಾಗುತ್ತಿದೆ.

ಅನು: ವಿಶ್ವ

ಭ್ರಷ್ಟಾಚಾರ: ಬಿಜೆಪಿಯ 'ಅಮೋಘ' ದಾಖಲೆ– ಒಂದು ಪಕ್ಷಿ ನೋಟ

ಬಿಜೆಪಿ 2014ರಲ್ಲಿ ಕಾಂಗ್ರೆಸಿನ ಹಗರಣಗಳ ವಿರುದ್ಧ ಭಾರೀ ಪ್ರಚಾರ ನಡೆಸಿತ್ತು. ಆದರೆ 'ನಾ ಖಾವೂಂಗ, ನಾ ಖಾನೇ ದೂಂಗಾ' (ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ) ಎಂಬ ಮೋದಿಯವರ ಪ್ರಚಾರ ವೈಖರಿಯಿಂದ ಮನಸೋತ ಬಹಳಷ್ಟು ಮಂದಿಗೆ ಈ ಮೂರು ವರ್ಷಗಳಲ್ಲಿ ಭ್ರಮ ನಿರಸನವಾಗಿದೆ. ಮುಖ್ಯವಾಗಿ ಲೋಕಪಾಲರನ್ನು ನೇಮಿಸಲು ಅದಕ್ಕೆ ಮೂರು ವರ್ಷಗಳಾದರೂ ಮನಸ್ಸಾಗಿಲ್ಲ. ಕಾರಣ ಸ್ಪಷ್ಟ. ವಿವಿಧ ರಾಜ್ಯಗಳಲ್ಲಿ ಅಧಿಕಾರ ನಡೆಸಿರುವ, ನಡೆಸುತ್ತಿರುವ ಇದೂ ಕಾಂಗ್ರೆಸನಷ್ಟೇ ಭ್ರಷ್ಟಾಚಾರದಲ್ಲಿ ಮುಳುಗಿರುವ ಪಕ್ಷ ಎಂಬುದಕ್ಕೆ ಹಲವು ದಾಖಲೆಗಳಿವೆ, ಅಂತಹ ದಾಖಲೆಗಳಿಂದ ಪಡೆದ ಒಂದು ಸ್ಥೂಲ ಪಟ್ಟಿ ಇಲ್ಲಿದೆ.

ಗುಜರಾತ್

* ಗುಜರಾತ್ ಸ್ಟೇಟ್ ಪೆಟ್ರೋಲಿಯಂ ಕಾರ್ಪೊರೇಷನ್ (ಜಿಎಸ್‌ಪಿಸಿ) ಒಡೆತನದಲ್ಲಿ 2.2 ಕೋಟಿ ರೂ. ಬೆಲೆಬಾಳುವ ಅನಿಲ ಇದೆ ಎಂದು 2005ರಲ್ಲಿ ಮೋದಿಯವರು ಹೇಳಿದ್ದರು. ಅದೀಗ 20 ಸಾವಿರ ಕೋಟಿ ರೂ. ನಷ್ಟದಲ್ಲಿದೆ, ಅನಿಲ ಇಲ್ಲ– ಸಾರ್ವಜನಿಕ ವಲಯದ ಒಎನ್‌ಜಿಸಿ ಈ ನಷ್ಟದ ಜೊತೆಗೆ ಅದದನ್ನು ವಹಿಸಿಕೊಳ್ಳುವಂತೆ ಬಲವಂತ ಮಾಡಲಾಗುತ್ತಿದೆ.

* ಜಿಎಸ್‌ಪಿಸಿ ಪಿಪವಾವ್ ಪವರ್ ಸ್ಟೇಶನ್– 49% ಶೇರುಗಳನ್ನು ಸ್ವಾನ್ ಎನರ್ಜಿ ಎಂಬ ಕಂಪನಿಗೆ ಕೇವಲ 381 ಕೋಟಿ ರೂ.ಗೆ ಟೆಂಡರ್ ಕರೆಯದೆ –2010

* ಫೋರ್ಡ್, ಎಲ್‌ಅಂಡ್ ಟಿ, ಅದಾಣಿ, ಎಸ್ಸಾರ್, ರಿಲಯಂಸ್‌ಗೆ ಕಡಿಮೆ ದರದಲ್ಲಿ ಭೂಮಿ ನೀಡಿಕೆ(2011–12) . ಇದರಿಂದ ಸರಕಾರಕ್ಕಾಗಿರುವ ನಷ್ಟ ರೂ. 500 ಕೋಟಿ

* ಅಂಗನವಾಡಿ ಆಹಾರ ಹಗರಣ–2014
ರೂ. 500 ಕೋಟಿ

* ಅಕ್ಕಿ ಹಗರಣ 2004–05 ರೂ. 500 ಕೋಟಿ

* ಜಮೀನು ಮಂಜೂರಾತಿ– ಮಂತ್ರಿಗಳ ಸಂಬಂಧಿಕರಿಗೆ–ನಷ್ಟ ರೂ. 143.5 ಕೋಟಿ

* ಟಾಟಾ ನಾನೋ ಸ್ಥಾವರಕ್ಕೆ, ಅಗ್ಗದ ಜಮೀನು, 'ಸಾಲ 'ಸೌಲಭ್ಯ ಮತ್ತು ಇತರ ರಿಯಾಯ್ತಿಗಳು ಅಂದಾಜು ನಷ್ಟ ರೂ.33000 ಕೋಟಿ

ಬಿಹಾರ :(ಜೆಡಿಯು–ಬಿಜೆಪಿ ಸರಕಾರದ ಅವಧಿಯಲ್ಲಿ)

* ಸೃಜನ್ ಹಗರಣ – 2004–14
ನುಂಗಿ ಹಾಕಿದ ಹಣ ದಅಂದಾಜು : ರೂ.880 ಕೋಟಿ
ಸಿಬಿಐ ತನಿಖೆ ನಡೆಯುತ್ತಿದೆ.

ಛತ್ತೀಸ್‌ಗಡ

* ಪಡಿತರ ಹಗರಣ –2004ರಿಂದ –ಮುಖ್ಯಮಂತ್ರಿ ರಮಣ್ ಸಿಂಗ್ , ಇತರ ಮಂತ್ರಿಗಳು, ಅಧಿಕಾರಿಗಳ ಮೇಲೆ ರೂ. 36000 ಕೋಟಿ ಲಂಚದ ಆಪಾದನೆ, ತನಿಖೆ ನಿಧಾನವಾಗಿ, ದೋಷಪೂರ್ಣವಾಗಿ ನಡೆ–ಯುತ್ತಿದೆ.

ರಾಜಸ್ತಾನ

* ಗಣಿ ಹಗರಣ–2015– ಮೊತ್ತ ರೂ.45,000 ಕೋಟಿ

ಎಸ್‌ಪಿಎಂಎಲ್ ಹಗರಣ– 2008–13ರ ಕಾಂಗ್ರೆಸ್ ಸರಕಾರ ದಹಗರಣ, ಅದಪ್ರತಿಪಕ್ಷದಲ್ಲಿದ್ದಾಗ ತನಿಖೆಗೆ ಆಗ್ರಹ –ತನಿಖೆ ನಡೆಯುತ್ತಿದ್ದಾಗ ಬೊಜೆಪಿ ಮುಖಂಡರ ಶಾಮೀಲು ಪತ್ತೆ 2013 ಅಧಿಕಾರಕ್ಕೆ ಬಂದ ಮೇಲೆ ಮೌನ

* ಲಲಿತ್ ಮೋದಿ ಹಗರಣ

ಮಹಾರಾಷ್ಟ್ರ

* ಚಿಕ್ಕಿ ಹಗರಣ –2015–ರೂ. 206 ಕೋಟಿ
ಪ್ರಶ್ನಾರ್ಹ ಕ್ಲೀನ್ ಚಿಟ್

*ಭೂಹಗರಣ
ಮಹಾರಾಷ್ಟ್ರ ಬಿಜೆಪಿ ಸಂಪುಟದಲ್ಲಿ ನಂ.2 ಮಂತ್ರಿ ಏಕನಾಥ ಖಂಡ್ಸೆ 40 ಕೋಟಿ ರೂ. ಸರಕಾರೀ ಆಸ್ತಿಗ ರೂ. 3.75 ಕೋಟಿ'

ಉತ್ತರಾಖಂಡ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಗರಣ –2012–15
ರೂ. 300 ಕೋಟಿ

ಮಧ್ಯಪ್ರದೇಶ

ವ್ಯಾಪಂ ಹಗರಣ– ವೃತ್ತಿಪರ ಕಾಲೇಜುಗಳಲ್ಲಿ ಪ್ರವೇಶಕ್ಕೆ ಸಂಬಂಧಪಟ್ಟ ಹಗರಣ– ತನಿಖೆ ಸಾಗಿದೆ ಆರಮವಾಗಿ. ಈ ನಡುವೆ ಇದಕ್ಕೆ ಸಂಬಂಧಪಟ್ಟವರೆನ್ನಲಾದ ಹಲವರ ಕೊಲೆಯಾಗಿದೆ. ಈ ಸಂಖ್ಯೆ 23 ರಿಂದ 40 ರವರೆಗೂ ಇದೆ.

ಇವಲ್ಲದೆ ಇನ್ನು ಕೆಲವು ಹಗರಣಗಳು

*** ಬಿರ್ಲಾ ಪಾವತಿ**

2013ರಲ್ಲಿ ಆದಾಯ ತೆರಿಗೆ ಇಲಾಖೆ ಆದಿತ್ಯ ಬಿರ್ಲಾ ಗುಂಪಿನ ಮೇಲೆ ದಾಳಿ ನಡೆಸಿದಾಗ ಸಿಕ್ಕ ದಸ್ತಾವೇಜುಗಳಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು 'ಕೊಡಲಾಗಿದೆ' ಎಂಬುದರ ಪಟ್ಟಿಯಿತ್ತು. ಅದರಲ್ಲಿ ಒಂದು– "ಗುಜರಾತ್ ಸಿಎಂ'ಗೆ ರೂ. 25 ಕೋಟಿ ರೂ."ಎಂದಿದೆ. ಯುಪಿಎ ಇದರ ವಿಚಾರಣೆಯನ್ನು ನಡೆಸಲಿಲ್ಲ, ಏಕೆಂದರೆ ಅದರಲ್ಲಿ ಆಗ ಸರಕಾರದಲ್ಲಿದ್ದವರ ಹೆಸರುಗಳೂ ಇದ್ದವು.

ನ ಖಾವೂಂಗಾ ಮೋದಿಯವರೂ ಏಕೆ ನಡೆಸಲಿಲ್ಲ? "ಗುಜರಾತ್ ಸಿಎಂ" ಎಂಬ ಬರಹದಿಂದಾಗಿಯೇ?

*** ಸಹಾರ ಪಾವತಿ**

ನವಂಬರ್ 2014ರಲ್ಲಿ ಆದಾಯ ತೆರಿಗೆ ಇಲಾಖೆ ಸಹಾರ ಗುಂಪಿನ ಮೇಲೆ ದಾಳಿ ನಡೆಸಿದಾಗ 2013–14 ಯಾರಾರಿಂದ ಎಷ್ಟೆಷ್ಟು ಹಣ ಬಂದಿದೆ, ಯಾರ್‍ಯಾರಿಗೆ ಎಷ್ಟು ಕೊಟ್ಟಿದೆ ಎಂಬುದರ ಒಂದು ಪಟ್ಟಿ ದೊರಕಿತು. ಅದರಲ್ಲಿಯೂ ಒಂದು ಸಾಲು "ಗುಕಜರಾತ್ ಸಿಎಂ ಮೋದೀಜೀ" ಎಂದಿದೆ. ಸಂದ ಹಣ ರೂ. 40 ಕೋಟಿ;

ಇನ್ನೊಂದು ಸಾಲು " ಎಂಪಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ರೂ. 50 ಕೋಟಿ

ಮತ್ತೊಂದು ಸಾಲು:"ಛತ್ತಿಸ್‌ಗಡ ಸಿಎಂರೂ. 4ಕೋಟಿ.

ಸುಪ್ರಿ ಕೋರ್ಟ್‌ನ ಸ್ಪಷ್ಟ ನಿರ್ದೇಶನಗಳಿದ್ದರೂ ಈ ಕೇಸನ್ನು ಮುಚ್ಚಿ ಹಾಕಲಾಗಿದೆ.

*** ಪನಾಮಾ ಪೇಪರ್ಸ್**

ಪನಾಮದ ಒಂದು ಹಣಕಾಸು ಸೇವಾಸಂಸ್ಥೆಯಿಂದ ಸೋರಿ ಬಂದ ದಾಖಲೆಗಳಲ್ಲಿ ವಿದೇಶಿ ಖಾತೆ ಹೊಂದಿರುವ 474 ಭಾರತೀಯ ವ್ಯಕ್ತಿಗಳ/ ಸಂಸ್ಥೆಗಳ ಹೆಸರುಗಳಿವೆ. ಅದರಲ್ಲಿ ಒಂದು ಛತ್ತಿಸ್‌ಗಡ್ ಮುಖ್ಯಮಂತ್ರಿ ರಮಣ್ ಸಿಂಗ್ ಮಗ ಅಭಿಷೇಕ್ ಸಿಂಗ್.

ಈ ಬಗ್ಗೆ ಇದುವರೆಗೆ ತನಿಖೆ ನಡೆಸಿಲ್ಲ.

ಒಟ್ಟಿನಲ್ಲಿ ದೇಶದ ಜನಗಳಿಗೆ ಸಲ್ಲ ಬೇಕಾದ್ದನ್ನು ಕೊಡವಾಡುವುದನ್ನೇ ಬುರ್ಜ್ವಾ ಪಕ್ಷಗಳ ಆಳುವ ಮಂದಿ ಹಣ–ಮಾಡುವ ಯಂತ್ರಗಳಾಗಿ ಪರಿವರ್ತಿಸಿದ್ದಾರೆ. ಇದರಲ್ಲಿ ಬಿಜೆಪಿಯದ್ದು ಕಾಂಗ್ರೆಸಿಗೆ ಸರಿಸಾಟಿಯಾದ ದಾಖಲೆ. ತಮ್ಮದೇ ಚಮಚಾ ಬಂಡವಾಳಿಗರನ್ನು ಸಾಕುವುದು ಇನ್ನೊಂದು ಲಕ್ಷಣ. ಬಿಜೆಪಿ ಇಂತಹ ಪಟ್ಟಿಯಲ್ಲಿ ಮೊದಲ ಹೆಸರಾದ ಅದಾಣಿ ಗುಂಪಿನ ಹಗರಣಗಳ ಒಂದು ದೊಡ್ಡ ಪಟ್ಟಿಯೇ ಇದೆ. ಅಧಿಕಾರಕ್ಕೆ ಬಂದ ಮೇಲೆ ಇಂತವರ ಪಟ್ಟಿ ಸಹಜವಾಗಿಯೇ ಬೆಳೆಯುತ್ತದೆ.





ಘನತೆಯ ಮತ್ತು ಗೌರವಯುತ ಕೆಲಸಕ್ಕೆ ನಮ್ಮ ಮೂಲ ಹಕ್ಕುಗಳ ರಕ್ಷಣೆಗೆ ಮತ್ತು ನಮ್ಮ ಮಕ್ಕಳ ಭವಿಷ್ಯಕ್ಕಾಗಿ ದೇಶವನ್ನು ಉಳಿಸಲಿಕ್ಕೆ

ಸಂಸತ್ತಿನ ಬಳಿ ಮಹಾಪಡಾವ್

ಇದು ನವ-ಉದಾರವಾದದ ವಿರುದ್ದ ಹೋರಾಟದ ಒಂದು ಮೈಲಿಗಲ್ಲಾಗಬೇಕು; ಜಂಟಿ ಕಾರ್ಮಿಕ ಆಂದೋಲನದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಬೇಕು ಮತ್ತು ಎಲ್ಲ ಶೋಷಣೆಗಳಿಂದ ಮುಕ್ತಿಯತ್ತ ಹೋರಾಟದಲ್ಲಿ ಒಂದು ಮೈಲಿಗಲ್ಲಾಗಬೇಕು.



ಡಾ.ಕೆ.ಹೇಮಲತಾ ಅಧ್ಯಕ್ಷರು, ಸಿಐಟಿಯು

ಆಗಸ್ಟ್ 8, 2017ರಂದು ದಿಲ್ಲಿಯಲ್ಲಿ ನಡೆದ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ರಾಷ್ಟ್ರೀಯ ಒಕ್ಕೂಟಗಳ ಜಂಟಿ ರಾಷ್ಟ್ರೀಯ ಸಮಾವೇಶ ನವಂಬರ್ 9 ರಿಂದ 11 ರ ವರೆಗೆ ಸಂಸತ್ತಿನ ಎದುರು ಒಂದು ಬೃಹತ್ 'ಮಹಾಪಡಾವ್' (ಧರಣಿ) ನಡೆಸಲು ಚಾರಿತ್ರಿಕ ಕರೆ ಕೊಟ್ಟಿತು.

ಈ ದೇಶದ ಕಾರ್ಮಿಕರು ತಮ್ಮ ಜೀವ-ಜೀವನ-ಜೀವನಾಧಾರಗಳ ಮೇಲೆ, ದುಡಿಮೆಯ ಸ್ಥಳಗಳಲ್ಲಿ ತಮ್ಮ ಮೂಲ ಹಕ್ಕುಗಳ ಮೇಲೆ, ಒಂದು ಘನತೆಯ ಮತ್ತು ಗೌರವಯುತ ಬದುಕಿನ ಮೂಲಭೂತ ಹಕ್ಕಿನ ಮೇಲೆ ಇನ್ನಷ್ಟು ಹಲ್ಲೆಗಳನ್ನು ತೆಪ್ಪಗೆ ಸಹಿಸಲು ಸಿದ್ಧರಿಲ್ಲ ಎಂದು ಅಧಿಕಾರದ ಮದವೇರಿದಂತಿರುವ ಮೋದಿ ಸರಕಾರಕ್ಕೆ ಎಚ್ಚರಿಕೆ ನೀಡುವುದೇ ಈ 'ಮಹಾಪಡಾವ್'ನ ಆಶಯ. ಬಿಜೆಪಿ ಸರಕಾರ ಕಾರ್ಮಿಕರನ್ನು ಮತ್ತು ದುಡಿಯುವ ಜನರನ್ನು ಬಲಿಪಶು ಮಾಡುವ, ಸಂಪತ್ತು ಸೃಷ್ಟಿಸುವ ಕಾರ್ಮಿಕರ ಹಿತಗಳನ್ನು ಬಲಿಗೊಟ್ಟು ದೊಡ್ಡ ದೇಶಿ-ವಿದೇಶಿ ಕಾರ್ಪೊರೇಟ್‌ಗಳು ಸಂಪತ್ತು ಸೂರೆ ಮಾಡಲು ನೆರವಾಗುವ ನವ-ಉದಾರವಾದಿ ಅಜೆಂಡಾವನ್ನು ಮುಂದುವರೆಸಿದ್ದೇ ಆದಲ್ಲಿ ಕಾರ್ಮಿಕ ವರ್ಗದ ಮುಂದೆ ಅನಿರ್ದಿಷ್ಟ ಕಾಲದ ಮುಷ್ಕರವನ್ನು ನಡೆಸುವುದನ್ನು ಬಿಟ್ಟು ಅನ್ಯ ಮಾರ್ಗ ಉಳಿಯುವುದಿಲ್ಲ ಎಂದು ರಾಷ್ಟ್ರೀಯ ಸಮಾವೇಶ ಘೋಷಿಸಿತ್ತು. ಇಂತಹ ಒಂದು ಸಂದರ್ಭಕ್ಕೆ ಸಿದ್ಧಗೊಳ್ಳಬೇಕು ಎಂದು ರಾಷ್ಟ್ರೀಯ ಸಮಾವೇಶ ಕಾರ್ಮಿಕ ವರ್ಗಕ್ಕೆ ಕರೆ ನೀಡಿತ್ತು.

ಕಾರ್ಮಿಕರ ಬೇಡಿಕೆಗಳು ಹೊಸದೇನಲ್ಲ. ಇವು ಸಮಸ್ತ ಕಾರ್ಮಿಕ ಆಂದೋಲನ ಎತ್ತಿರುವ ಬೇಡಿಕೆಗಳು. ಎರಡು ವರ್ಷಗಳ ಹಿಂದೆ ಸಪ್ಟಂಬರ್ 2, 2015ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಎರಡು ದಿನಗಳ ಹಿಂದಿನ ವರೆಗೂ ಜತೆಗಿದ್ದು ನಂತರ ಕೈಕೊಟ್ಟವರು ಕೂಡ ಈ ಬೇಡಿಕೆಗಳನ್ನು ಎತ್ತಿದವರಲ್ಲಿ ಸೇರಿದ್ದರು. ಇವು ಸಮಸ್ತ ಕಾಮಿಕ ವರ್ಗದ, ಅಷ್ಟೇ ಏಕೆ, ಸಮಸ್ತ ಶ್ರಮಜೀವಿ, ದೇಶಪ್ರೇಮಿ ಜನಗಳ ಬೇಡಿಕೆಗಳೇ. ಜಂಟಿ ಕಾರ್ಮಿಕ ಆಂದೋಲನ ಈ ಬೇಡಿಕೆಗಳನ್ನು 2009ರಿಂದ ಎತ್ತುತ್ತ ಬಂದಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಅಧಿಕಾರದಲ್ಲಿದ್ದಾಗ ಈ ಬೇಡಿಕೆಗಳನ್ನು ಎತ್ತಲಾಗಿತ್ತು. ಕಳೆದ ಮೂರು ವರ್ಷಗಳಿಂದ ಇದೇ ಬೇಡಿಕೆಗಳನ್ನು ಪ್ರಧಾನ ಮಂತ್ರಿ ಮೋದಿಯವರ ಅಡಿಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಮುಂದೆ ಎತ್ತಲಾಗಿದೆ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ತನ್ನದೇ ಬಹುಮತದಿಂದ ಅಧಿಕಾರಕ್ಕೆ ಬಂದಂದಿನಿಂದ ಕಾರ್ಮಿಕರು ಮತ್ತು ಶ್ರಮಿಕರ ಜೀವನ ಪರಿಸ್ಥಿತಿಗಳ ಮೇಲಿನ ಪ್ರಹಾರಗಳು ಇನ್ನಷ್ಟು ತೀವ್ರಗೊಂಡವು. ಒಂದು ದೇಶದ ಸಂಪತ್ತು ಮತ್ತು ಸಾರ್ವಜನಿಕ ಸಂಪನ್ಮೂಲಗಳನ್ನು ಜನತೆಯಿಂದ ದೊಡ್ಡ ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ವರ್ಗಾಯಿಸುವುದು ನವ-ಉದಾರವಾದದ ಸಾರ-ಸತ್ವ. ಬಿಜೆಪಿ ಸರಕಾರ ಈ ನವ-ಉದಾರವಾದಿ ಧೋರಣೆಗಳ ಅನುಷ್ಠಾನವನ್ನು ತ್ವರಿತಗೊಳಿಸಿದೆ. ಶೇರು ಹಿಂಪಡಿಕೆ, ಸಾರ್ವಜನಿಕ ವಲಯದ ಖಾಸಗೀಕರಣ, 'ವ್ಯಾಪಾರ ಸುಗಮತೆ'ಯನ್ನು ಉತ್ತಮಗೊಳಿಸುವ ನೆಪದಲ್ಲಿ ಕಾರ್ಮಿಕ ಕಾನೂನುಗಳಲ್ಲಿ ತಿದ್ದುಪಡಿಗಳು, ನೋಟುರದ್ಧತಿ ಇವೆಲ್ಲದರ ಉದ್ದೇಶ ಇದೇನೇ.

ಹುಸಿಯಾದ ಚುನಾವಣಾ ಆಶ್ವಾಸನೆಗಳು ವಿಫಲತೆ ಮುಚ್ಚಿಕೊಳ್ಳಲು ಘೋಷಣೆಗಳು

ಈ ಸರಕಾರದ ಎಲ್ಲ ಆಶ್ವಾಸನೆಗಳು-ಪ್ರತಿ ವರ್ಷ ಎರಡು ಕೋಟಿ ಉದ್ಯೋಗಗಳು, ಬೆಲೆ ಇಳಿಕೆ, 'ಸಬ್‌ಕಾ ಸಾಥ್ ಸಬ್‌ಕಾವಿಕಾಸ್', ಅಚ್ಛೇ ದಿನ್, ವಿದೇಶಿ ಬ್ಯಾಂಕುಗಳಲ್ಲಿ ಪೇರಿಸಿಟ್ಟ ಕಪ್ಪು ಹಣ ವಾಪಸ್ ತಂದು ಎಲ್ಲರ ಬ್ಯಾಂಕ್ ಖಾತೆಗೆ ತಲಾ 15ಲಕ್ಷರೂ. ಠೇವಣಿ, ಈ ಪ್ರತಿಯೊಂದು ಭರವಸೆ-ಹುಸಿಯಾಗಿದೆ. ಬದಲಾಗಿ, ಆರ್ಥಿಕ ಪರಿಸ್ಥಿತಿ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಮೋದಿಯವರ ಅತ್ಯಂತ ವೈಯಕ್ತಿಕ ಪ್ರತಿಷ್ಠೆಯ, ಭಾರೀ ಪ್ರಚಾರ ನೀಡಿದ ಕ್ರಮವಾದ ನೋಟುರದ್ಧತಿ ಕಾರ್ಮಿಕರ, ಅದರಲ್ಲೂ ಅಸಂಘಟಿತ ವಲಯದ ಕಾರ್ಮಿಕರ ಮತ್ತು ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ದಿಮೆಗಳು ಮತ್ತು ವ್ಯಾಪಾರಸ್ಥರ ಬದುಕಿನಲ್ಲಿ ಅನಾಹುತಗಳನ್ನೇ ಹೇರಿದೆ. ಜಿಎಸ್‌ಟಿ ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರಕಾರಗಳ ಹಕ್ಕುಗಳ ಮೇಲೆ ಪ್ರಹಾರ ಮಾಡಿರುವುದಷ್ಟೇ ಅಲ್ಲ, ಅಗತ್ಯ ಔಷಧಿಗಳೂ ಸೇರಿದಂತೆ ಜನಸಾಮಾನ್ಯರ ಬಳಕೆಯ ವಸ್ತುಗಳ ಮೇಲಿನ ತೆರಿಗೆ ಹೆಚ್ಚಿಸಿ ಬೆಲೆಗಳನ್ನು ಹೆಚ್ಚಿಸಿದೆ. ಇದು ಲಕ್ಷಾಂತರ ಸಣ್ಣ ವ್ಯಾಪಾರಿಗಳನ್ನು ಮತ್ತು ಅವರಿಗಾಗಿ ದುಡಿಯುತ್ತಿರುವ ಅಸಂಘಟಿತ ಕಾರ್ಮಿಕರನ್ನು ಬಹುವಾಗಿ ತಟ್ಟಿದೆ.

ಆದರೆ ಸರಕಾರ ತನ್ನ ವಿಫಲತೆಗಳನ್ನು 'ಮೇಕ್‌ಇನ್ ಇಂಡಿಯ', ಸ್ಕಿಲ್‌ಇಂಡಿಯ', ಸ್ಟಾರ್ಟ್ ಅಪ್ ಇಂಡಿಯ', ಸ್ವಚ್ಛ ಭಾರತ್' ಇತ್ಯಾದಿಗಳ ಮೂಲಕ ಮರೆಮಾಚಲು ಪ್ರಯತ್ನಿಸುತ್ತಿದೆ. ಹೋರಾಟಕ್ಕಿಳಿದ ರೈತರನ್ನು ಸಾಯಿಸಲಾಗುತ್ತಿದೆ. ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವ ಕಾರ್ಮಿಕರನ್ನು ಸದೆಬಡಿಯಲಾಗುತ್ತಿದೆ.

ತಪ್ಪು ಲೆಕ್ಕಾಚಾರ- ಅವಕಾಶ ಕೊಡುವುದಿಲ್ಲ

ಇನ್ನೊಂದೆಡೆಯಲ್ಲಿ, ಕಾರ್ಮಿಕರು ಮತ್ತು ಜನಸಾಮಾನ್ಯರು ಹೀಗೆ ಒಬ್ಬ ಮಾಜಿ ಆರೆಸ್ಸೆಸ್ ಪ್ರಚಾರಕ ಪ್ರಧಾನ ಮಂತ್ರಿಯಾಗಿರುವ ಬಿಜೆಪಿ ನೇತೃತ್ವದ ಸರಕಾರದ ಧೋರಣೆಗಳಿಂದಾಗಿ ಸಂಕಟಪಡುತ್ತಿರುವಾಗಲೇ, ಇನ್ನೊಂದೆಡೆಯಲ್ಲಿ, ಬಿಜೆಪಿಯ ಮಾರ್ಗದರ್ಶಕ ಮತ್ತು ಗುರುವಾದ ಆರೆಸ್ಸೆಸ್ ದೇಶಾದ್ಯಂತ ಇರುವ ತನ್ನ ವಿಭಿನ್ನ ಮುಖವಾಡಗಳ ಸಂಘಟನೆಗಳನ್ನು ಬಳಸಿಕೊಂಡು ಕಾರ್ಮಿಕರು ಮತ್ತು ಜನಗಳು ಈ ಧೋರಣೆಗಳ ವಿರುದ್ಧ ಹೋರಾಟಗಳಲ್ಲಿ ಒಂದಾಗದಂತೆ ನೋಡಿಕೊಳ್ಳುತ್ತಿದೆ. ಅವರು ಜಾತಿ, ಧರ್ಮ ಇತ್ಯಾದಿಗಳಲ್ಲಿ ಜನಗಳನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ. 'ಗೋರಕ್ಷಕರು' ಎನಿಸಿಕೊಂಡವರು ದೇಶದ ಎಲ್ಲೆಡೆಗಳಲ್ಲಿ ಬೇಟೆಯಾಡುತ್ತಿದ್ದಾರೆ- ದಲಿತರನ್ನು, ಅಲ್ಪಸಂಖ್ಯಾತರನ್ನು, ಅದರಲ್ಲೂ ಮುಸ್ಲಿಮರನ್ನು ಹೊಡೆಯುವುದು, ಬಡಿಯುವುದು, ಇರಿಯುವುದು, ಕೊಲ್ಲುವುದು ಇತ್ಯಾದಿಗಳ ಮೂಲಕ. ತಮಾಷೆಯೆಂದರೆ ದಲಿತರಿಗೆ ಈ ಮನುವಾದಿಗಳ ಸಮಾಜವೇ ವಿಧಿಸಿರುವ ಕೆಲಸಗಳನ್ನು ಮಾಡುತ್ತಿರುವಾಗಲೇ ,ಅಂದರೆ ಸತ್ತ ದನಗಳ ಚರ್ಮ ತೆಗೆಯುವಾಗಲೇ ಬಡಿಯುತ್ತಿದ್ದಾರೆ. ಅತ್ಯಂತ ಹೇಯ ಮತ್ತು ನಾಚಿಕಗೇಡಿನ ಸಂಗತಿಯಿದು!

ಸರಕಾರದ ಅಧಿಕಾರವನ್ನು ಬಳಸಿಕೊಂಡು ಇಡೀ ದೇಶದ ಮೇಲೆ ಆರೆಸ್ಸೆಸ್‌ನ ಸಿದ್ಧಾಂತವನ್ನು ಹೇರಲಾಗುತ್ತಿದೆ. ಸರಕಾರದ ಸಂಸ್ಥೆಗಳಲ್ಲಿ ಸಂಬಂಧಪಟ್ಟ ಕ್ಷೇತ್ರಗಳಲ್ಲಿ ಪ್ರತಿಷ್ಠಿತರಾಗಿರುವ, ದೇಶದ ಸಂವಿಧಾನಕ್ಕೆ ಬದ್ಧರಾದ ವ್ಯಕ್ತಿಗಳನ್ನು ನೇಮಿಸುವ ಬದಲು ಅ ಸಂಸ್ಥೆಗಳಲ್ಲಿ ಆರೆಸ್ಸೆಸ್ ಸಿದ್ಧಾಂತಿಗಳನ್ನು ತುರುಕಲಾಗುತ್ತಿದೆ. ನಮ್ಮ ಜಾತ್ಯತೀತ ಸಮಾಜವನ್ನು ಧ್ವಂಸ ಮಾಡುವ, ಹರಿದು ಹಂಚುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ವೈಜ್ಞಾನಿಕ ಚಿಂತನೆಯ ಮೇಲೆ ಹಲ್ಲೆ ಮಾಡಲಾಗುತ್ತಿದೆ. ಅವೈಜ್ಞಾನಿಕ ವಿಚಾರಗಳನ್ನು, ಪುರಾಣ-ಮಿಥ್ಯೆಗಳನ್ನು ವಿಜ್ಞಾನ ಎಂದು ಸ್ವತಃ ಪ್ರಧಾನ ಮಂತ್ರಿಗಳೇ ಹರಡುತ್ತಿದ್ದಾರೆ. ವಿಚಾರವಾದಿ ದನಿಗಳನ್ನು, ಆರೆಸ್ಸೆಸ್ ಧೋರಣೆಗಳನ್ನು ಒಪ್ಪದವರ ದನಿಗಳನ್ನು ಅವರನ್ನು ಕೊಲ್ಲುವ ಮೂಲಕವೇ ಅಡಗಿಸಲಾಗುತ್ತಿದೆ-ಧಬೋಲ್ಕರ್, ಪನ್ಸರೆ, ಕಲ್ಬುರ್ಗಿ, ಗೌರಿ ಲಂಕೇಶ್, ಶಂತನು ಭೌಮಿಕ್- ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತಿದೆ. ಜನಗಳ ಐಕ್ಯತೆಯನ್ನು ಮುರಿದು, ಸಮಾಜದಲ್ಲಿ ಭಯೋತ್ಪಾದನೆ ಮತ್ತು ಅಪನಂಬಿಕೆಯ ವಾತಾವರಣ ಸೃಷ್ಟಿಸಿ ತಮ್ಮ ಶೋಷಣಾತ್ಮಕ ಆಳ್ವಿಕೆಯನ್ನು ಮುಂದುವರೆಸಿಕೊಂಡು ಹೋಗಬಹುದು ಎಂಬುದು ಅವರ ಯೋಚನೆ. ಇಲ್ಲ, ನಿಮ್ಮ ಲೆಕ್ಕಾಚಾರ ತಪ್ಪು ಎಂದು ಅವರಿಗೆ ಹೇಳಬೇಕಾದ ಸಮಯ ಬಂದಿದೆ. ಕಾರ್ಮಿಕ ವರ್ಗ ಆ ಲೆಕ್ಕಾಚಾರಕ್ಕೆ ಅವಕಾಶ ಕೊಡುವುದಿಲ್ಲ.

ಸ್ವಾತಂತ್ರ್ಯ ಹೋರಾಟದ ಎಲ್ಲ ಆಶಯಗಳ ನಿರಾಕರಣೆ-ಪಾತ್ರ ವಹಿಸದ ಪಕ್ಷದಿಂದ


ಎಪ್ಪತ್ತು ವರ್ಷಗಳ ಹಿಂದೆ ನಮ್ಮ ಪೂರ್ವಜರು ಬ್ರಿಟಿಶ್ ಸಾಮ್ರಾಜ್ಯಶಾಹಿಯಿಂದ ಹೋರಾಡಿ ಸ್ವಾತಂತ್ರ್ಯವನ್ನು ಪಡೆದರು. ಅವರು ಹೋರಾಡಿದ್ದು ಒಂದು ಜಾತ್ಯತೀತ ಸ್ವಾವಲಂಬಿ ದೇಶಕ್ಕಾಗಿ, ಎಲ್ಲ ಜನಗಳೂ ಸಮಾನ ಹಕ್ಕುಗಳನ್ನು ಅನುಭವಿಸಬಹುದಾದ ಒಂದು ದೇಶಕ್ಕಾಗಿ. ಅವರು ನಮ್ಮ ಜನಗಳು ಬಡತನ, ಅನಕ್ಷರತೆ, ಅನಾರೋಗ್ಯವಿರದ ಒಂದು ಘನತೆಯ ಮತ್ತು ಗೌರವಪೂರ್ಣ ಬದುಕು ನಡೆಸಲು ಸಾಧ್ಯವಾಗಲೆಂದು ಹೋರಾಡಿದರು. ಇಂತಹ ಸ್ವಾತಂತ್ರ್ಯ ಹೋರಾಟದಲ್ಲಿ ಏನೊಂದೂ ಪಾತ್ರವನ್ನು ವಹಿಸದ ಪಕ್ಷವೊಂದು, ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ಆರೆಸ್ಸೆಸ್‌ನ ಅಂಗಸಂಘಟನೆಯೊಂದು ನಮ್ಮ ಪೂರ್ವಜರು ಯಾವುದೆಲ್ಲ ಆಶಯಗಳಿಂದ ತಮ್ಮ ತನುಮನಧನಗಳನ್ನು ಅರ್ಪಿಸಿ ಹೋರಾಡಿದರೋ

ಪುಟ 10 ನೋಡಿ

ಈ ದೇಶದ ಕಾರ್ಮಿಕರು ತಮ್ಮ ಜೀವ-ಜೀವನ-ಜೀವನಾಧಾರಗಳ ಮೇಲೆ , ದುಡಿಮೆಯ ಸ್ಥಳಗಳಲ್ಲಿ ತಮ್ಮ ಮೂಲ ಹಕ್ಕುಗಳ ಮೇಲೆ, ಒಂದು ಘನತೆಯ ಮತ್ತು ಗೌರವಯುತ ಬದುಕಿನ ಮೂಲಭೂತ ಹಕ್ಕಿನ ಮೇಲೆ ಇನ್ನಷ್ಟು ಹಲ್ಲೆಗಳನ್ನು ತೆಪ್ಪಗೆ ಸಹಿಸಲು ಸಿದ್ಧರಿಲ್ಲ ಎಂದು ಎಚ್ಚರಿಕೆ ನೀಡಬೇಕಾದ ಸಮಯ ಬಂದಿದೆ.

ಜನಗಳ ಐಕ್ಯತೆಯನ್ನು ಮುರಿದು, ಸಮಾಜದಲ್ಲಿ ಭಯೋತ್ಪಾದನೆ ಮತ್ತು ಅಪನಂಬಿಕೆಯ ವಾತಾವರಣ ಸೃಷ್ಟಿಸಿ ತಮ್ಮ ಶೋಷಣಾತ್ಮಕ ಆಳ್ವಿಕೆಯನ್ನು ಮುಂದುವರೆಸಿಕೊಂಡು ಹೋಗಬಹುದು ಎಂಬುದು ಆಳುವ ಮಂದಿಗಳ ಯೋಚನೆ. ಇಲ್ಲ, ನಿಮ್ಮ ಲೆಕ್ಕಾಚಾರ ತಪ್ಪು ಎಂದು ಅವರಿಗೆ ಕಾರ್ಮಿಕ ವರ್ಗ ಹೇಳಬೇಕಾದ ಸಮಯ ಬಂದಿದೆ.

ಇನ್ನು ಮುಂದೆ ಕಾರ್ಮಿಕ ವರ್ಗ ತಮ್ಮ ಸಮಸ್ಯೆಗಳಿಗೆ ಕಾರಣಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಅಗತ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಅದು ಈ ಕಾರಣಗಳನ್ನು ಅರ್ಥಮಾಡಿಕೊಳ್ಳಬೇಕಷ್ಟೇ ಅಲ್ಲ, ತಮ್ಮ ಸಂಕಟಗಳಿಗೆ ಹೊಣೆಯಾದ ಧೋರಣೆಗಳ ವಿರುದ್ಧ ಹೋರಾಟದ ನೇತೃತ್ವವನ್ನೂ ವಹಿಸಬೇಕಾಗಿದೆ.



ಕೈ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವುದು, ಈಗ ಬಂಡವಾಳಶಾಹಿಯ ಅಡಿಯಲ್ಲಿ ಇರದ ಸಣ್ಣ ಮತ್ತು ಬಂಡವಾಳಶಾಹಿ–ಪೂರ್ವ ಉತ್ಪಾದನಾ ವಿಧಾನವನ್ನು ಬಂಡವಾಳಶಾಹಿಯ ನಿಯಂತ್ರಣದಡಿ ತರುವ ಪ್ರಯತ್ನ. ಅಂತಹ ಉತ್ಪಾದಕರ ಆಸ್ತಿ–ಸಾಧನಗಳನ್ನು, ಮಾರುಕಟ್ಟೆಗಳನ್ನು ಕಸಿದುಕೊಳ್ಳುವ ಪ್ರಯತ್ನ. ದೇಶದ ಎಲ್ಲಾ ಉತ್ಪಾದಕ ಸಂಪನ್ಮೂಲಗಳನ್ನು ಕಸಿದುಕೊಂಡು ಕೇಂದ್ರೀಕರಿಸುವ ಈ ಪ್ರಯತ್ನ ಒಂದು ವರ್ಗದಾಳಿ. ಮೋದಿ ಸರಕಾರ ಈ ವರ್ಗದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ನೋಟು ನಿಷೇಧ ಮತ್ತು ಈಗ ಜಿ.ಎಸ್.ಟಿ. ತಾಳಿರುವ ರೂಪ ಎರಡೂ ರೈತ ಕೃಷಿ ಮತ್ತು ಸಣ್ಣ ಮತ್ತು ಬಂಡವಾಳಶಾಹಿ–ಪೂರ್ವ ಉತ್ಪಾದನಾ ವಿಧಾನವನ್ನು ನಾಶ ಮಾಡುವ ವ್ಯವಸ್ಥಿತ (ತಿಕ್ಕಲು ಅಥವಾ ಬರಿಯ ಚುನಾವಣಾ–ಪ್ರೇರಿತ ಅಲ್ಲ) ಪ್ರಯತ್ನ. ಅದಕ್ಕೆ ಗರಿಷ್ಟ ಪ್ರತಿರೋಧ ಒಡ್ಡಿ ರೈತ ಕೃಷಿ, ಸಣ್ಣ ಉತ್ಪಾದಕರ, ಚಿಲ್ಲರೆ ವ್ಯಾಪಾರಿಗಳನ್ನು ರಕ್ಷಿಸುವುದು ದುಡಿಯುವ ವರ್ಗದ ಚಳುವಳಿಯ ಕರ್ತವ್ಯ. ಈ ಹಿನ್ನೆಲೆಯಲ್ಲಿ ಕೈ ಉತ್ಪನ್ನಗಳ ಮೇಲೆ ಜಿ.ಎಸ್.ಟಿ. ತೆರಿಗೆ ವಿಧಿಸುವ ವಿರುದ್ಧ ಚಳುವಳಿಯನ್ನು ಬೆಂಬಲಿಸಬೇಕಾಗಿದೆ.

ಕೈ ಉತ್ಪನ್ನಗಳಿಗೆ ಜಿ.ಎಸ್.ಟಿ. ತೆರಿಗೆ ಬೇಡ!



ವಸಂತರಾಜ ಎನ್.ಕೆ.

ಜಿ.ಎಸ್.ಟಿ. ತೆರಿಗೆ ಇತ್ತೀಚೆಗೆ ಪ್ರತಿದಿನ ಸುದ್ದಿಯಲ್ಲಿದೆ. ಹೆಚ್ಚಿನ ಇಂತಹ ಸುದ್ದಿಗಳು ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಯ ಅದ್ವಾನಗಳನ್ನು ನಕಾರಾತ್ಮಕ ಅಂಶಗಳನ್ನು ನಿರೂಪಿಸುವಂತಹವೇ. ಜಿ.ಎಸ್.ಟಿ.ಯುನ್ನು ಮಧ್ಯರಾತ್ರಿಗೆ ಅನಾವರಣಗೊಳಿಸಿ ಅದನ್ನು ತಾನು ತಂದ 'ಮಹಾಕ್ರಾಂತಿ" ಎಂದು ಬಿಂಬಿಸಿದ ಪ್ರಧಾನಿ ಮೋದಿ ಸಹ, "ಇದರ ಜವಾಬ್ದಾರಿ ನನ್ನದು ಮಾತ್ರವಲ್ಲ, ಎಲ್ಲಾ ಪಕ್ಷಗಳದ್ದು" ಎಂದು ಗುಜರಾತ್ ಚುನಾವಣಾ ರ್‍ಯಾಲಿಗಳಲ್ಲಿ ಹೇಳುವಷ್ಟು ಪರಿಸ್ಥಿತಿ ಬದಲಾಗಿದೆ. ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಯ ಸಂಕೀರ್ಣತೆಗಳು, ಸರಿಯಾದ ತಯಾರಿ ಇಲ್ಲದೆ ಆದ ಅದ್ವಾನಗಳು, ನಿರ್ದಿಷ್ಟ ಸರಕಿನ ಮೇಲೆ ಹಾಕಲಾದ ನಿರ್ದಿಷ್ಟ ತೆರಿಗೆಗಳು, ಅದರ ವಿರುದ್ಧ ಬಿಜೆಪಿಯ ಬೆನ್ನೆಲುಬಾಗಿದ್ದ ವರ್ತಕರ ಪ್ರತಿಭಟನೆಗಳು – ಇವೆಲ್ಲಾ ಹೆಚ್ಚಾಗಿ ಸುದ್ದಿಯಲ್ಲಿದ್ದ ಅಂಶಗಳು. ಇದಕ್ಕಿಂತ ಭಿನ್ನವಾಗಿ ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ಚಳುವಳಿಯೊಂದು ಜಿ.ಎಸ್.ಟಿ. ತೆರಿಗೆ ವ್ಯವಸ್ಥೆಯ ಇನ್ನೊಂದು ನಕಾರಾತ್ಮಕ ಅಂಶದ ಮೇಲೆ ಬೆಳಕು ಚೆಲ್ಲಿತು.

ಕೈ ಉತ್ಪನ್ನಗಳ ಮೇಲೆ ಮೊದಲ ಬಾರಿಗೆ ತೆರಿಗೆ ಹೊರಿಸಿದ ಜಿ.ಎಸ್.ಟಿ. ವ್ಯವಸ್ಥೆ ವಿರುದ್ಧ ಪ್ರಸಿದ್ಧ ರಂಗಕರ್ಮಿ ಚಿಂತಕ ಪ್ರಸನ್ನ ಅವರ ಕರ ನಿರಾಕರಣೆ ಚಳುವಳಿ ಮತ್ತು ಬೆಂಗಳೂರಿನಲ್ಲಿ ಅವರು ಅಕ್ಟೋಬರ್ 14ರಿಂದ 19ರ ವರೆಗೆ ನಡೆಸಿದ ಉಪವಾಸ ಸತ್ಯಾಗ್ರಹ ಇಂತಹ ಒಂದು ಮಹತ್ವದ ಬೆಳವಣಿಗೆ. ಹಲವು ಗಣ್ಯ ವ್ಯಕ್ತಿಗಳು ಮತ್ತು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ವೈಯಕ್ತಿಕ ಆಶ್ವಾಸನೆಯ ಮೇಲೆ ಪ್ರಸನ್ನ ಉಪವಾಸ ಸತ್ಯಾಗ್ರಹ ವಾಪಸು ಪಡೆದುಕೊಂಡರು. ಆದರೆ ತಾವು ಎತ್ತಿದ ವಿಷಯದ ಪರಿಹಾರ ಆಗುವ ವರೆಗೆ ಹೋರಾಟ ಮುಂದುವರೆಯುವುದು ಎಂದು ಹೇಳಿದ್ದಾರೆ. ಇದಕ್ಕಿಂತ ಮೊದಲು ಹೈದರಾಬಾದಿನಲ್ಲಿ ನಡೆದ ಜಿ.ಎಸ್.ಟಿ. ಮಂಡಳಿಯ ಸಭೆ ನಡೆಸುವ ಸ್ಥಳದಲ್ಲಿ ಪ್ರತಿಭಟನೆ ನಡೆಸಿದಾಗ ಪ್ರಸನ್ನ ಬಂಧಿತರಾಗಿದ್ದರು. ಸಿಪಿಐ(ಎಂ) ಕೈ ಉತ್ಪನ್ನಗಳ ಮೇಲೆ ತೆರಿಗೆ ಹಿಂತೆಗೆಯುವುದನ್ನು ಒತ್ತಾಯಿಸುವ ಚಳುವಳಿಯುನ್ನು ಬೆಂಬಲಿಸಿದೆ. ಸಿಪಿಐ(ಎಂ) ನಾಯಕತ್ವದ ಎರಡು ಸರಕಾರಗಳ ಪ್ರತಿನಿಧಿಗಳು ಈ ಬಗ್ಗೆ ಜಿ.ಎಸ್.ಟಿ. ಮಂಡಳಿಯಲ್ಲಿ ಅದನ್ನು ಮಂಡಿಸುವ ಪ್ರಯತ್ನ ನಡೆಸುತ್ತಿದೆ.

ಇದಕ್ಕೆ ಮೊದಲು, ಪ್ರಸನ್ನ ಅವರ ನಾಯಕತ್ವದ ಗ್ರಾಮ ಸೇವಾ ಸಂಘ ಈ ಬಗ್ಗೆ ಅಧ್ಯಯನ ನಡೆಸಲು ತಜ್ಞರ ಸಮಿತಿಯೊಂದನ್ನು ನೇಮಿಸಿತ್ತು. ಪ್ರಸಿದ್ಧ ಸಮಾಜವಿಜ್ಞಾನಿ ಪ್ರೊ. ಆಶಿಸ್ ನಂದಿ ಅಧ್ಯಕ್ಷತೆಯ ಈ ಸಮಿತಿಯಲ್ಲಿ ಶ್ಯಾಂ ಬೆನೆಗಲ್, ಲಿಯೋ ಸಲ್ದಾನಾ, "ವಾಟರ್ ಮನ್" ರಾಜೆಂದರ್ ಸಿಂಗ್ ಮುಂತಾದ ಸಮಾಜ ವಿಜ್ಞಾನಿಗಳು, ಜನ ಚಳುವಳಿ ನಾಯಕರು, ಪರಿಸರ ತಜ್ಞರು, ಸಾಂಸ್ಕೃತಿಕ ನಾಯಕರೂ ಇದ್ದರು. ಈ ಸಮಿತಿಯ ಸಲ್ಲಿಸಿದ ವರದಿಯ ಆಧಾರದ ಮೇಲೆ ರೂಪಿಸಲಾದ ಎರಡು ಪ್ರಮುಖ ಹಕ್ಕೊತ್ತಾಯಗಳ (ಕೋಷ್ಟಕದಲ್ಲಿ ಕೊಡಲಾದ) ಮೇಲೆ ಈ ಚಳುವಳಿ ನಡೆಯುತ್ತಿದೆ.

ಕೈ ಉತ್ಪಾದಕರ ಹಕ್ಕೊತ್ತಾಯಗಳು

- ಕೈ ಉತ್ಪನ್ನಗಳ ಉತ್ಪಾದನೆಯಲ್ಲಿ ತೊಡಗಿರುವ ವ್ಯಕ್ತಿಗಳು ಮತ್ತು ಸ್ವ–ಸಹಾಯ ಗುಂಪುಗಳಿಗೆ ಈಗ ಜಿ.ಎಸ್.ಟಿ. ತೆರಿಗೆ ವಿನಾಯಿತಿಗೆ ಇರುವ ವಹಿವಾಟಿನ ನೀತಿಯನ್ನು 20 ಲಕ್ಷ ರೂ.ಗಳಿಂದ 50 ಲಕ್ಷಕ್ಕೆ ಏರಿಸಬೇಕು
- ಕೈ ಉತ್ಪಾನ್ನಗಳನ್ನು ಉತ್ಪಾದಿಸಿ ಮಾರುತ್ತಿರುವ ಸಹಕಾರಿ ಸಂಘಗಳು ಮತ್ತು ಅಂತಹ ಸಂಘಗಳ ಫೆಡರೇಶನುಗಳ ಎಲ್ಲಾ ಕೈ ಉತ್ಪನ್ನಗಳ ಮೇಲೆ ಯಾವುದೇ ತೆರಿಗೆ ಹೇರಬಾರದು ಮತ್ತು ಇದಕ್ಕೆ ಯಾವುದೇ ವಹಿವಾಟಿನ ಗಾತ್ರದ ಮಿತಿ ಇರಬಾರದು

ಈ ಕ್ರಮ ನಿಜವಾದ ಕೈ ಉತ್ಪಾದಕರಿಗೆ ಅನುಕೂಲಕರವಾಗುವಂತೆ ಬೇರೆ ಯಾವುದೇ ಪಟ್ಟಭದ್ರ ಹಿತಾಸಕ್ತಿಗಳು ಅದರ ದುರ್ಬಳಕೆ ಮಾಡದಂತೆ "ಕೈ ಉತ್ಪನ್ನ ಯಾವುದು" ಎಂಬುದನ್ನು (ಕೋಷ್ಟಕದಲ್ಲಿ ಕೊಟ್ಟಿರುವಂತೆ) ನಿರ್ವಚಿಸಬೇಕು

ಕೈ ಉತ್ಪನ್ನ ಯಾವುದು

"ಮಗ್ಗ, ನೇಗಿಲು ಮುಂತಾದ ಪರಿಕರಗಳನ್ನು ಮೂರನೇ ಎರಡು ಭಾಗದಷ್ಟು ಮತ್ತು ಮೂರನೇ ಒಂದು ಭಾಗಕ್ಕಿಂತ ಹೆಚ್ಚಿಲ್ಲದ ಯಂತ್ರ–ಆಧಾರಿತ ಉತ್ಪಾದನೆಯ ಪ್ರಕ್ರಿಯೆಗಳನ್ನು ಬಳಸಿ ತಯಾರಿಸಿದ ಉತ್ಪನ್ನಗಳನ್ನು ಕೈ ಉತ್ಪನ್ನಗಳು"

ಕೈ ಉತ್ಪನ್ನಗಳು

"ಕೈ ಉತ್ಪನ್ನ ಯಾವುದು" ಎಂಬುದನ್ನು ನಿರ್ವಚಿಸುವುದಲ್ಲದೆ ಸೊನ್ನೆ ತೆರಿಗೆ ಇರಬೇಕಾದ ಕೈ ಉತ್ಪನ್ನಗಳ ಒಂದು ಪಟ್ಟಿಯನ್ನೂ ವರದಿಯಲ್ಲಿ ಕೊಡಲಾಗಿದೆ. ಸಾಮಾನ್ಯವಾಗಿ ಅಂದುಕೊಳ್ಳುವಂತೆ ಕೈ ಮಗ್ಗದ ಬಟ್ಟೆ ಮಾತ್ರ ಕೈ ಉತ್ಪನ್ನವಲ್ಲ. ಮೇಲಿನ ನಿರ್ವಚನೆ ಬಳಸಿ – ಕೃಷಿ, ಅರಣ್ಯ, ಕೈಮಗ್ಗ ಮತ್ತು ಖಾದಿ ಬಟ್ಟೆ, ಕರಕುಶಲ ವಸ್ತುಗಳು, ಸೇವೆಗಳು, ಸಾಂಸ್ಕೃತಿಕ ಪ್ರದರ್ಶನಗಳು – ಈ ಕ್ಷೇತ್ರಗಳಲ್ಲಿ ಹಲವು ಕೈ ಉತ್ಪನ್ನಗಳನ್ನು ವರದಿ ನಿರ್ದಿಷ್ಟವಾಗಿ ಗುರುತಿಸಿದೆ. ಕೃಷಿ ಕ್ಷೇತ್ರದಲ್ಲಿ ಆಹಾರ ಮತ್ತು ಆಹಾರೇತರ ಕೈ ಉತ್ಪನ್ನಗಳನ್ನು ಪಟ್ಟಿ ಮಾಡಲಾಗಿದೆ. ಆಹಾರ ಕೈ ಉತ್ಪನ್ನಗಳಲ್ಲಿ – ಪ್ರಕೃತಿಯಿಂದ ಆಯ್ದು ತಂದ ಅಥವಾ ಬೆಳೆಸಿದ ಅಥವಾ ಅಥವಾ ಕೈ ಯಿಂದಲೇ ಸಂಸ್ಕರಿಸಿದ ಬೆಣ್ಣೆ, ತುಪ್ಪ, ಬೆಲ್ಲ, ಹಪ್ಪಳ, ಎಳನೀರು, ನೀರಾ, ಸಾರಾಯಿ, ವನಸ್ಪತಿ ಎಣ್ಣೆಗಳು, ಹಣ್ಣಿನ ಜಾಮ್, ಉಪ್ಪಿನ ಕಾಯಿ, ಆಹಾರ ಬೆಳೆಗಳು, ಬೇಳೆ ಕಾಳುಗಳು – ಸೇರುತ್ತವೆ. ಗಿಡಗಳು, ಎಲೆಗಳು, ಹೂವುಗಳು, ಸಾವಯವ ಗೊಬ್ಬರ, ಪಶು ಚರ್ಮ, ಚರ್ಮದ ಉತ್ಪನ್ನಗಳು, ದೋಣಿಗಳು, ಮೀನುಗಾರಿಕೆ ಉತ್ಪನ್ನಗಳನ್ನು ಕಾಪಿಡಲು ಬಳಸುವ ಪರಿಕರಗಳು – ಮುಂತಾದವು ಆಹಾರೇತರ ಕೈ ಉತ್ಪನ್ನಗಳ ಪಟ್ಟಿಯಲ್ಲಿ ಸೇರುತ್ತವೆ.

ಅರಣ್ಯ ಕ್ಷೇತ್ರದಲ್ಲಿ – ಜೇನುತುಪ್ಪ, ವನಸ್ಪತಿ ಅಂಟು, ಗಿಡಗಳ ಎಣ್ಣೆಗಳು, ಕೊಕೊ, ಕೊ–ಕೊ ಉತ್ಪನ್ನಗಳು, ರಬ್ಬರ್ ಮತ್ತು ಇತರ ವಿವಿಧ ರೂಪಗಳಲ್ಲಿ ಬರುವ ಗಿಡದ ಅಂಟುಗಳು – ಕೈ ಉತ್ಪನ್ನಗಳು. ಸೀರೆ, ಬಟ್ಟೆ, ಧೋತಿ, ಬೆಡ್ ಶೀಟ್, ಬ್ಯಾಗು, ತೆಂಗಿನ ನಾರಿನ ಕಾಲೊರಸು, ನೆಲಹಾಸು ಇತ್ಯಾದಿ, ಪ್ರಾಕೃತಿಕ ಬಣ್ಣ ಮತ್ತು ಬಣ್ಣ ಹಾಕುವ ಪರಿಕರಗಳು, ರೇಶ್ಮೆ ಹತ್ತಿ ಖಾದಿ ಉಣ್ಣೆ ಮುಂತಾದ ನೂಲುಗಳು, ಚಾಪೆ – ಇತ್ಯಾದಿ ಕೈಮಗ್ಗ ಕ್ಷೇತ್ರದ ಉತ್ಪನ್ನಗಳ ಉದಾಹರಣೆಗಳು. ಕರಕುಶಲ ಕ್ಷೇತ್ರದ ಪಟ್ಟಿಯಲ್ಲಿ – ಮರ, ವಿವಿಧ ಲೋಹ, ಚರ್ಮ, ಗಾಜು, ಕಲ್ಲು, ಮಣ್ಣು, ಬಿದಿರು ಗಳಿಂದ ಮಾಡಿದ ಕರಕುಶಲ ವಸ್ತುಗಳು; ಆಭರಣಗಳು, ಕೈ ಬಾಕ್ ಪ್ರಿಂಟಿಂಗ್, ಸಂಗೀತ ವಾದ್ಯಗಳು, ಅಗರಬತ್ತಿ, ಮೇಣದಬತ್ತಿ, ಪುಸ್ತಕಗಳು, ಗಾಳಿಪಟ, ಚಪ್ಪಲಿ, ಕೊಡೆ, ಕೈ ಉತ್ಪಾದನೆಗೆ ಬೇಕಾದ ಉಪಕರಣಗಳು – ಕೈ ಉತ್ಪನ್ನಗಳು ಬರುತ್ತವೆ. ಇಟ್ಟಿಗೆ ಮಾಡುವುದು, ಕಟ್ಟಡದ ವಿವಿಧ ಕೆಲಸಗಳು, ಆಹಾರ ತಯಾರಿ ಪೂರೈಕೆಯ ವಿವಿಧ ಕೆಲಸಗಳು, ಕೈ ಉತ್ಪನ್ನಗಳ ತಯಾರಿಯಲ್ಲಿ ಬೇಕಾಗುವ ಎಲ್ಲಾ ಸೇವೆಗಳು – ಸೇವಾ ಕ್ಷೇತ್ರದ ಪಟ್ಟಿಯಲ್ಲಿ ಬರುತ್ತವೆ. ಸರ್ಕಸ್, ಜಾನಪದ ಶಾಸ್ತ್ರೀಯ ನೃತ್ಯಗಳಲ್ಲಿ ಪ್ರದರ್ಶನ ಮಾಡುವವರ ಮತ್ತು ನೋಡುಗರ ಟಿಕೆಟ್ ಎರಡೂ ಸಾಂಸ್ಕೃತಿಕ ಪ್ರದರ್ಶನಗಳಲ್ಲಿ ಬರುತ್ತವೆ.

"ಅಸಮಾನರ ಮೇಲೆ ಸಮಾನ ತೆರಿಗೆ ಹೇಗೆ ಸಾಧ್ಯ?"

"ಇಷ್ಟು ಅಸಮಾನತೆ ಇರುವ ನಮ್ಮ ದೇಶಧಲ್ಲಿ ಸಮಾನ ತೆರಿಗೆ ಹೇಗೆ ಸಾಧ್ಯ?" ಎಂದು ಕೈ ಉತ್ಪನ್ನಗಳ ಸಂಧರ್ಭದಲ್ಲಿ ಪ್ರಸನ್ನ ಕೇಳಿರುವ ಪ್ರಶ್ನೆ ಜಿ.ಎಸ್.ಟಿ. ಬಗ್ಗೆ ಕೇಳಬೇಕಾದ ಮೂಲಭೂತ ಪ್ರಶ್ನೆ. ಈಗಾಗಲೇ ಇತರ ಉತ್ಪನ್ನಗಳ ಪೈಪೋಟಿ ಎದುರಿಸುತ್ತಿರುವ ಕೈ ಉತ್ಪನ್ನಗಳ ಮೇಲೆ ಜಿ.ಎಸ್.ಟಿ. ತೀವ್ರ ಪರಿಣಾಮ ಬೀರಿದೆ. ಇದು ಬರಿಯ ಅನುಮಾನ ಮಾತ್ರವಲ್ಲ. ಜಿ.ಎಸ್.ಟಿ. ಜಾರಿಗೆ ಬಂದ ನಂತರ ಕರ್ನಾಟಕದ ಕೈಮಗ್ಗ ಉತ್ಪನ್ನಗಳ ಮುಖ್ಯ ಮಾರಾಟಗಾರ ಕೆ.ಚ್.ಡಿ.ಸಿ.ಯ ಮಾರಾಟ ಶೇ. 25ರಷ್ಟು ಕಡಿತವಾಗಿದೆ. ಕೈಮಗ್ಗದ ಬಟ್ಟೆಗಳು ಮಾತ್ರವಲ್ಲ ಕೈ ಉತ್ಪನ್ನಗಳ ಉತ್ಪಾದನಾ ವೆಚ್ಚ ಮತ್ತು ಆದ್ದರಿಂದ ಅದರ ಬೆಲೆ ಹೆಚ್ಚಿರುವುದು ಸಹಜ. ಕೈ ಉತ್ಪನ್ನಕ್ಕೆ ಕೃಷಿ ಉತ್ಪನ್ನಗಳ ರೀತಿಯಲ್ಲಿ ಸಬ್ಸಿಡಿ ಅಥವಾ ವಿಶೇಷ ರಿಯಾಯಿತಿಗಳನ್ನು ನೀಡುವುದು ಅಗತ್ಯ. ಸ್ವಾತಂತ್ರ್ಯ ನಂತರ ಅರೆ ಮನಸ್ಸಿನಲ್ಲಿ ನೀಡಲಾಗಿದ್ದ ಹಲವು ಇಂತಹ ಸಬ್ಸಿಡಿ ಮತ್ತು ವಿಶೇಷ ರಿಯಾಯಿತಿಗಳನ್ನು ಕಡಿತ ಮಾಡುತ್ತಾ ಬರಲಾಗುತ್ತಿದೆ. ಈಗ ಅದರ ಮೇಲೆ ವಿಧಿಸಲಾಗಿರುವ ಜಿ.ಎಸ್.ಟಿ. ತೆರಿಗೆ ಗಾಯದ

ಪುಟ 10 ಕ್ಕೆ





ಕೈ ಉತ್ಪನ್ನಗಳಿಗೆ ಜಿ.ಎಸ್.ಟಿ. ತೆರಿಗೆ ಬೇಡ!..........

ಪುಟ 9 ರಿಂದ

ಮೇಲೆ ಬರೆ ಎಳೆದಂತಾಗಿದೆ. ಉದಾಹರಣೆಗೆ ಕೈ ಮಗ್ಗ ಬಟ್ಟೆಗಳಿಗೆ ಪವರ್ ಲೂಂ ಮತ್ತು ಮಿಲ್ ಗಳ ಬಟ್ಟೆಗಳ ಜತೆ ಪೈಪೋಟಿ ಕಷ್ಟಕರವಾಗಿತ್ತು. ಈಗ ಜಿ.ಎಸ್.ಟಿ. ತೆರಿಗೆ ಅದರ ಅಸ್ತಿತ್ವವನ್ನೇ ಪ್ರಶ್ನಾರ್ಹವಾಗಿಸಿವೆ. ಬಟ್ಟೆಗಳ ಮೇಲೆ ಮಾತ್ರವಲ್ಲ, ಬಟ್ಟೆ ತಯಾರಿಗೆ ಬಳಸುವ ಪರಿಕರಗಳ ಮೇಲೂ ತೆರಿಗೆ ಹೇರಲಾಗಿದೆ. ಉದಾಹರಣೆಗೆ ಕೈ ಮಗ್ಗ ನೇಕಾರ ಬಳಸುವ ಸರಳ ಶಟಲ್ ಗೆ ಶೇ. 18 ತೆರಿಗೆ ಹಾಕಲಾಗಿದೆ.

ಕೈ ಉತ್ಪನ್ನಗಳ ಮೇಲೆ ಶೇ. 60 ರಷ್ಟು ಗ್ರಾಮೀಣ ಕುಟುಂಬಗಳು ಪೂರ್ಣವಾಗಿ ಅಥವಾ ಭಾಗಶಃ ಅವಲಂಬಿಸಿವೆ. ಕೈ ಉತ್ಪನ್ನಗಳ ಮೇಲೆ ತೆರಿಗೆ ಅದರ ಬೇಡಿಕೆ ಕಡಿಮೆ ಮಾಡುವ ಮೂಲಕ ಅವರ ಜೀವನೋಪಾಯದ ಮೇಲೆ ಹೊಡೆತ ಕೊಡಲಿದೆ. ಮಾತ್ರವಲ್ಲ, ಕೈ ಉತ್ಪನ್ನಗಳ ಬಳಕೆದಾರರ ದೊಡ್ಡ ಭಾಗ ಸಹ ಗ್ರಾಮೀಣ ಬಡವರು. ತೆರಿಗೆಯಿಂದಾಗಿ ಬೆಲೆ ಏರಿಕೆಯಾದಾಗ ಅವರ ಆದಾಯದ ಮೇಲೆ ಹಲವು ದಾಳಿಗಳು ಈಗಾಗಲೇ ನಡೆಯುತ್ತಿರುವುದರಿಂದ ಅವರು ತಮ್ಮ ಬಳಕೆಯಲ್ಲಿ ಕಡಿತ ಮಾಡದೆ ಬೇರೆ ವಿಧಿಯಿಲ್ಲ. ಆದ್ದರಿಂದ ಈ ತೆರಿಗೆ ಉತ್ಪಾದನೆ ಗೆ ಮತ್ತು ಅಭಿವೃದ್ಧಿಗೆ ಮಾರಕವಾದ ನೀತಿ ಸಹ.

ಕೈ ಮಗ್ಗ ಕ್ಷೇತ್ರ ಮತ್ತು ಜವಳಿ ನೀತಿಗಳು

ಜಿ.ಎಸ್.ಟಿ. ಬಳಸಿ ಕೈ ಉತ್ಪನ್ನಗಳ ಮೇಲೆ ಮಾಡಿರುವ ದಾಳಿ ಹೊಸದೇನಲ್ಲ. ಜಾಗತೀಕರಣ ಆರಂಭವಾದ ನಂತರ ಕೈ ಉತ್ಪನ್ನಗಳ ಮೇಲೆ ಸತತ ದಾಳಿ ನಡೆಯುತ್ತಾ ಬಂದಿದೆ. ಸ್ವಾತಂತ್ರ್ಯ ನಂತರ ಕೈ ಉತ್ಪನ್ನಗಳಿಗೆ ಅರೆ ಮನಸ್ಸಿನಿಂದ ಕೊಡಲಾಗಿದ್ದ ರಕ್ಷಣೆಗಳನ್ನು ತೆಗೆದು ಹಾಕಲಾಗುತ್ತಿದೆ. ಜಿ.ಎಸ್.ಟಿ. ಸಹ ಜಾಗತೀಕರಣದ ನೀತಿಗಳ ಭಾಗ ಮತ್ತು ಮುಂದುವರಿಕೆ. ಸಣ್ಣ ಉತ್ಪಾದಕರ ಜೀವನೋಪಾಯ, ಆಸ್ತಿ, ಮಾರುಕಟ್ಟೆ ಕಿತ್ತುಕೊಂಡು ಅವರನ್ನು ನಾಶ ಮಾಡಿ ದೊಡ್ಡ ಬಂಡವಾಳದಾರರ ಕೈಯಲ್ಲಿ ಬಂಡವಾಳ ಕೇಂದ್ರೀಕರಣ ಮಾಡುವುದು ಅದರ ಉದ್ದೇಶ. ಕೈ ಮಗ್ಗ ಬಟ್ಟೆ ಬಗ್ಗೆ ಸರಕಾರದ ನೀತಿಗಳಲ್ಲಿ ಜಾಗತೀಕರಣದ ನಂತರ ಬಂದ ತೀವ್ರ ಬದಲಾವಣೆಗಳು ಇದಕ್ಕೆ ಒಳ್ಳೆಯ ಉದಾಹರಣೆಗಳು.

ಬ್ರಿಟಿಶ್ ವಸಾಹತುಶಾಹಿ ಸರಕಾರ ಕೈಮಗ್ಗ ಉತ್ಪಾದನೆ ನಾಶ ಮಾಡಿ ಬ್ರಿಟಿಶ್ ಬಟ್ಟೆಗಳಿಗೆ ಮಾರುಕಟ್ಟೆ ಒದಗಿಸಲು ಪ್ರಭುತ್ವದ ಅಧಿಕಾರ ದಮನ ಶಕ್ತಿ ಬಳಸಿಕೊಂಡಿತು. ಆದ್ದರಿಂದಲೇ ಚರಕ, ಖಾದಿ ಸ್ವರಾಜ್ಯದ ಸ್ವಾತಂತ್ರ್ಯ ಚಳುವಳಿಯ ಪ್ರಬಲ ಪ್ರತೀಕಗಳಾದವು. ಸ್ವಾತಂತ್ರ್ಯದ ನಂತರ ಕೈಮಗ್ಗದ ಉತ್ಪಾದನೆಗೆ ಕೆಲವು ರಕ್ಷಣೆಗಳನ್ನು ಕೊಡುವ ನೀತಿ ಅಂಗೀಕರಿಸಲಾಯಿತಾದರೂ, ಅದು ಬರಿಯ ಕಾಗದದ ಮೇಲೆ ಉಳಿಯಿತು. ಕೈ ಮಗ್ಗದ ಬಟ್ಟೆಗಳು ಮಿಲ್ ಮತ್ತು ಪವರ್ ಲೂಮ್ ಬಟ್ಟೆಗಳ ಪೈಪೋಟಿಯಿಂದ ಸೊರಗುತ್ತಾ ಹೋದವು. ಜಾಗತೀಕರಣ-ಉದಾರೀಕರಣದ ನೀತಿಗಳ ಭಾಗವಾಗಿ 1985ರಲ್ಲೇ ಹೊಸ ಜವಳಿ ನೀತಿ ಬಟ್ಟೆ ಉತ್ಪಾದನೆಯಲ್ಲಿ ಉತ್ಪಾದಕತೆಗೆ ಒತ್ತು ಕೊಡಲಾಯಿತು. ಮಿಲ್, ಪವರ್ ಲೂಮ್ ಮತ್ತು ಕೈಮಗ್ಗ ಕ್ಷೇತ್ರಗಳ ಬಗ್ಗೆ ಇದ್ದ ನಿರ್ದಿಷ್ಟ ನೀತಿಗಳನ್ನು ಕೈ ಬಿಡಲಾಯಿತು. ಇದರ ಭಾಗವಾಗಿ ಕೈಮಗ್ಗ ಕ್ಷೇತ್ರಕ್ಕೆ ರಕ್ಷಣೆ ಕೊಡಲು ಮಿಲ್, ಪವರ್ ಲೂಮ್ ಕ್ಷೇತ್ರಗಳ ಮೇಲೆ ಇದ್ದ ಕೆಲವು ನಿರ್ಬಂಧಗಳನ್ನು ತೆಗೆಯಲಾಯಿತು. ಮೂರೂ ಕ್ಷೇತ್ರಗಳು ಉತ್ಪಾದಕತೆ ಹೆಚ್ಚಿಸಲು "ಸಮಾನವಾಗಿ" ಪೈಪೋಟಿ ನಡೆಸಬೇಕೆಂದು ಹೇಳಲಾಯಿತು. ಅಸಮಾನರ ನಡುವೆ ಸಮಾನ ಸ್ಪರ್ಧೆ ಹಾಗೆ ನೋಡಿದರೆ ಹೊಸದೇನಲ್ಲ! ಪವರ್ ಲೂಮ್ ಕ್ಷೇತ್ರ ವೇಗವಾಗಿ ಬೆಳೆಯಿತು. ಪ್ರತಿ ಪವರ್ ಲೂಮ್ ಕಾರ್ಮಿಕ ಹೆಚ್ಚಿದಂತೆ ಕೈ 14 ನೇಕಾರರು ತಮ್ಮ ಜೀವನೋಪಾಯ ಕಳೆದುಕೊಂಡರು. ಆದರೂ 1985ರ ಜವಳಿ ನೀತಿಯಲ್ಲೂ ಕಡಿಮೆ ಮಾಡಲಾಗಿದ್ದರೂ, ಕೆಲವು ಕೈ ಮಗ್ಗ ರಕ್ಷಣಾ ನೀತಿಗಳನ್ನು ಉಳಿಸಿಕೊಂಡಿದ್ದರು. 22 ವಿಧದ ಬಟ್ಟೆಗಳನ್ನು ಕೈ ಮಗ್ಗ ಕ್ಷೇತ್ರಕ್ಕೆ ಮೀಸಲೀಡಲಾಗಿತ್ತು. ಇದರ ವಿರುದ್ಧ ಮಿಲ್ ಮಾಲಕರು ಸುಪ್ರೀಂ ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದರು. ಸುಪ್ರೀಂ ಕೋರ್ಟಿನಲ್ಲಿ 1993ರಲ್ಲಿ ಅವರಿಗೇ ಸೋಲಾದರೂ, ಆ ನೀತಿಯನ್ನು ಜಾರಿ ಮಾಡಲು ಸರಕಾರ ತನ್ನ ಕಿರು ಬೆರಳನ್ನು ಎತ್ತಲಿಲ್ಲ. 1996ರಲ್ಲಿ ಕೈ ಮಗ್ಗಕ್ಕೆ ಮೀಸಲಿಡಲಾದ ಬಟ್ಟೆಗಳ ವಿಧಗಳನ್ನು 11ಕ್ಕೆ ಇಳಿಸಲಾಯಿತು. ಪವರ್ ಲೂಂ ಕ್ಷೇತ್ರ ನಕಲಿ ಕೈಮಗ್ಗ ಬಟ್ಟೆಯಂತಹ ಬಟ್ಟೆಗಳನ್ನು ತಯಾರಿಸುವುದರ ಮೇಲೂ ಯಾವುದೇ ಕಡಿವಾಣ ಇರಲಿಲ್ಲ. 2000ದಲ್ಲಿ ಜಾರಿಗೆ ಬಂದ ರಫ್ತು ಆಧಾರಿತ ಜವಳಿ ನೀತಿ ಕೈ ಮಗ್ಗ ಕ್ಷೇತ್ರದ ನಿರ್ವಚನೆಯನ್ನೇ ಬದಲಿಸಿ ಸುಪ್ರೀಂ ಕೋರ್ಟಿಗೆ ಕೈ ಮಗ್ಗ ಕ್ಷೇತ್ರದ ಸವಲತ್ತುಗಳನ್ನು ಪಡೆಯುವುದು ಸಾಧ್ಯವಾಯಿತು.

ಇತರ ಕೈ ಉತ್ಪನ್ನಗಳ ಬಗ್ಗೆ ಸಹ ನಿರ್ಲಕ್ಷ್ಯ ಅಥವಾ "ಅಸಮಾನರ ನಡುವೆ ಸಮಾನತೆ"ಯ ಇಂತಹುದೇ ನೀತಿಗಳನ್ನು ಅನುಸರಿಸಲಾಗಿದೆ.

ಕೈ ಉತ್ಪನ್ನಗಳ ಮೇಲೆ ಜಿ.ಎಸ್.ಟಿ. ಜಾಗತೀಕರಣದ ನೀತಿಗಳ ಪ್ರಹಾರದ ಭಾಗ

ಕೈ ಉತ್ಪನ್ನಗಳ ಕರ ನಿರಾಕರಣೆ ಚಳುವಳಿಯಲ್ಲಿ ಜಿ.ಎಸ್.ಟಿ. ಅಥವಾ ಹಿಂದಿನ ಬಂಡವಾಳಶಾಹಿ ನೀತಿಗಳ ವಿಮರ್ಶೆ ಮಾಡುವಾಗ ಅದನ್ನು ಕೈ ಕೆಲಸ ಮತ್ತು ಯಂತ್ರಗಳ ನಡುವೆ, ಶ್ರಮ ಹಾಗೂ ಯಂತ್ರ ನಾಗರಿಕತೆಗಳ ನಡುವೆ ಘರ್ಷಣೆ ಅಥವಾ ವೈರುಧ್ಯಗಳಾಗಿ ಬಿಂಬಿಸಲಾಗುತ್ತಿದೆ. ಯಂತ್ರ ಉತ್ಪಾದನೆಯನ್ನು, ನಾಗರಿಕತೆಯನ್ನು ಅಧೋಗತಿಗೆ ನೈತಿಕ ಅಧಃಪತನಕ್ಕೆ ಒಯ್ಯುವ ಪೆಡಂಭೂತವಾಗಿ ತೋರಿಸಲಾಗುತ್ತಿದೆ. ಕೈ ಕೆಲಸ, ಮೈ ಮುರಿಯುವ ಶ್ರಮವನ್ನು ವೈಭವೀಕರಿಸಲಾಗುತ್ತಿದೆ. ಮೈ ಮುರಿಯುವ ಶ್ರಮವನ್ನು ಯಂತ್ರ ಬಳಸಿ ಕಡಿಮೆ ಮಾಡುವುದು, ಯಂತ್ರ ಬಳಸಿ ಉತ್ಪಾದಕತೆ ಹೆಚ್ಚಿಸುವುದು ಅದರಷ್ಟಕ್ಕೆ ನಾಗರಿಕತೆಯನ್ನು ಅಧೋಗತಿಗೆ ನೈತಿಕ ಅಧಃಪತನಕ್ಕೆ ಒಯ್ಯುವುದಿಲ್ಲ. ಹೆಚ್ಚಿದ ಉತ್ಪಾದಕತೆ, ಶ್ರಮದ ಕಡಿತವನ್ನು ಶ್ರಮಿಕನ ಜೀವನ ಮಟ್ಟ ಉತ್ತಮ ಪಡಿಸಲು ಅವಕಾಶ ಕೊಡದ ಅಮಾನವೀಯ ಬಂಡವಾಳಶಾಹಿ ಪದ್ಧತಿ ನಿಜವಾದ ಪೆಡಂಭೂತ. ಅದೇ ಸಮಯದಲ್ಲಿ ಹಲವು ಕೈ ಉತ್ಪನ್ನಗಳನ್ನು ರಕ್ಷಿಸಿ ಉಳಿಸಿ ಬೆಳೆಸುವುದು ಸಾಂಸ್ಕೃತಿಕ ಮತ್ತು ಪರಿಸರ-ಸ್ನೇಹಿ ಅಭಿವೃದ್ಧಿ ದೃಷ್ಟಿಯಿಂದಲೂ ಅಗತ್ಯ ಎಂಬುದು ನಿರ್ವಿವಾದಿತ.

ಕೈ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವುದು, ಈಗ ಬಂಡವಾಳಶಾಹಿಯ ಅಡಿಯಲ್ಲಿ ಇರದ ಸಣ್ಣ ಮತ್ತು ಬಂಡವಾಳಶಾಹಿ-ಪೂರ್ವ ಉತ್ಪಾದನಾ ವಿಧಾನವನ್ನು ಬಂಡವಾಳಶಾಹಿಯ ನಿಯಂತ್ರಣದಡಿ ತರುವ ಪ್ರಯತ್ನ. ಅಂತಹ ಉತ್ಪಾದಕರ ಆಸ್ತಿ-ಸಾಧನಗಳನ್ನು, ಮಾರುಕಟ್ಟೆಗಳನ್ನು ಕಸಿದುಕೊಳ್ಳುವ ಪ್ರಯತ್ನ. ದೇಶದ ಎಲ್ಲಾ ಉತ್ಪಾದಕ ಸಂಪನ್ಮೂಲಗಳನ್ನು ಕಸಿದುಕೊಂಡು ಕೇಂದ್ರೀಕರಿಸುವ ಈ ಪ್ರಯತ್ನ ಒಂದು ವರ್ಗದಾಳಿ. ಮೋದಿ ಸರಕಾರ ಈ ವರ್ಗದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ನೋಟು ನಿಷೇಧ ಮತ್ತು ಈಗ ಜಿ.ಎಸ್.ಟಿ. ತಾಳಿರುವ ರೂಪ ಎರಡೂ ರೈತ ಕೃಷಿ ಮತ್ತು ಸಣ್ಣ ಮತ್ತು ಬಂಡವಾಳಶಾಹಿ-ಪೂರ್ವ ಉತ್ಪಾದನಾ ವಿಧಾನವನ್ನು ನಾಶ ಮಾಡುವ ವ್ಯವಸ್ಥಿತ (ತಿಕ್ಕಲು ಅಥವಾ ಬರಿಯ ಚುನಾವಣಾ-ಪ್ರೇರಿತ ಅಲ್ಲ) ಪ್ರಯತ್ನ. ಅದಕ್ಕೆ ಗರಿಷ್ಠ ಪ್ರತಿರೋಧ ಒಡ್ಡಿ ರೈತ ಕೃಷಿ, ಸಣ್ಣ ಉತ್ಪಾದಕರ, ಚಿಲ್ಲರೆ ವ್ಯಾಪಾರಗಳನ್ನು ರಕ್ಷಿಸುವುದು ದುಡಿಯುವ ವರ್ಗದ ಚಳುವಳಿಯ ಕರ್ತವ್ಯ. ಈ ಹಿನ್ನೆಲೆಯಲ್ಲಿ ಕೈ ಉತ್ಪನ್ನಗಳ ಮೇಲೆ ಜಿ.ಎಸ್.ಟಿ. ತೆರಿಗೆ ವಿಧಿಸುವ ವಿರುದ್ಧ ಚಳುವಳಿಯನ್ನು ಬೆಂಬಲಿಸಬೇಕಾಗಿದೆ.

ಆದಾಯ-ಆಸ್ತಿಗಳು, ಸರಕುಗಳನ್ನು ಕೊಳ್ಳುವ ಸಾಮರ್ಥ್ಯ, ಅಗತ್ಯ ಸರಕುಗಳು, ತಾಳಿಕೊಳ್ಳಬಹುದಾದ ಸರಕುಗಳ ಬೆಲೆ, ಸರಕುಗಳನ್ನು ತಯಾರಿಸುವ ವಿಧಾನ, ತಯಾರಿಸುವವರ ಸಾಮಾಜಿಕ-ಆರ್ಥಿಕ ಪರಿಸ್ಥಿತಿ – ಹೀಗೆ ಹಲವು ಆಯಾಮಗಳ ಅಸಮಾನತೆ ಇರುವ ನಮ್ಮ ದೇಶದಲ್ಲಿ ಸಮಾನ ತೆರಿಗೆ ಸಾಧ್ಯ? ಎಂಬ ಪ್ರಶ್ನೆ, ಜಿ.ಎಸ್.ಟಿ.ಯ ಬುಡವನ್ನೇ ಅಲುಗಾಡಿಸುವ ಪ್ರಶ್ನೆ. ಅದನ್ನು ಕೈ ಉತ್ಪನ್ನಗಳ ಮತ್ತು ಇನ್ನೂ ಹಲವು ಸಂದರ್ಭಗಳಲ್ಲಿ ಕೇಳಬೇಕಾಗಿದೆ. ಜಿ.ಎಸ್.ಟಿ.ಯ ಕರಾಳ ಸ್ವರೂಪ ಹಲವು ಜನವಿಭಾಗಗಳಿಗೆ ಅರ್ಥವಾಗಲಾರಂಭಿಸಿದ ಈ ಹಂತದಲ್ಲಿ ಇದು ಇನ್ನಷ್ಟು ತುರ್ತಿನ ಪ್ರಶ್ನೆ. ●



ಸಂಸತ್ತಿನ ಬಳಿ ಮಹಾಪಡಾವ್

ಪುಟ 8 ರಿಂದ

ಅವುಗಳೆಲ್ಲದರ ನಿರಾಕರಣೆಯಾಗುವಂತಹ ಧೋರಣೆಗಳನ್ನು ಅನುಸರಿಸುತ್ತಿದೆ. ಈ ಸರಕಾರ ನಮ್ಮ ನೈಸರ್ಗಿಕ ಸಂಪನ್ಮೂಲಗಳು, ನಮ್ಮ ಜಮೀನುಗಳು, ನಮ್ಮ ಗಣಿಗಳು, ನಮ್ಮ ಜಲಸಂಪನ್ಮೂಲಗಳು ಮುಂತಾಗಿ ಎಲ್ಲವನ್ನೂ ಖಾಸಗಿ ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ವಹಿಸಿ ಕೊಡುತ್ತಿದೆ. ರಕ್ಷಣೆ, ರೈಲ್ವೆ, ವಿಮೆ, ಬ್ಯಾಂಕಿಂಗ್ ಇತ್ಯಾದಿ ಹಲವು ಆಯಕಟ್ಟಿನ ರಂಗಗಳಲ್ಲೂ 100 ಶೇಕಡಾ 'ಎಫ್‌ಡಿಐಗೆ ಅವಕಾಶ ನೀಡಲಾಗಿದೆ. ದೊಡ್ಡ ಬಹುರಾಷ್ಟ್ರೀಯ ಕಂಪನಿಗಳನ್ನು ನಮ್ಮ ಕಾರ್ಮಿಕರನ್ನು ಶೋಷಿಸಲು ಆಹ್ವಾನಿಸಲಾಗುತ್ತಿದೆ, ಅವರಿಗೆ ಅಗ್ಗದ ಶ್ರಮಶಕ್ತಿ ಮತ್ತು ಯೂನಿಯನ್‌ಗಳಿಂದ ಮುಕ್ತವಾದ ದುಡಿಮೆಯ ಜಾಗಗಳನ್ನು ಕೊಡಿಸುವ ಭರವಸೆ ಕೊಡುತ್ತಿದೆ. ಈ ರಾಷ್ಟ್ರ-ವಿರೋಧಿ ಧೋರಣೆಗಳನ್ನು ಮರೆಮಾಚಲು 'ರಾಷ್ಟ್ರೀಯವಾದ'ದ ಹುಸಿ ಘೋಷಣೆಗಳನ್ನು ಎತ್ತಿ ನಮ್ಮ ದೇಶಪ್ರೇಮಿ ಜನಗಳ ದಾರಿ ತಪ್ಪಿಸಲಾಗುತ್ತಿದೆ.

ನವ-ಉದಾರವಾದೀ ಅಜೆಂಡಾ
–ಇನ್ನಷ್ಟು ದಾಳಿಗಳು ಬರಲಿವೆ

ಕಾರ್ಮಿಕ ಆಂದೋಲನ ಎತ್ತಿರುವ ಎಲ್ಲ ಪ್ರಮುಖ ಪ್ರಶ್ನೆಗಳು ಸರಕಾರದ ನವ-ಉದಾರವಾದಿ ಧೋರಣೆಗಳಿಗೆ ಸಂಬಂಧಪಟ್ಟವುಗಳು. ಹಿಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಇವೇ ನವ-ಉದಾರವಾದಿ ಧೋರಣೆಗಳನ್ನೇ ದೇಶದಲ್ಲಿ ನವ-ಉದಾರವಾದಿ ಧೋರಣೆಗಳನ್ನು ಅಧಿಕೃತವಾಗಿ ಆರಮಭಿಸಿರುವುದು ಕಾಂಗ್ರೆಸ್ ಪಕ್ಷವೇ. ಈ ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಯ ಅಟಲ್ ಬಿಹಾರಿ ವಾಜಪೇಯಿಯವರ ಸರಕಾರ ಕೂಡ ಅವೇ ಧೋರಣೆಗಳನ್ನು ಜಾರಿಗೊಳಿಸಿತು, ತ್ವರಿತಗೊಳಿಸಿತು ಕೂಡ. ನರೇಂದ್ರ ಮೋದಿಯವರ ಈಗಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಈ ಧೋರಣೆಗಳನ್ನು 'ಬುಲೆಟ್ ವೇಗ'ದಲ್ಲಿ ಜಾರಿಗೊಳಿಸಲು ಕಟಿಬದ್ಧವಾಗಿದೆ.

ಇದು ದೊಡ್ಡ ಕಾರ್ಪೊರೇಟ್‌ಗಳು, ಆಳುವ ವರ್ಗಗಳು ಜಾಗತಿಕ ಬಿಕ್ಕಟ್ಟಿನಿಂದ ಹೊರಬರಲು, ಕಾರ್ಮಿಕರು ಮತ್ತು ಇತರ ಶ್ರಮಜೀವಿಗಳ ಶೋಷಣೆಯನ್ನು ತೀವ್ರಗೊಳಿಸಿ ತಮ್ಮ ಲಾಭಗಳನ್ನು ರಕ್ಷಿಸಿಕೊಳ್ಳಲು ಮತ್ತು ಹೆಚ್ಚಿಸಲು ನಡೆಸಿರುವ ಹತಾಶ ಪ್ರಯತ್ನಗಳನ್ನು ಬಿಂಬಿಸುತ್ತದೆ. ನವ-ಉದಾರವಾದ ಎಂಬುದು ಬಂಡವಾಳಶಾಹಿಯ ಇತ್ತೀಚಿನ ಘಟ್ಟ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಿಕ್ಕಟ್ಟುಗಳು ಅನಿವಾರ್ಯ. ಇತ್ತೀಚಿನ ಎಲ್ಲ ಮಾಹಿತಿಗಳೂ ನಮ್ಮ ದೇಶದ ಆರ್ಥಿಕ ವ್ಯವಸ್ಥೆ ಗಂಭೀರ ತೊಂದರೆಯಲ್ಲಿದೆ ಎಂಬುದನ್ನು ಸೂಚಿಸುತ್ತವೆ. ಅದು ಮಂದಗತಿಗಿಳಿದಿದ್ದೆ ಮಾತ್ರವಲ್ಲ ಆರ್ಥಿಕ ಹಿಂಜರಿತದತ್ತ ಜಾರುತ್ತಿದೆ. ಮುಂಬರುವ ದಿನಗಳಲ್ಲಿ ಕಾರ್ಮಿಕರು ಮತ್ತು ಇತರ ಶ್ರಮಜೀವಿಗಳ ಬದುಕು ಮತ್ತು ಕೆಲಸದ ಪರಿಸ್ಥಿತಿಗಳು ಇನ್ನಷ್ಟು ಹಲ್ಲೆಗಳನ್ನು ಎದುರಿಸಬೇಕಾಗಬಹುದು.

ಇದು ಜನಗಳಲ್ಲಿ ಅಸಂತೃಪ್ತಿಯನ್ನು ಮತ್ತಷ್ಟು ಹೆಚ್ಚಿಸುವುದು ಖಂಡಿತ. ಆಳುವ ವರ್ಗಗಳು ಜನಗಳನ್ನು ಒಡೆಯಲು, ಅವರ ಗಮನವನ್ನು ನಿಜ ಪ್ರಶ್ನೆಗಳಿಂದ ಬೇರೆಡೆಗೆ ತಿರುಗಿಸಲು, ಐಕ್ಯತೆಯನ್ನು ಮುರಿಯಲು ಮತ್ತು ಐಕ್ಯ ಹೋರಾಟಗಳನ್ನು ದುರ್ಬಲಗೊಳಿಸಲು ಕೋಮುವಾದಿ ಮತ್ತು ವಿಭಜನಕಾರಿ ಶಕ್ತಿಗಳನ್ನು ಪ್ರೋತ್ಸಾಹಿಸುತ್ತವೆ. ಈ ಮೂಲಕ ದೊಡ್ಡ ಕಾರ್ಪೊರೇಟ್‌ಗಳಿಗೆ ಅನುಕೂಲಕರವಾದ ನವ-ಉದಾರವಾದಿ ಧೋರಣೆಗಳನ್ನು ಮುಂದುವರೆಸಲು ಅವಕಾಶ ಕಲ್ಪಿಸಿಕೊಳ್ಳಲಾಗುತ್ತಿದೆ.

ಈ ಹಿಂದೆ ಮೋದಿಯವರು ಗುಜರಾತಿನಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಆ ರಾಜ್ಯದಲ್ಲಿ ಮುಸ್ಲಿಮರ ಸಾಮೂಹಿಕ ಹತ್ಯಾಕಾಂಡವನ್ನು ಖಂಡಿಸಿದ್ದ ಕಾರ್ಪೊರೇಟ್ ಮಾಧ್ಯಮಗಳು ಈಗ ಅವರನ್ನು ಜನತೆಯ ಉದ್ಧಾರಕ ಎಂದು ಬಿಂಬಿಸಲು ಕೂಡ ಹೇಸುತ್ತಿಲ್ಲ. ಏಕೆಂದರೆ ಮೋದಿ ಮತ್ತು ಬಿಜೆಪಿ ಅವರ ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ಆರೆಸ್ಸೆಸ್‌ನ ನೇತೃತ್ವದಲ್ಲಿ ನವ-ಉದಾರವಾದಕ್ಕೆ ಬದ್ಧವಾಗಿರುವುದರಿಂದ ಮತ್ತು ವಿರೋಧವನ್ನು ಹತ್ತಿಕ್ಕಲು ಸರ್ವಾಧಿಕಾರೀ ವಿಧಾನಗಳನ್ನು ಬಳಸಲು ಸಿದ್ಧರಿರುವುದರಿಂದ ಅವರೇ ತಮ್ಮ ಹಿತಾಸಕ್ತಿಗಳನ್ನು ಚೆನ್ನಾಗಿ ರಕ್ಷಿಸಬಲ್ಲರು ಎಂದು ಅವರು ನಂಬಿದ್ದಾರೆ.

ಆಳುವ ವರ್ಗಗಳ ಇಂತಹ ಹಂಚಿಕೆಗಳು ಮತ್ತು ಕೋಮುವಾದಿ ಹಾಗೂ ವಿಭಜನಕಾರಿ ಶಕ್ತಿಗಳು ಒಂದೇ ತಾಳಕ್ಕೆ ಕುಣಿಯುವ ಅಪಾಯಕಾರಿ ಆಟಗಳ ಬಗ್ಗೆ ಕಾರ್ಮಿಕ ವರ್ಗ ಮತ್ತು ಶ್ರಮಜೀವಿ ಜನಗಳು ಎಚ್ಚರದಿಂದ ಇರಬೇಕು. ಐಕ್ಯತೆಯನ್ನು ಒಡೆಯುವ ಅವರ ಹೀನ ತಂತ್ರಗಳನ್ನು ವಿಫಲಗೊಳಿಸಬೇಕು.

ಘೋಷಣೆಗಳನ್ನು ಸಾಕಾರಗೊಳಿಸಿ
ಮೈಲಿಗಲ್ಲಾಗಬೇಕು

ಇನ್ನು ಮುಂದೆ ಕಾರ್ಮಿಕ ವರ್ಗ ತಮ್ಮ ಸಮಸ್ಯೆಗಳಿಗೆ ಕಾರಣಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಅಗತ್ಯವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಅದು ಈ ಕಾರಣಗಳನ್ನು ಅರ್ಥಮಾಡಿಕೊಳ್ಳಬೇಕಷ್ಟೇ ಅಲ್ಲ, ತಮ್ಮ ಸಂಕಟಗಳಿಗೆ ಹೊಣೆಯಾದ ಧೋರಣೆಗಳ ವಿರುದ್ಧ ಹೋರಾಟದ ನೇತೃತ್ವವನ್ನೂ ವಹಿಸಬೇಕಾಗಿದೆ. ಅದು ಜಾತಿ, ಮತ, ಪ್ರದೇಶ, ಲಿಂಗದ ಇತ್ಯಾದಿ ಬೇಧವೆಣಿಸದೆ ತನ್ನೆಲ್ಲ ಶಕ್ತಿಗಳನ್ನು ಕ್ರೋಢೀಕರಿಸಬೇಕಾಗಿದೆ. ಜನವಿಭಾಗಗಳ ನಡುವೆ ತಮ್ಮ ಮಿತ್ರರು ಯಾರು, ಗುರುತಿಸಿಕೊಳ್ಳಬೇಕಾಗಿದೆ. ಇಂತಹ ಒಂದು ಐಕ್ಯತೆ ಮತ್ತು ಐಕ್ಯಹೋರಾಟಗಳು ಮಾತ್ರವೇ ಈ ಸರಕಾರದ ಕಾರ್ಮಿಕ-ವಿರೋಧಿ, ಜನ-ವಿರೋಧಿ ಮತ್ತು ರಾಷ್ಟ್ರ-ವಿರೋಧಿ ಧೋರಣೆಗಳನ್ನು ತಡೆದು ನಿಲ್ಲಿಸಿ, ಅವನ್ನು ಹಿಮ್ಮೆಟ್ಟಿಸಿ ನಿರ್ಣಾಯಕವಾಗಿ ಸೋಲಿಸಬಲ್ಲದು. ಇಂತಹ ಒಂದು ಹೋರಾಟದಲ್ಲಿ ಕಾರ್ಮಿಕ ವರ್ಗ ನೇತೃತ್ವ ವಹಿಸಬೇಕು. ಅದೇ ವೇಳೆಯಲ್ಲಿ ಈ ಹೋರಾಟವನ್ನು ಇನ್ನಷ್ಟು ವಿಶಾಲಗೊಳಿಸಲು ಅದು ಶ್ರಮಜೀವಿಗಳ ಇತರ ಎಲ್ಲ ವಿಭಾಗಗಳ, ಅದರಲ್ಲೂ ರೈತರು, ಕೃಷಿ ಕೂಲಿಕಾರರು, ಕುಶಲಕರ್ಮಿಗಳು ಮುಂತಾದವರ ಬೆಂಬಲವನ್ನು ಗಳಿಸಬೇಕಾಗಿದೆ.

"ತಲುಪಿಲ್ಲದವರನ್ನು ತಲುಪಿ" ಮತ್ತು "ಸಮಸ್ಯೆಗಳನ್ನು ಧೋರಣೆಗಳೊಂದಿಗೆ ಜೋಡಿಸಿ, ಧೋರಣೆಗಳ ಹಿಂದಿರುವ ರಾಜಕೀಯವನ್ನು ಬಯಲು ಮಾಡಿ' ಎಂಬ ಸಿಐಟಿಯು ಸಮ್ಮೇಳನಗಳಲ್ಲಿ ಅಂಗೀಕರಿಸಿದ ಘೋಷಣೆಗಳನ್ನು ಆಚರಣೆಗೆ ತರುವುದು ಅಗತ್ಯವಾಗಿದೆ.

ಈ ಕಣ್ಣೋಟದೊಂದಿಗೆ ನವಂಬರ್ 9-11ರ 'ಮಹಾಪಡಾವ್'"ನ್ನು ಬಳಸಿಕೊಳ್ಳಬೇಕಾಗಿದೆ. ಇದು ನವ-ಉದಾರವಾದದ ವಿರುದ್ಧ ಹೋರಾಟದ ಒಂದು ಮೈಲಿಗಲ್ಲಾಗಬೇಕು; ಜಂಟಿ ಕಾರ್ಮಿಕ ಆಂದೋಲನದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಬೇಕು ಮತ್ತು ಎಲ್ಲ ಶೋಷಣೆಗಳಿಂದ ಮುಕ್ತಿಯತ್ತ ಹೋರಾಟದಲ್ಲಿ ಒಂದು ಮೈಲಿಗಲ್ಲಾಗಬೇಕು. ●

ಚೊಕ್ಕಾಡಿಯವರ 'ಸೆಕ್ಯುಲರಿಸಂನ ಮಧ್ಯ ಪಂಥ'ಕ್ಕೆ ಪ್ರತಿಕ್ರಿಯೆ

– ಡಾ. ಕಿರಣ್.ಎಂ ಗಾಜನೂರು / ಕುವೆಂಪು ವಿವಿ

"ಚೊಕ್ಕಾಡಿಯವರು 19ನೇ ಶತಮಾನದಲ್ಲಿ ರೂಪುಗೊಂಡ ಆಧುನಿಕ ರಾಜಕಾರಣದ ಕಾಲದಲ್ಲಿ ಬಲಪಂಥ ಪ್ರತಿಪಾದಿಸುವ 'ಉಗ್ರ ಧಾರ್ಮಿಕತೆ'ಯನ್ನು 'ಧಾರ್ಮಿಕತೆ' ಅಂತಲೂ, ಎಡಪಂಥ ಪ್ರತಿಪಾದಿಸುವ ದೇವರ ವಿಮರ್ಶೆಯನ್ನು ಒಟ್ಟು ವ್ಯಕ್ತಿಯ ಧಾರ್ಮಿಕ ತಾತ್ವಿಕತೆಯ ವಿರೋಧದಂತೆಯೂ ಅರ್ಥ ಮಾಡಿಕೊಂಡು ವಿಶ್ಲೇಷಣೆಗೆ ಕುಳಿತಂತೆ ಕಾಣುತ್ತದೆ. ಈ ಗ್ರಹಿಕೆಯೇ ಮೂಲಭೂತ ಮಿತಿಗಳನ್ನು ಹೊಂದಿದೆ. ಕಾರಣ ಲೇಖನದಲ್ಲಿ ಚೊಕ್ಕಾಡಿಯವರು ಧಾರ್ಮಿಕತೆ/ಬಲಪಂಥವನ್ನು ಅದರ ಸಮರ್ಥಕರು ರೂಪಿಸಿದ (ಧಾರ್ಮಿಕವಾದಿಗಳು) ಅರ್ಥದಲ್ಲಿ, ಮಾರ್ಕ್ಸವಾದ/ಎಡಪಂಥವನ್ನು ಅದರ ವಿರೋಧಿಗಳು (ಬಂಡವಾಳಶಾಹಿ) ರೂಪಿಸಿ ಕೊಟ್ಟ ಲೋಕದೃಷ್ಟಿಯಲ್ಲಿ ಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದಂತೆ ಕಾಣುತ್ತದೆ."

17–10–2017 ರ ಪ್ರಜಾವಾಣಿಯಲ್ಲಿ ಪ್ರಕಟವಾದ ಅರವಿಂದ್ ಚೊಕ್ಕಾಡಿ ಅವರ "ಸೆಕ್ಯುಲರಿಸಂನ ಮಧ್ಯಮ ಪಂಥ" ಎಂಬನ ಶೀರ್ಷಿಕೆಯ ಲೇಖನ ರಿಲಿಜನ್/ಸೆಕ್ಯುಲರಿಸಂ, ಎಡಪಂಥ/ಬಲಪಂಥ ಪರಿಭಾಷೆಗಳ ಕುರಿತು ಸಾಕಷ್ಟು ಗೊಂದಲವೂ, ಪೂರ್ವಗ್ರಹಿಕೆಯ ಹಿನ್ನೆಲೆಯ ಅಭಿಪ್ರಾಯಗಳನ್ನು ದಾಖಲಿಸಿದೆ ಅನ್ನಿಸುತ್ತದೆ.

ಜೊತೆಗೆ ಪ್ರಸ್ತುತ ಮಧ್ಯಮ ಪಂಥದ ಕುರಿತ ವಿರೋಧಗಳು ಸಮರ್ಥ ಅಧ್ಯಯನ, ಅಭ್ಯಾಸದ ನೆಲೆಗಟ್ಟಿನ ಗಂಭೀರ ಚರ್ಚೆಗಳಲ್ಲ ಎಂಬ ಆರೋಪವನ್ನು ಲೇಖಕರು ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಚೊಕ್ಕಾಡಿಯವರ ಲೇಖನವನ್ನು ನೋಡುವುದಾದರೆ ಅವರು ಮುಖ್ಯವಾಗಿ ಎರಡು ತರ್ಕಗಳನ್ನು ಬಳಸಿ ಎಡಪಂಥ ಮತ್ತು ಬಲಪಂಥದ ತಾತ್ವಿಕತೆಯನ್ನು ವಿಮರ್ಶಿಸುತ್ತಲೇ ಮಧ್ಯಮ ಪಂಥದ, ಸೆಕ್ಯುಲರಿಸಂ ಪರಿಕಲ್ಪನೆಯನ್ನು ಮುಂದಕ್ಕೆ ತರುತ್ತಾರೆ.

ಲೇಖಕರು ಮುಂದಿಡುವ ಪ್ರಮುಖ ಎರಡು ತರ್ಕಗಳು. . .

1) ಬಲಪಂಥವನ್ನು ಸಾರಾಸಗಟಾಗಿ ಬೆಂಬಲಿಸುತ್ತಾ ಹೋದರೆ ಅದು ಹಿಂದುತ್ವದ ಬೆಂಬಲಕ್ಕಷ್ಟೆ ಸೀಮಿತವಾಗುವುದಿಲ್ಲ. ಈ ಪ್ರವೃತ್ತಿ ಪರೋಕ್ಷವಾಗಿ ಸಿಮಿ ಸಂಘಟನೆಯ ತರ್ಕವನ್ನು ಬೆಂಬಲಿಸಿದಂತೆ ಆಗುತ್ತದೆ.

2) ಎಡಪಂಥವನ್ನು ಸಾರಸಗಟಾಗಿ ಬೆಂಬಲಿಸುತ್ತಾ ಹೋದರೆ ಅದು ಮನುಷ್ಯರಿಗೆ ಧಾರ್ಮಿಕ ಸ್ವಾತಂತ್ರ್ಯವೇ ಇಲ್ಲ ಎನ್ನುವ ವರೆಗೂ ಕೊಂಡೊಯ್ಯುತ್ತದೆ.

ಈ ಎರಡೂ ವಾದಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಚೊಕ್ಕಾಡಿಯವರು 19ನೇ ಶತಮಾನದಲ್ಲಿ ರೂಪುಗೊಂಡ ಆಧುನಿಕ ರಾಜಕಾರಣದ ಕಾಲದಲ್ಲಿ ಬಲಪಂಥ ಪ್ರತಿಪಾದಿಸುವ 'ಉಗ್ರ ಧಾರ್ಮಿಕತೆ'ಯನ್ನು "ಧಾರ್ಮಿಕತೆ' ಅಂತಲೂ, ಎಡಪಂಥ ಪ್ರತಿಪಾದಿಸುವ ದೇವರ ವಿಮರ್ಶೆಯನ್ನು ಒಟ್ಟು ವ್ಯಕ್ತಿಯ ಧಾರ್ಮಿಕ ತಾತ್ವಿಕತೆಯ ವಿರೋಧದಂತೆಯೂ ಅರ್ಥ ಮಾಡಿಕೊಂಡು ವಿಶ್ಲೇಷಣೆಗೆ ಕುಳಿತಂತೆ ಕಾಣುತ್ತದೆ. ಈ ಗ್ರಹಿಕೆಯೇ ಮೂಲಭೂತ ಮಿತಿಗಳನ್ನು ಹೊಂದಿದೆ. ಕಾರಣ ಲೇಖನದಲ್ಲಿ ಚೊಕ್ಕಾಡಿಯವರು ಧಾರ್ಮಿಕತೆ/ಬಲಪಂಥವನ್ನು ಅದರ ಸಮರ್ಥಕರು ರೂಪಿಸಿದ (ಧಾರ್ಮಿಕವಾದಿಗಳು) ಅರ್ಥದಲ್ಲಿ, ಮಾರ್ಕ್ಸವಾದ/ಎಡಪಂಥವನ್ನು ಅದರ ವಿರೋಧಿಗಳು (ಬಂಡವಾಳಶಾಹಿ) ರೂಪಿಸಿ ಕೊಟ್ಟ ಲೋಕದೃಷ್ಟಿಯಲ್ಲಿ ಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದಂತೆ ಕಾಣುತ್ತದೆ.

ಆದರೆ ವಾಸ್ತವದಲ್ಲಿ ಆಧುನಿಕ ರಾಜಕಾರಣ ಅಥವಾ ಆಳುವ ವರ್ಗ 'ಜನಪದ ಸಹಜ ಧಾರ್ಮಿಕತೆ'ಯನ್ನು 'ಉಗ್ರ ಧಾರ್ಮಿಕತೆ'ಯಾಗಿ ವಿವರಿಸಿ ಅದರ ಹಿಂಸಾತ್ಮಕ ರೂಪವನ್ನು ಸಮರ್ಥಿಸುತ್ತಿರುವ ಅಂಶವನ್ನು ಮತ್ತು ಸಮಾಜದಲ್ಲಿ ಅದು ಉಂಟು ಮಾಡುತ್ತಿರುವ ಪರಿಣಾಮಗಳನ್ನು ಲೇಖಕರು ಗುರುತಿಸಲು ಸೋತಿದ್ದಾರೆ.

ಇಂದು ಸಮಾಜದಲ್ಲಿ ಬದುಕುತ್ತಿರುವ ದೊಡ್ಡ ಸಂಖ್ಯೆಯ ಜನ ಸಮುದಾಯ ದೇವರು, ಧರ್ಮ. ಪೂಜೆ ಇತ್ಯಾದಿಗಳನ್ನು



ತಲೆಮಾರುಗಳಿಂದ ನಡೆದು ಬಂದ 'ಸಹಜ ಧಾರ್ಮಿಕತೆ'ಯ ಅರ್ಥದಲ್ಲಿ ಆಚರಿಸುತ್ತಿದ್ದಾರೆಯೇ ಹೊರತು ಆಧುನಿಕ ಅಧಿಕಾರ/ಮತ ರಾಜ–ಕಾರಣದ ಭಾಗವಾಗಿ ಬಲಪಂಥ ಪ್ರತಿಪಾದಿಸುವ ಯಾವುದನ್ನೋ ವಿರೋಧಿಸುವ, ಮತ್ಯಾವುದನ್ನೋ ಅನ್ಯವಾಗಿಸುವ, ಪರಸ್ಪರ ವಿರುದ್ಧವಾಗಿಯೇ ಅರ್ಥವಾಗುವ ಉಗ್ರ ಧಾರ್ಮಿಕತೆಯ ಅರ್ಥದಲ್ಲಿ ಅಲ್ಲ.. ! ಗಾಂಧಿ, ಲೋಹಿಯಾ, ಜೆ.ಪಿ ಮುಂತಾದವರು ತಮ್ಮ ಚಳುವಳಿಗೆ ಬಳಸಿಕೊಂಡಿದ್ದು ಈ ಸಹಜ ಧಾರ್ಮಿಕತೆಯ ಸಂಕೇತಗಳನ್ನೆ ಹೊರತು ಹಿಂಜಣತ್ವ ಉಗ್ರ ಧಾರ್ಮಿಕತೆಯ ಸಂಕೇತಗಳನ್ನಲ್ಲ. ಈ ಮುಖ್ಯವಾದ ಅಂಶವನ್ನು ಲೇಖಕರು ಗಮನಿಸಿದಂತೆ ಕಾಣುವುದಿಲ್ಲ.

ಇನ್ನು "ಎಡಪಂಥವನ್ನು ಸಾರಸಗಟಾಗಿ ಬೆಂಬಲಿಸುತ್ತಾ ಹೋದರೆ ಅದು ಮನುಷ್ಯರಿಗೆ ಧಾರ್ಮಿಕ ಸ್ವಾತಂತ್ರ್ಯವೇ ಇಲ್ಲ ಎಂಬಲ್ಲಿಗೆ ತಲುಪುತ್ತದೆ" ಎಂಬ ಲೇಖಕರ ವಾದದಲ್ಲಿಯೂ ಹುರುಳಿಲ್ಲ. ಏಕೆಂದರೆ ಈ ವಾದವನ್ನು ಹೆಣೆಯುವ ಪ್ರತಿಯೊಬ್ಬರು "ಕಾರ್ಲ್ ಮಾರ್ಕ್ಸ್ ಮತಧರ್ಮವನ್ನು ಆಫೀಮು ಎಂದು ಕರೆದ" ಎಂಬ ಸಾಲುಗಳ ಆಧಾರದಲ್ಲಿ ತಮ್ಮ ಅಭಿಪ್ರಾಯವನ್ನು ಮುಂದಿಡುತ್ತಾರೆ. ಚೊಕ್ಕಾಡಿಯವರೂ ಅದನ್ನೆ ಮಾಡಿದ್ದಾರೆ.

ಆದರೆ ವಾಸ್ತವದಲ್ಲಿ ಈ ಸಾಲುಗಳು ಮಾರ್ಕ್ಸ್ 1853 ಸುಮಾರಿಗೆ ಬರೆದ A Contribution to the Critique of Hegel's Philosophy of Right ಲೇಖನದ ವಿಸ್ತೃತ ಪ್ಯಾರಾವೊಂದರ ಮಧ್ಯ ಬರುವ ಸಾಲುಗಳು ಮಾತ್ರ. ಮಾರ್ಕ್ಸ್ ಆ ಕಾಲದ ಧರ್ಮ ಮತ್ತು ದೇವರ ಕಲ್ಪನೆಯ ಹಿಂದಿರುವ ಅವೈಜ್ಞಾನಿಕತೆಯನ್ನು ವಿಶ್ಲೇಷಿಸಲು/ವಿಮರ್ಶಿಸಲು ಈ ಉಪಮೆಯನ್ನು ಬಳಸಿದ್ದಾನೆಯೇ ಹೊರತು ಮೂಲಭೂತ ಮನುಷ್ಯನ ಸಹಜ ಧಾರ್ಮಿಕತೆಯ ವಿರೋಧದ ಭಾಗವಾಗಿ ಅಲ್ಲ. ಏಕೆಂದರೆ ಅದೇ ಫ್ಯಾರಾದಲ್ಲಿ "ಧರ್ಮ ಹೃದಯಹೀನ ಜಗತ್ತಿನ ಹೃದಯವಾಗಿದೆ, ಆತ್ಮವಿಲ್ಲದ ಸ್ಥಿತಿಯ ಆತ್ಮವಾಗಿದೆ" ಎಂಬ ಸಾಲುಗಳೂ ಬರುತ್ತವೆ ಎಂಬ ವಾದವನ್ನು ಸಾಕಷ್ಟು ಮಂದಿ ವಿದ್ವಾಂಸರು ಮುಂದಿಟ್ಟಿದ್ದಾರೆ. ಆದರೂ ಸಹ ನಾವು ಆ ಹಳೆಯ ಸಾಲುಗಳಿಗೆ ಸೆಲೆಕ್ಟಿವ್ ಆಗಿ ಅಂಟಿಕೊಳ್ಳುವುದಕ್ಕೆ ಕಾರಣ ನಮಗೆ ಮಾರ್ಕ್ಸ್'ವಾದ ಅರ್ಥವಾಗಿರುವುದು ಅದರ ವಿರೋಧಿಗಳು ರೂಪಿಸಿಕೊಟ್ಟ ವಿಮರ್ಶೆಯ ಭಾಗವಾಗಿ ಎಂಬ ಮೇಲಿನ ನನ್ನ ವಾದವನ್ನು ಮತ್ತೆ ಪುನರುಚ್ಚರಿಸುತ್ತಿದ್ದೇನೆ.

ಇನ್ನು ಚೊಕ್ಕಾಡಿಯವರು ಸೆಕ್ಯುಲರಿಸಂ ಕುರಿತ ಎಡಪಂಥ ಮತ್ತು ಬಲಪಂಥದ ಧೋರಣೆಗೆ ಪರ್ಯಾಯವಾಗಿ ಮುಂದಿಟ್ಟಿರುವ "ಸೆಕ್ಯುಲರಿಸಮ್'ನ ಮಧ್ಯಮ ಪಂಥ"ವನ್ನು ನಾವು ಹೇಗೆ ನೋಡಬೇಕು ಎಂಬ ಪ್ರಶ್ನೆ. ಇದನ್ನೊಂದು ತತ್ವವಾಗಿ ನೋಡಬೇಕು ಅನ್ನುವುದಾದರೆ, ಮಧ್ಯಮ ಪಂಥದ ತಾತ್ವಿಕತೆಯನ್ನು ವಿವರಿಸಬೇಕಾಗುತ್ತದೆ. ವಾಸ್ತವದಲ್ಲಿ ಅದು ಕ್ರಿಯೆಯಾಗಿ ಅಸ್ತಿತ್ವದಲ್ಲಿ ಇಲ್ಲ ಎಂಬ ಸತ್ಯದ ಕಾರಣಕ್ಕೆ ನಾವು ಈ ಸವಾಲನ್ನು ಸ್ವೀಕರಿಸಲು ಸಾಧ್ಯವಿಲ್ಲ.

ಇದಕ್ಕೆ ಬದಲಾಗಿ ನಾವು ಎಡಪಂಥ ಮತ್ತು ಬಲಪಂಥಗಳ ತಾತ್ವಿಕತೆ ರಾಜಕೀಯ ಪಕ್ಷಗಳಾಗಿ, ಒತ್ತಡ ಗುಂಪುಗಳಾಗಿ ಕಾರ್ಯಾಚರಣೆ–ಯ ಹಂತದಲ್ಲಿ ಭಾರತದ ಆಧುನಿಕ ರಾಜ್ಯ ವ್ಯವಸ್ಥೆಯನ್ನು ಹೇಗೆ ಪ್ರಭಾವಿಸಿವೆ? ಅವುಗಳ ಮಿತಿಗಳು ಏನು? ಎಂಬ ಸೀಮಿತ ಅರ್ಥದಲ್ಲಿ ವಿಶ್ಲೇಷಿಸುವುದನ್ನು ಬಿಟ್ಟು ಮುಂಬರುವ "ತಲೆಮಾರುಗಳ ಪ್ರಜ್ಞೆಯನ್ನು ರೂಪಿಸುವ ಬೌದ್ಧಿಕ ತತ್ವಗಳಾಗಿ (Intellectual left/ Intellectual right) ಹೇಗೆ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿ ಆಗುತ್ತವೆ ಎಂಬ ವಿಶಾಲ ಅರ್ಥದಲ್ಲಿ ವಿಶ್ಲೇಷಿಸುವ ಸಂವಾದ ತಾಣವನ್ನು ಸಮರ್ಥವಾಗಿ ರೂಪಿಸಿದರೆ ಉತ್ತಮ. ಜ್ಞಾನಶಾಖೆ ಮತ್ತು ಅದರ ಭಾಗವಾಗಿ ದೊಡ್ಡ ಜನವರ್ಗವನ್ನು ಒಳಗೊಳ್ಳುವ ನಿಜವಾದ ಅರ್ಥದ ಪ್ರಜಾಸತ್ತಾತ್ಮಕ ಸಾಮಾಜಿಕ, ರಾಜಕೀಯ ರಚನೆಗಳನ್ನು ಕಟ್ಟಿಕೊಳ್ಳುವ ಸಾಧ್ಯತೆ ಇದೆ.

ಇಲ್ಲವಾದರೆ ಇತ್ತೀಚೆಗೆ ಶಿವ ವಿಶ್ವನಾಥನ್ ಹೇಳಿದಂತೆ ಧಾರ್ಮಿಕ ಮತ್ತು ಮಾರುಕಟ್ಟೆ ಕೇಂದ್ರಿತ ಆಳುವ ವರ್ಗಗಳು ಸೃಷ್ಟಿಸುವ "Knowledge is no longer critical for them. They only survive on information. They have no sense of history or even the craft of conversation' ಎಂಬ ಅರ್ಥದ ಅಲೋಚನಾ ಗುಣ ಹೊಂದಿರುವ ಸತ್ವರಹಿತ ತಲೆಮಾರುಗಳ ಜೊತೆ ಉಳಿಯಬೇಕಾಗುತ್ತದೆ.

ಅಘಾತಕಾರಿ ಅಂಶ ಏನೆಂದರೆ, ಭಾರತದಲ್ಲಿನ ಆಳುವ ವರ್ಗ ಈ ವಿಷಕಾರಿ ಬೆಳೆಯ ಬೀಜಗಳನ್ನು ಬಿತ್ತಾಗಿದೆ ಎಂಬುದು. ಆ ಕಾರಣಕ್ಕೆ ನಾವು ತೀರಾ ವ್ಯಕ್ತಿಕೇಂದ್ರಿತವಾದ ಮತ್ತು ಸಂಕುಚಿತವಾದ (Dogmatic) ಪಂಥಸಂಘರ್ಷ ಬಿಟ್ಟು ಸಹಜ ಧಾರ್ಮಿಕ, ಆರ್ಥಿಕ, ಸಾಮಾಜಿಕ ಪ್ರಜ್ಞೆ ರೂಪಿಸಲು ಬೇಕಾದ ಕನಿಷ್ಟ ಪ್ರಜಾಸತ್ತಾತ್ಮಕ ವಾತಾವರಣವನ್ನು ಉಳಿಸಿಕೊಳ್ಳುವ ಕಡೆ ಹೆಚ್ಚು ಗಮನ ಕೂಡಬೇಕಿದೆ.


(ಪ್ರಜಾವಾಣಿಯಲ್ಲಿ ಅಪ್ರಕಟಿತ)

ಜೋಯ್ಡಾದಲ್ಲಿ ಅರಣ್ಯ ಅತಿಕ್ರಮಣದಾರರ ಅಹೋರಾತ್ರಿ ಧರಣಿ

ಕರ್ನಾಟಕ ಪ್ರಾಂತ ರೈತ ಸಂಘ ಉತ್ತರ ಕನ್ನಡ ಜಿಲ್ಲೆ ನೇತೃತ್ವದಲ್ಲಿ ಅರಣ್ಯ ಭೂಮಿ ಅತಿಕ್ರಮಣದಾರರ ನಿರ್ಣಾಯಕ ಹೋರಾಟ ಜೋಯ್ಡಾದಲ್ಲಿ ತಹಶಿಲ್ದಾರರ ಕಛೇರಿ ಎದುರು 36 ಗಂಟೆಗಳ ಅಹೋರಾತ್ರಿ ಧರಣಿ ಆರಂಭವಾಗಿದೆ. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹ ಸಂಚಾಲಕ ರಾದ ಎಸ್.ವೈ. ಗುರುಶಾಂತ್ ಉದ್ಘಾಟನೆ ಮಾಡಿದರು



ಕೇಂದ್ರೀಯ ಬ್ಯಾಂಕ್ ತಿಪ್ಪರಲಾಗ ಹಾಕುವಂತೆ ಮಾಡಿದ ಅಚ್ಛೇ ದಿನ್ ಆಧಾರ್ ಗೀಳು



ದೇಶದ ಕೇಂದ್ರೀಯ ಬ್ಯಾಂಕಾದ ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಅಕ್ಟೋಬರ್ 20 ರಂದು ಮಾಹಿತಿ ಹಕ್ಕಿನ ಅಡಿಯಲ್ಲಿನ ಪ್ರಶ್ನೆಗೆ ಉತ್ತರಿಸುತ್ತ ತಾನು ಬ್ಯಾಂಕ್ ಖಾತೆಗಳನ್ನು ಆಧಾರ್‌ನೊಂದಿಗೆ ಜೋಡಿಸಬೇಕೆಂದು ಆದೇಶ/ಅಧಿಸೂಚನೆಯನ್ನೇನೂ ಹೊರಡಿಸಿಲ್ಲ ಎಂದಿತು.

ಮರುದಿನವೇ, ಅಂದರೆ ಅಕ್ಟೋಬರ್ 21 ರಂದು ಆರ್‌ಬಿಐನ ಒಂದು ಪತ್ರಿಕಾ ಹೇಳಿಕೆ ಬಂತು. "ಅನ್ವಯವಾಗುವ ಸಂದರ್ಭಗಳಲ್ಲಿ, ಆಧಾರ್ ನಂಬರನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಿಸುವುದು ಜೂನ್ 1, 2017 ರಂದು ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿದ 'ಹಣ ಶುಭ್ರೀಕರಣ ತಡೆ(ದಾಖಲೆಗಳ ಸಂರಕ್ಷಣೆ) ಎರಡನೇ ತಿದ್ದುಪಡಿ ನಿಯಮಗಳು, 2017ರ ಅಡಿಯಲ್ಲಿ ಕಡ್ಡಾಯ ಎಂದು ರಿಝರ್ವ್ ಬ್ಯಾಂಕ್ ಸ್ಪಷ್ಟೀಕರಿಸುತ್ತದೆ. ಈ ನಿಯಮಗಳು ಕಾನೂನಾತ್ಮಕ ಬಲ ಹೊಂದಿವೆ, ಆದ್ದರಿಂದ ಬ್ಯಾಂಕುಗಳು ಮುಂದಿನ ಸೂಚನೆಗಳನ್ನು ಕಾಯದೆ ಅವನ್ನು ಜಾರಿಗೊಳಿಸಬೇಕು"

ವಾಸ್ತವವಾಗಿ ಇದು 'ಸ್ಪಷ್ಟೀಕರಣ' ಅಲ್ಲ 'ಲೋಪನಿವಾರಣೆ'. ಅಚ್ಛೇ ದಿನ್‌ಗಳ ಆಧಾರ್ ಗೀಳು ತಂದ ಮುಜುಗರ. ಆರ್‌ಬಿಐ ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡುವ ಬದಲು ಅಧಿಸೂಚನೆಯನ್ನೇ ಹೊರಡಿಸಬಹುದಾಗಿತ್ತಲ್ಲವೇ ಎಂದು ಕೆಲವರು ಪ್ರಶ್ನಿಸಬಹುದು. ಆದರೆ ಅದು ಹಾಗೆ ಹೊರಡಿಸಲು ಸಾಧ್ಯವಿಲ್ಲ. ಸುಪ್ರಿಂ ಕೋರ್ಟ್ ತನ್ನ ಮಧ್ಯಂತರ ಆದೇಶದಲ್ಲಿ ಆರು ಸರಕಾರೀ ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಮಾತ್ರ ಸದ್ಯಕ್ಕೆ ಆಧಾರ್‌ನ್ನು ಜೋಡಿಸಬಹುದು ಎಂದಿತ್ತಾದ್ದರಿಂದ ಬೇರೆ ಯಾವುದಕ್ಕೇ ಅದನ್ನು ಜೋಡಿಸುವ ಅಧಿಸೂಚನೇ ಹೊರಡಿಸಿದರೆ ನ್ಯಾಯಾಂಗ ನಿಂದನೆಯಾಗುತ್ತದೆ. ಸರಕಾರಕ್ಕೆ, ಮುಖ್ಯವಾದ ಅದರ ಸರ್ವೋಚ್ಚ ನಾಯಕರಿಗೆ ನ್ಯಾಯಾಲಯದ ಬಗ್ಗೆ ಗೌರವ ಇದೆಯೋ ಇಲ್ಲವೋ, ರಿಝರ್ವ್ ಬ್ಯಾಂಕ್ ಗವರ್ನರ್ ಅಂತೂ ನ್ಯಾಯಾಂಗ ನಿಂದನೆ ಕೇಸ್ ಎದುರಿಸಬೇಕಾಗುತ್ತದೆ. ಆದ್ದರಿಂದ ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ನಿಯಂತ್ರಕನಾಗಿದ್ದರೂ ಈ ನಿರ್ಣಯ ಕೈಗೊಂಡದ್ದು ಸರಕಾರವಾದ್ದರಿಂದ ಈ ರೀತಿ 'ಸ್ಪಷ್ಟೀಕರಣ' ಹೇಳಿಕೆ ಕೊಡಬೇಕಾದ ಮುಜುಗರಕ್ಕೆ ಅದು ಒಳಗಾಗಬೇಕಾಗಿದೆ.

ಈ ನಡುವೆ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟ (ಎಐಬಿಒಸಿ) ಸುಪ್ರಿಂ ಕೋರ್ಟ್ ಈ ವಿಷಯದಲ್ಲಿ ಸ್ಪಷ್ಟ ನಿರ್ದೇಶನ ನೀಡುವ ವರೆಗೆ ಬ್ಯಾಂಕ್ ಖಾತೆಗೆ ಆಧಾರ್ ನಂಬರನ್ನು ಜೋಡಿಸುವುದನ್ನು ಸದ್ಯಕ್ಕೆ ತಡೆಹಿಡಿಯಬೇಕು ಎಂದು ಆಗ್ರಹಿಸಿದೆ.

ಆಧಾರ್ ಕಾಯ್ದೆ ಪ್ರಕಾರ ಇದರಲ್ಲಿ ದಾಖಲಿಸಿಕೊಳ್ಳುವುದು ಕಡ್ಡಾಯವಲ್ಲ. ಹಾಗಿದ್ದರೆ ಆಧಾರ್ ಕಾಯ್ದೆಯಲ್ಲಿಲ್ಲದ ಬ್ಯಾಂಕಿಂಗ್ , ಟೆಲಿಕಾಂ ಇತ್ಯಾದಿ ಸೇವೆಗಳಿಗೆ ಅದನ್ನು ಕಡ್ಡಾಯಗೊಳಿಸಲು ಹೇಗೆ ಸಾಧ್ಯ ಎಂದು ಅದು ಪ್ರಶ್ನಿಸಿದೆ. ಆದರೆ ಅಚ್ಛೇ ದಿನ್‌ಗಳಲ್ಲಿ ಇಂತಹ ತರ್ಕಕ್ಕೆ ಅವಕಾಶವಿದ್ದಂತಿಲ್ಲ. ಆಧಾರ್‌ನಂಬರ್ ಇದ್ದವರು ಡಿಸೆಂಬರ್ 31ರೊಳಗೆ ಜೋಡಿಸಲೇ ಬೇಕು, ಇಲ್ಲದವರಿಗೆ ಬೇಕಾದರೆ ಮಾರ್ಚ್ 31ರ ವರೆಗೆ ಸಮಯ ಕೊಡಬಹುದು ಎಂದು ಸರಕಾರದ ವಕೀಲರು ಸುಪ್ರಿಂ ಕೋರ್ಟ್ ಎದುರು ಹೇಳಿದ್ದಾರೆ!

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ(ಎಐಬಿಇಎ) ಕೂಡ ಆಧಾರ್ ಜೋಡಣೆಯ ಕೆಲಸಕ್ಕಾಗಿ ಕೆಲವು ಬ್ಯಾಂಕ್ ಶಾಖೆಗಳನ್ನು ವಿಶೇಷವಾಗಿ ಪಟ್ಟಿ ಮಾಡಿರುವುದಕ್ಕೆ ಪ್ರತಿಭಟನೆ ವ್ಯಕ್ತಪಡಿಸಿದೆ. **ಸಾರ್ವಜನಿಕ ವಲಯದ ಬ್ಯಾಂಕುಗಳ ಸಂಪನ್ಮೂಲಗಳ ಮೇಲೆ ತೀವ್ರ ಒತ್ತಡ ಇರುವಂತಹ ಈ ದಿನಗಳಲ್ಲಿ ಇದು ಬ್ಯಾಂಕುಗಳ ಆರೋಗ್ಯ ಮತ್ತಷ್ಟು ಹದಗೆಡುವಂತೆ ಮಾಡುತ್ತವೆ ಎಂದು ಆತಂಕ ವ್ಯಕ್ತಪಡಿಸಿದೆ.** " ಸದ್ಯಕ್ಕೆ ಕೆಲವು ಖಾಸಗಿ ಏಜೆನ್ಸಿಗಳು ಈ ಕೆಲಸ ಮಾಡುತ್ತಿವೆ, ಅವು ಬ್ಯಾಂಕ್ ಸ್ಥಳವನ್ನು ಬಳಸಿಕೊಳ್ಳುತ್ತಿವೆ. ಇತ್ತಿಚಿನ ಸೂಚನೆ ಎಂದರೆ ಈ ಖಾಸಗಿ ಏಜೆನ್ಸಿಗಳ ಬದಲು ಈ ಕೆಲಸವನ್ನು ಸಂಪೂರ್ಣವಾಗಿ ಬ್ಯಾಂಕ್ ಸಿಬ್ಬಂದಿಯೇ ಮಾಡಬೇಕು ಎಂಬುದು." ಎಂದಿರುವ ಎಐಬಿಇಎ, ಇದನ್ನು ಒಪ್ಪಲು ಸಾಧ್ಯವಿಲ್ಲ, ಏಕೆಂದರೆ ಸರಿಯಾದ ನೇಮಕಾತಿ ಇಲ್ಲದೆ ಈಗಾಗಲೇ ನೌಕರರ ಮೇಲೆ ವಿಪರೀತ ಕೆಲಸದ ಹೊರೆ ಇದೆ, ಅದು ಇನ್ನಷ್ಟು ಏರುತ್ತದೆ ಎಂದು ಹೇಳಿದೆ.

ಆದರೆ ಅಚ್ಛೇ ದಿನ್ ಸರಕಾರಕ್ಕೆ ಒಂದು ನಿರ್ದಿಷ್ಟ ವಿಭಾಗದ ಹಿತಗಳು ಮಾತ್ರವೇ ಮುಖ್ಯ ತಾನೇ? ಸಾರ್ವಜನಿಕ ವಲಯದ ಬ್ಯಾಂಕುಗಳ, ಅವುಗಳ ನೌಕರರ ಆರೋಗ್ಯ ಮತ್ತಷ್ಟು ಕೆಟ್ಟರೇನಂತೆ!

ರದ್ದು ಮಾಡಿದ 11 ಲಕ್ಷ ಬಡಜನರ ರೇಶನ್ ಕಾರ್ಡ್‌ಗಳನ್ನು ಝಾರ್ಖಂಡ್ ಒಳ್ಳೆ ದಿನ ಸರಕಾರ ಊರ್ಜಿತಗೊಳಿಸುತ್ತದೆಯೇ?

ಝಾರ್ಖಂಡ್‌ನ ಸಿಂದೇಗ ಜಿಲ್ಲೆಯಲ್ಲಿ 11 ವರ್ಷದ ಬಾಲಕಿ ಸಂತೋಷಿ ಹಸಿವಿನಿಂದ ಪ್ರಾಣ ಬಿಟ್ಟ ಘಟನೆಯ ನಂತರ ರಾಂಚಿಯಲ್ಲಿ ಅಲ್ಲಿಯ ಸರಕಾರ ಆಧಾರ್ ನಂಬರನ್ನು ರೇಶನ್ ಕಾರ್ಡಿನೊಂದಿಗೆ ಜೋಡಿಸಬೇಕು ಎಂಬ ಆದೇಶವನ್ನು ರದ್ದು ಮಾಡಿತು. ಈ ಮೂಲಕ ಆ ಬಾಲಕಿ ಹಸಿವಿನಿಂದ ಸಾಯಲು ಈ ಆಧಾರ್-ರೇಶನ್ ಕಾರ್ಡ್ ಜೋಡಣೆಯೇ ಕಾರಣ ಎಂದು ಒಪ್ಪಿಕೊಂಡಂತಾಗಿದೆ. ಆದರೆ ಅಲ್ಲಿ ಸಿಂದೇಗದಲ್ಲಿ ಆರೆಸ್ಸೆಸ್-ಬಿಜೆಪಿ ಮಂದಿ ಸಂತೋಷಿಯ ಕುಟುಂಬದವರ ಮೇಲೆ ಆಧಾರ್-ರೇಶನ್ ಕಾರ್ಡ್ ಕುರಿತಂತೆ ತಮ್ಮ ಹೇಳಿಕೆಗಳನ್ನು ಹಿಂದಕ್ಕೆ ಪಡೆಯುವಂತೆ ಬೆದರಿಕೆ ಹಾಕುತ್ತಿದ್ದಾರೆ. ರಾಂಚಿಯಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಈ ವಿಷಯವನ್ನು ತಿಳಿಸಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಝಾರ್ಖಂಡ್ ಸರಕಾರ ಆಧಾರ್-ರೇಶನ್ ಕಾರ್ಡ್ ಜೋಡಣೆಯ ಬಗ್ಗೆ ಸುಳ್ಳು ಹೇಳುತ್ತಿದೆ ಎಂದು ಆಪಾದಿಸಿದರು, ಮುಮದುವರೆದು ಅವರು ಸರಕಾರ ಈ ಜೋಡಣೆ ಆಗಿಲ್ಲ ಎಂದು ರದ್ದು ಮಾಡಿದ 11ಲಕ್ಷ ಕಾರ್ಡ್‌ಗಳನ್ನು ಯಾವಾಗ ಮತ್ತೆ ಊರ್ಜಿತಗೊಳಿಸುತ್ತದೆ ಎಂದು ಹೇಳಬೇಕು ಎಂದು ಆಗ್ರಹಿಸಿದರು.

ಆಧಾರ್‌ನಿಂದ 11 ಬಿಲಿಯ ಡಾಲರ್ ಉಳಿತಾಯ-ಒಂದು ಮಹಾಸುಳ್ಳು!

ಕಳೆದ ಸಂಚಿಕೆಯಲ್ಲಿ ಗಮನಿಸಿದಂತೆ, ಆಧಾರ್‌ನ 'ಶಿಲ್ಪಿ' ನಂದನ್ ನೀಲೇಕಣಿಯವರು ತನ್ನ ಈ ಕೊಡುಗೆಯಿಂದಾಗಿ 9 ಬಿಲಿಯ ಡಾಲರ್ ಉಳಿತಾಯವಾಗಿದೆ ಎಂದು ವಾಶಿಂಗ್ಟನ್‌ನಲ್ಲಿ ಹೇಳಿದರಂತೆ. ಇದಕ್ಕೆ ಮೊದಲು ಮೋದಿ ಸರಕಾರ ಆಧಾರ್ ಕುರಿತ ವಿಚಾರಣೆಯಲ್ಲಿ ಎಪ್ರಿಲ್27 ರಂದು ಸಲ್ಲಿಸಿದ ಅಫಿಡವಿಟ್‌ನಲ್ಲಿ ಆಧಾರ್‌ನಿಂದ 11 ಬಿಲಿಯ ಡಾಲರ್ (ಸುಮಾರು 70ಸಾವಿರ ಕೋಟಿರೂ) ಉಳಿತಾಯವಾಗಿದೆಯೆಂದು ಹೇಳಿತು.

ಈ 9 ಕೋಟಿ, 11 ಕೋಟಿ ಇತ್ಯಾದಿಗಳ ಮೂಲ ಯಾವುದು? ಸರಕಾರದ ಬಳಿಯಂತೂ ಇದರ ಅಂಕಿ-ಅಂಶಗಳಿಲ್ಲ. ವಾಸ್ತವವಾಗಿ ಇದರ ಮೂಲ ವಿಶ್ವಬ್ಯಾಂಕ್‌ನ ವಿಶ್ವ ಅಭಿವೃದ್ಧಿ ವರದಿ ಎನ್ನಲಾಗಿದೆ. ಅದಕ್ಕೆ ಈ ಮಾಹಿತಿ ಸಿಕ್ಕಿದೆಲ್ಲಿಂದ? ವಾಶಿಂಗ್ಟನ್ ನಲ್ಲಿನ 'ಸಿಜಿಎಪಿ' ಎಂಬ ಸಮಾಲೋಚನಾ ಗುಂಪಿನಿಂದ. ಆದರೆ ಅದರ ಅಧ್ಯಯನದಲ್ಲಿ 11.3 ಬಿಲಿಯ ಡಾಲರ್ ಆಧಾರ್ ಮೂಲಕ ಮನರೇಗ, ಎನ್‌ಎಸ್‌ಎಪಿ, ಜೆಎಸ್‌ವೈ,ಎಲ್‌ಪಿಜಿ ಸಬ್ಸಿಡಿ ಇತ್ಯಾದಿಗಳಲ್ಲಿ ಫಲಾನುಭವಿಗಳಿಗೆ ಆಗುವ ವರ್ಗಾವಣೆಗಳ ಒಟ್ಟು ಮೊತ್ತ-ಇದನ್ನು ಅದು 'ವರ್ಗಾವಣೆ ಮೌಲ್ಯ' ಎಂದಿದೆ. ಆದರೆ ಅದು ವಾಶಿಂಗ್ಟನ್‌ನಿಂದ ದಿಲ್ಲಿ ತಲುಪುವಾಗ "ಆಗಬಹುದಾದ ಉಳಿತಾಯ' ಎಂದು ಬದಲಾಯಿತು. ಈ ವಿಷಯವನ್ನು ದಿಲ್ಲಿ ಐಐಟಿಯ ಆಹಾರ ಹಕ್ಕುಗಳ ಕಾರ್ಯಕರ್ತೆ ದೀಪಿಕಾ ಖೆರಾ ತೋರಿಸಿಕೊಟ್ಟಿದ್ದಾರೆ.

ಇದನ್ನು ನಂದನ್ ನೀಲೇಕಣಿಯವರು ಮತ್ತು ಸರಕಾರದ ಆರ್ಥಿಕ ಪಂಡಿತರು, ಅಂತಿಮವಾಗಿ ಸ್ವತಃ ಪ್ರಧಾನ ಮಂತ್ರಿಗಳು ಕಣ್ಣು ಮುಚ್ಚಿ ವಿಶ್ವಬ್ಯಾಂಕ್‌ನ ವೇದವಾಕ್ಯ ಎಂದು ನಂಬಿದರೇ, ಅಥವಾ ಈ 'ಪದಾಂತರ' ಬಗ್ಗೆ ತಿಳಿದಿದ್ದೂ ಇದಕ್ಕೆ ವ್ಯಾಪಕ ಪ್ರಚಾರ ಕೊಟ್ಟರೇ? ಗೊತ್ತಿಲ್ಲ. ಇದೊಂದು ಮಹಾಸುಳ್ಳು ಎಂದು ಈಗಲಾದರೂ ಒಪ್ಪಿದ್ದಾರೆಯೇ? ಇದುವರೆಗಿನ ಅನುಭವ ನೋಡಿದರೆ ಅದರ ಸಾಧ್ಯತೆ ಬಹಳ ಕಡಿಮೆ. ಈ ಹಿಂದೆ ಎಲ್‌ಪಿಜಿ ಸಬ್ಸಿಡಿಯ ನೇರ ವರ್ಗಾವಣೆಯಿಂದಾದ 'ಉಳಿತಾಯ' ನಿಜವಲ್ಲ, ಎಂದು ಸಿಎಜಿಯ ವರದಿಯೇ ಬಯಲಿಗೆಳೆದರೂ 'ಉಳಿತಾಯ'ದ ಪ್ರಚಾರ ಮಾತ್ರ ನಿಲ್ಲಲಿಲ್ಲ.

ಒಂದು ವರ್ಷವಾಯಿತು-ಕಪ್ಪು ಹಣ ನಿವಾರಣೆಯಂತೆ 'ನಗದು ರಹಿತ ಭಾರತ' ಕೂಡ ಟೊಳ್ಳು ಬಡಾಯಿ

ಈ ನವಂಬರ್ 8 ರಂದು ನೋಟು ರದ್ಧತಿ ಕ್ರಮವನ್ನು ಕೈಗೊಂಡು ಒಂದು ವರ್ಷವಾಗುತ್ತಿದೆ. ಸರಕಾರ ಹೆಪ್ಪಿ ಬರ್ತ್‌ಡೇ ಆಚರಿಸಬೇಕೆಂದು ಬಯಸುವಂತೆ ಕಾಣುತ್ತದೆ. ಆದ್ದರಿಂದ ಬಿಜೆಪಿ ಅಧ್ಯಕ್ಷರ ಬದಲು ಹಣಕಾಸು ಮಂತ್ರಿಗಳೇ ಬಿಜೆಪಿ ಅದನ್ನು 'ಕಪ್ಪು ಹಣ-ವಿರೋಧಿ ದಿನವಾಗಿ ಆಚರಿಸುತ್ತದೆ ಎಂದು ಪ್ರಕಟಿಸಿದ್ದಾರೆ. ದೇಶದಲ್ಲಿ ಬಹಳಷ್ಟು ಮಂದಿಗೆ ಇದು ಇನ್ನೊಂದು ಅಚ್ಛೇ ದಿನ್ ತಮಾಷೆಯಾಗಿ ಕಾಣುವುದು ಸಹಜ. ಏಕೆಂದರೆ ಈ ಕ್ರಮದಿಂದ ಕಪ್ಪು ಹಣ ನಾಶವಾಗುವ ಬದಲು ಬಿಳಿ ಬಟ್ಟೆ ಹಾಕಿಕೊಂಡು ಪ್ರಕಾಶಿಸುತ್ತಿದೆ ಎಂಬ ಬಗ್ಗೆ 'ಭಕ್ತ'ರಿಗೆ ಬಿಟ್ಟು ಉಳಿದ ಬಹಳಷ್ಟು ಮಂದಿಗೆ ಸಂದೇಹವೇನೂ ಉಳಿದಿಲ್ಲ.

ನಿಜ, ಇದು ನೋಟು ರದ್ಧತಿಯ ಆರಂಭದಲ್ಲೇ ಬಹಳಷ್ಟು ಪ್ರಜ್ಞಾವಂತರಿಗೆ ಮನವರಿಕೆಯಾಗಲಾರಂಬಿಸಿತ್ತು. ಆದ್ದರಿಂದಲೇ ನಗದು ರಹಿತ ಆರ್ಥಿಕತೆ ತರುವುದು ನೋಟುರದ್ದತಿಯ ಉದ್ದೇಶ ಎಂದು ಪ್ರಚಾರ ಆರಂಭವಾಯಿತು. ಆದರೆ ಅದೂ ಹುಸಿಯಾಗಿದೆ ಎಂದು ರಿಝರ್ವ್ ಬ್ಯಾಂಕಿನ ಇತ್ತೀಚಿನ ಅಂಕಿ-ಅಂಶಗಳೇ ಹೇಳುತ್ತಿವೆ. ಇದರ ಆಧಾರದಲ್ಲಿ ವಿಶ್ಲೇಷಕರೊಬ್ಬರು "ನಗದುರಹಿತರಾಗಲು ಭಾರತೀಯರ ನಕಾರ- ಮತ್ತೊಂದು ನೋಟುರದ್ಧತಿ ಗುಳ್ಳೆ ಒಡೆದಿದೆ" (ಸುಭೋದ್ ವರ್ಮ, ನ್ಯುಸ್‌ಕ್ಲಿಕ್.ಇನ್, ಅಕ್ಟೋಬರ್21) ಎಂದು ವರ್ಣಿಸಿದ್ದಾರೆ.

ಈ ಅಂಕಿ-ಅಂಶಗಳ ಪ್ರಕಾರ ಎಟಿಎಂಗಳಿಂದ ಹಣ ಪಡೆಯುವ ಪ್ರಮಾಣ ಸುಮಾರಾಗಿ ಇಳಿದೇ ಇಲ್ಲ ಎನ್ನಬಹುದು, ಜತೆಗೆ ಮೊಬೈಲ್ ವ್ಯಾಲೆಟ್, ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಬಳಕೆಯಲ್ಲು ಗಮನಾರ್ಹವಾದ ಹೆಚ್ಚಳವೇನೂ ಆಗಿಲ್ಲ.


ಇದನ್ನು ಮರೆಮಾಚಲು ಸ್ವತಃ ಪ್ರಧಾನಮಂತ್ರಿಗಳೇ ಕೆಲವು ದಿನಗಳ ಹಿಂದೆ ನಗದು-ಜಿಡಿಪಿ ಅನುಪಾತ 12%ದಿಂದ 9% ಕ್ಕೆ ಇಳಿದಿದೆ. ಆದರೆ ಇದು ಇನ್ನೊಂದು ಕಸರತ್ತು ಅಷ್ಟೇ ಎಮದು ಬೇಗನೇ ಬೆಳಕಿಗೆ ಬಂದಿದೆ. ನೋಟು ರದ್ಧತಿಯ ಮೊದಲು ಇದು 12% ಇತ್ತು. ಅಕ್ಟೋಬರ್ 2027 ರ ವೇಲೆಗೆ ಇದು 11.4% ಇದೆ. ನಿಜ, ಮಾರ್ಚ್ 2017ರಲ್ಲಿ ಇದು 9% ಇತ್ತು, ಅದಕ್ಕೆ ಕಾರಣ ಆಗಿನ್ನೂ ಹೊಸ ನೊಟುಗಳ ಮುದ್ರಣ ಕಾರ್ಯ ಬಹಳಷ್ಟು ಬಾಕಿಯಿತ್ತು(ಈಗಲೂ ಅದು ಪೂರ್ಣಗೊಂಡಿಲ್ಲ).

ನೋಟುರದ್ಧತಿಯ ಹಿಂದಿನ ತಿಂಗಳು ಅಕ್ಟೋಬರ್ 2016ರಲ್ಲಿ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಮೂಲಕ ನಡೆದಿದ್ದ ವ್ಯವಹಾರಗಳ ಮೊತ್ತ 2424 ಬಿಲಿಯ ರೂಗಳು. ಈ ಅಕ್ಟೋಬರ್‌ನ ಮಾಹಿತಿ ಇನ್ನೂ ಬಂದಿಲ್ಲ. ಆಗಸ್ಟ್ 2017ರಲ್ಲಿ ಇದು 2355 ಬಿಲಿಯ ರೂ.ಗಳು ಇತ್ತು. ಬಹುಶಃ ನೋಟುರದ್ಧತಿಯಿಲ್ಲದಿದ್ದರೂ ಈ ವ್ಯತ್ಯಾಸ ಇದ್ದೇ ಇರುತ್ತಿತ್ತು.

ಮೊಬೈಲ್ ವ್ಯಾಲೆಟ್‌ಗಳ ಬಳಕೆ ದುಪ್ಪಟ್ಟಾಗಿರುವುದು ನಿಜ. ಆದರೆ ಒಟ್ಟು ನಗದೇತರ ವ್ಯವಹಾರಗಲಲ್ಲಿ ಇದರ ಪಾಲು ಈಗಲೂ ಕೇವಲ 0.4%.


ಒಟ್ಟಿನಲ್ಲಿ ನಗದು ರಹಿತ ಭಾರತದ ಕನಸಂತೂ ದೂರ, 'ಕಡಿಮೆ ನಗದಿ'ನ ಕನಸೂ ಈಡೇರುವಂತೆ ಕಾಣೂತ್ತಿಲ್ಲ. ಇದಕ್ಕೆ ಕಾರಣಗಳು 'ಭಕ್ತ'ರಲ್ಲಲದವರಿಗೆ ಸ್ಪಷ್ಟ. ಕೇವಲ 17% ಮಂದಿಗೆ ನಿಯಮಿತ ಸಂಬಳ/ ವೇತನಗಳಿವೆ, ಉಳಿದವರಲ್ಲಿ ಬಹುಪಾಲು ಜನಗಳ ತಿಂಗಳ ಆದಾಯ 7500ರೂ.ಗಿಂತ ಕಡಿಮೆಯೇ ಇರುವಾಗ ನಗದುರಹಿತ ಆರ್ಥಿಕದ ಬಗ್ಗೆ ಊಹಿಸುವುದಾದರೂ ಹೇಗೆ ಎನ್ನುತ್ತಾರೆ ಈ ವಿಶ್ಲೇಷಕರು. ಆದರೆ ಈ ಜನಗಳ ಆದಾಯಗಳನ್ನು ಹೆಚ್ಚಿಸುವ ಕನಸೂ ಕೂಡ ಈ ಅಚ್ಛೇದಿನ್‌ಗಳಲ್ಲಿ ಇಲ್ಲ.

ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್. ಕಾಂ



ಅಕ್ಟೋಬರ್ 12ರಂದು ಗುಜರಾತ್ ವಿಧಾನಸಭೆಯ ಚುನಾವಣೆಯ ಮತಗಣನೆಯ ದಿನವನ್ನು ಪ್ರಕಟಿಸಲಾಯಿತು. 13 ದಿನಗಳ ನಂತರ ಅಕ್ಟೋಬರ್ 25ರಂದು ಮತದಾನದ ದಿನಾಂಕಗಳನ್ನು ಮುಖ್ಯ ಚುನಾವಣಾ ಆಯುಕ್ತರು ಪ್ರಕಟಿಸಿದ್ದಾರೆ. ಈ 13 ದಿನಗಳಲ್ಲಿ ಗುಜರಾತ್ ಸರಕಾರ ರೈತರಿಗೆ 3ಲಕ್ಷರೂ.ವರೆಗೆ ಬಡ್ಡಿ ರಹಿತ ಸಾಲ. 326 ಪಾಟೀದಾರರ ಮೇಲಿನ ಕೇಸುಗಳು ರದ್ದು, ಚರಂಡಿ ಕೆಲಸಗಾರರಿಗೆ ಖಾಯಂ ಉದ್ಯೋಗ, ನಾಲ್ಕನೇ ದರ್ಜೆ ನೌಕರರಿಗೆ ದೀಪಾವಳಿ ಬೋನಸ್, ಒಬಿಸಿ ವಿದ್ಯಾರ್ಥಿಗಳ ಪಾಲಕರ ಆದಾಯ ಮಿತಿ ಏರಿಕೆ ಇತ್ಯಾದಿ ಒಟ್ಟು 16 ಹೊಸ ಕ್ರಮಗಳನ್ನು ಪ್ರಕಟಿಸಲಾಯಿತು ಹಾಗೂ ಪ್ರಧಾನ ಮಂತ್ರಿಗಳು ಎರಡು ಬಾರಿ ರಾಜ್ಯಕ್ಕೆ ಭೇಟಿಕೊಟ್ಟು ಸುಮಾರು 11,000 ಕೋಟಿ ರೂ.ಗಳ ಏಳು ದೊಡ್ಡ (ಕೆಲವು ಅಪೂರ್ಣವಗಿರುವ) ಯೋಜನೆಗಳನ್ನು ಉದ್ಘಾಟಿಸಿದ್ದಾರೆ. -ಸುದ್ದಿ

ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ದೈತ್ಯ ಉದ್ಯಮಿಗಳ ಸಾಲ ಮಾಫಿ ಸಾಮಾನ್ಯ ಠೇವಣಿದಾರರಿಗೆ ಟೋಪಿ



ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳಲ್ಲಿ ವಸೂಲಾಗದ ಸಾಲದ (NPA) ಪ್ರಮಾಣದಲ್ಲಿ ಗಣನೀಯವಾಗಿ ಹೆಚ್ಚಳವಾಗಿರುತ್ತದೆ. ಇದರಲ್ಲಿ ಶೇಕಡಾ 88.4 ರಷ್ಟು ದೊಡ್ಡ ಉದ್ಯಮಪತಿಗಳಿಗೆ ನೀಡಿರುವ ರೂ. 5 ಕೋಟಿಗೂ ಮೀರಿದ ಸಾಲಗಳು ಸೇರಿವೆ. ಅಷ್ಟೇ ಅಲ್ಲ, ಅದರಲ್ಲಿ ಶೇಕಡಾ 25 ರಷ್ಟು ಪಾಲು ಕೇವಲ 12 ದೊಡ್ಡ ಸಾಲಗಾರರಿಗೆ ಸೇರಿದೆ. ಆದರೆ ಈಗಿರುವ ಸರ್ಕಾರವು ಈ ಸಾಲಗಳ ವಸೂಲಾತಿಗೆ ರಾಜಕೀಯ ಇಚ್ಚಾಶಕ್ತಿಯನ್ನು ತೋರಿಸುತ್ತಿಲ್ಲ. ಬದಲಾಗಿ ಈ ಸಾಲಗಳ ಮರುಪಾವತಿ ಅವಧಿಯನ್ನು ವಿಸ್ತರಿಸುವುದು, ಸಾಲಮನ್ನಾ ಮಾಡುವುದು ಮುಂತಾದ ಕ್ರಮಗಳನ್ನು ಕೈಗೊಳ್ಳುತ್ತಾ ಸಾರ್ವಜನಿಕ ಕ್ಷೇತ್ರಗಳ ಬ್ಯಾಂಕುಗಳ ಕಾರ್ಯಕ್ಷಮತೆಯನ್ನು ಕೀಳಾಗಿ ಚಿತ್ರಿಸಿ ಅವುಗಳನ್ನು ಖಾಸಗೀಕರಣದತ್ತ ದೂಡುತ್ತಿದೆ. ಈ ಉದ್ದೇಶಕ್ಕಾಗಿಯೇ FRDI ಮಸೂದೆಯನ್ನು ರೂಪಿಸಲಾಗಿದೆ.



ದಿನಾಂಕ 14.07.2017 ರಂದು ಕೇಂದ್ರ ಸಚಿವ ಸಂಪುಟವು ಫೈನಾನ್ಸಿಯಲ್ ರೆಸಲ್ಯೂಷನ್ ಮತ್ತು ಡಿಪಾಜಿಟ್ ಇನ್ಸೂರೆನ್ಸ್ ಬಿಲ್ (Financial Resolution and Deposit Insurance Bill) - 2017 ನ್ನು ಅಂಗೀಕರಿಸಿದ್ದು ಮುಂದಿನ ಪಾರ್ಲಿಮೆಂಟಿನ ಅಧಿವೇಶನದಲ್ಲಿ ಅದನ್ನು ಮಂಡಿಸಲಾಗುತ್ತಿದೆ. ಈ ಕಾಯಿದೆಯು ರಿಸೊಲ್ಯುಷನ್ ಕಾರ್ಪೋರೇಷನ್ (Resolution Corporation) ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಲು ಅವಕಾಶ ಮಾಡಿಕೊಡುತ್ತದೆ. ಹೀಗೆ ಸ್ಥಾಪಿಸಲ್ಪಡುವ ನಿಗಮವು ಎಲ್ಲ ಬ್ಯಾಂಕುಗಳು, ಇನ್ಸೂರೆನ್ಸ್ ಕಂಪನಿಗಳು, ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳ ಮೇಲೆ ನಿಯಂತ್ರಣವನ್ನು ಹೊಂದಲಿದೆ. ಸದ್ಯಕ್ಕೆ ಈ ಮಸೂದೆಯನ್ನು ಪಾರ್ಲಿಮೆಂಟರಿ ಸಮಿತಿಯ ಅವಗಾಹನೆಗೆ ಸಲ್ಲಿಸಲಾಗಿದೆ.

ಹೀಗೆ ಸ್ಥಾಪಿಸಲಿರುವ ನಿಗಮವು ನಿರ್ದೇಶನ ಮತ್ತು ಆಡಳಿತಕ್ಕಾಗಿ ಒಂದು ನಿರ್ದೇಶಕರ ಮಂಡಳಿಯನ್ನು ಹೊಂದಲಿದ್ದು, ಆ ಮಂಡಳಿ ಆಡಳಿತ ಮತ್ತು ವ್ಯವಹಾರವನ್ನು ನಡೆಸುವ ಅಧಿಕಾರವನ್ನು ಪಡೆದಿರುತ್ತದೆ. ಈ ನಿಗಮವು ಒಬ್ಬ ಅಧ್ಯಕ್ಷರು, ಹಣಕಾಸು ಸಚಿವಾಲಯ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಸೆಕ್ಯೂರಿಟಿ ಎಕ್ಸೆಛೇಂಜ್ ಬೋರ್ಡ್ ಆಫ್ ಇಂಡಿಯಾ, ಇನ್ಸುರೆನ್ಸ್ ರೆಗ್ಯೂಲೇಟರಿ ಅಂಡ್ ಡೆವಲಪ್‌ಮೆಂಟ್ ಅಥಾರಿಟಿ ಆಫ್ ಇಂಡಿಯಾ ಮತ್ತು ಪೆನ್ಷನ್ ಫಂಡ್ ಡೆವಲಪ್‌ಮೆಂಟ್ ಅಥಾರಿಟಿ ಆಫ್ ಇಂಡಿಯಾಗಳ ಪ್ರತಿನಿಧಿಗಳಲ್ಲದೆ ಮೂರು ಪೂರ್ಣಾವಧಿ ಸದಸ್ಯರು ಹಾಗೂ ಎರಡು ಸ್ವತಂತ್ರ ಸದಸ್ಯರನ್ನು ಒಳಗೊಳ್ಳಲಿದ್ದು ಅಧ್ಯಕ್ಷರು ಮತ್ತು ಎಲ್ಲಾ ಸದಸ್ಯರನ್ನು ಕೇಂದ್ರ ಸರ್ಕಾರವೇ ನೇಮಕ ಮಾಡಲಿದೆ.

ಭಾರತೀಯ ಸ್ಟೇಟ್ ಬ್ಯಾಂಕ್, ಇತರೇ ರಾಷ್ಟ್ರೀಕೃತ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಪೇಮೆಂಟ್ ಬ್ಯಾಂಕುಗಳು ಹಾಗೂ ಭಾರತೀಯ ಜೀವ ವಿಮಾ ನಿಗಮ (LIC) ಮತ್ತು ಸಾಮಾನ್ಯ ವಿಮಾ ಕಂಪನಿಗಳು ಸೇರಿದಂತೆ ಎಲಾ ಹಣಕಾಸು ಸಂಸ್ಥೆಗಳು ಯಾವುದೇ ಸಂದರ್ಭದಲ್ಲಿ ಬಿಕ್ಕಟ್ಟಿಗೊಳಗಾದರೆ, ಜಗತ್ತಿನ ಬೇರೆಡೆ ಆದಂತೆ ಅವುಗಳ ಅಸ್ತಿತ್ವಕ್ಕೆ ಸಂಚಕಾರ ಬರುವುದು ಖಂಡಿತ. ಅಂತಹ ಪರಿಸ್ಥಿತಿಯಲ್ಲಿ ಅಥವಾ ಅಂತಹ ಪರಿಸ್ಥಿತಿ 'ಸನ್ನಿಹಿತ' ವಾಗಿದೆ ಎಂದು ರಿಸೊಲ್ಯುಷನ್ ನಿಗಮ ಒಂದು ವೇಳೆ ಪರಿಗಣಿಸಿದಲ್ಲಿ, ಯಾವುದೇ ಹಣಕಾಸು ಸಂಸ್ಥೆಯನ್ನು ಬೇರೊಂದು ಸಂಸ್ಥೆಯ ಸುಪರ್ದಿಗೆ ಒಪ್ಪಿಸುವ ಅಥವಾ ವಿಲೀನಿಕರಣಗೊಳಿಸುವ ಅಥವಾ ವಶಪಡಿಸಿಕೊಳ್ಳುವ, ಇಲ್ಲವೇ ಮುಚ್ಚಿಬಿಡುವ ಕ್ರಮಕೈಗೊಳ್ಳಲು ಅದಕ್ಕೆ ಅಧಿಕಾರವಿರುತ್ತದೆ.

ಈ ನಿಗಮವು ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯದ ಅಧೀನದಲ್ಲಿರುತ್ತದೆ ಹಾಗೂ ಮೇಲೆ ಹೇಳಿದ ಸಂಸ್ಥೆಗಳನ್ನು ಇತರೆ ಯಾವುದೇ ಸರ್ಕಾರಿ ಅಥವಾ ಖಾಸಗೀ ಸಂಸ್ಥೆಗಳಿಗೆ ಹಸ್ತಾಂತರಿಸುವ ಅಧಿಕಾರವನ್ನು ಸಹಾ ಹೊಂದಿರುತ್ತದೆ.

ಅಷ್ಟು ಮಾತ್ರವೇ ಅಲ್ಲ. ಯಾವುದೇ ಸಂಸ್ಥೆಯ ಉದ್ಯೋಗಿಗಳನ್ನು ಅವರ ಸೇವೆಯಲ್ಲಿ ಮುಂದುವರಿಸದೆ ಇರುವ, ಉದ್ಯೋಗಿಗಳನ್ನು ಬೇರೆ ಸಂಸ್ಥೆಗಳಿಗೆ ವರ್ಗಾವಣೆ ಮಾಡುವ ಹಾಗೂ ವೇತನದಲ್ಲಿ ಕಡಿತ ಮಾಡುವ ತೀರ್ಮಾನಗಳನ್ನು ತೆಗೆದುಕೊಳ್ಳಲು ಕೂಡಾ ಈ ನಿಗಮಕ್ಕೆ ಸಂಪೂರ್ಣ ಅಧಿಕಾರವಿರುತ್ತದೆ.

1961 ರಿಂದ ಅಸ್ತಿತ್ವದಲ್ಲಿರುವ "ಡೆಪಾಸಿಟ್ ಇನ್ಸುರೆನ್ಸ್ ಮತ್ತು ಕ್ರೆಡಿಟ್ ಗ್ಯಾರೆಂಟಿ ಕಾರ್ಪೋರೇಷನ್" (DICGC) ಇದುವರೆಗೆ ಠೇವಣಿದಾರರಿಗೆ ಅವರ ಉಳಿತಾಯಕ್ಕೆ ವಿಮಾ ಸೌಲಭ್ಯ ನೀಡುತ್ತಿತ್ತು. ಈ ಸಂಸ್ಥೆಯನ್ನು ಮುಚ್ಚಿಬಿಡಲು ಉದ್ದೇಶಿತ ಈಖಿಆಖ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದ–ಕ್ಕೆ ಬದಲಾಗಿ ಈ ನಿಗಮವು ತನ್ನ ವಿವೇಚನೆಗೆ ಅನುಸಾರವಾಗಿ ಗರಿಷ್ಟ ಒಂದು ಲಕ್ಷದವರೆಗೆ, ಮಾತ್ರ ಅದೂ ಕಂತುಗಳಲ್ಲಿ ಠೇವಣಿದಾರರಿಗೆ ಅವರ ಹಣವನ್ನು ಮರುಪಾವತಿ ಮಾಡಲು ಅವಕಾಶವಿರುತ್ತದೆ.

ಈ ರೀತಿ 'ರೆಸಲ್ಯೂಷನ್ ನಿಗಮ'ವನ್ನು ಸ್ಥಾಪಿಸುವುದು ಬ್ಯಾಂಕ್‌ಗಳ ರಾಷ್ಟ್ರೀಕರಣದ ಮೂಲ ಉದ್ದೇಶಗಳಿಗೆ ವಿರುದ್ಧವಾಗಿದೆ ಮತ್ತು ಸಂವಿಧಾನದ ಪ್ರಸ್ಥಾವನೆಯಲ್ಲಿನ ಅಂಶಗಳಿಗೂ ವಿರುದ್ಧವಾಗಿದೆ. ಇತ್ತೀಚೆಗೆ ಭಾರತೀಯ ಸ್ಟೇಟ್ ಬ್ಯಾಂಕನ್ನು "ಸಿಸ್ಟಮ್ಯಾಟಿಕಲಿ ಇಂಪಾರ್ಟೆಂಟ್ ಫೈನಾನ್ಶಿಯಲ್ ಇನ್‌ಸ್ಟಿಟ್ಯೂಷನ್" (SIFI) ಎಂದು ಹೆಸರಿಸಲಾಗಿದೆ. ಇದಕ್ಕೂ ಮೊದಲು ಐಸಿಐಸಿಐ ಬ್ಯಾಂಕ್ ಹಾಗೂ ಹೆಚ್‌ಡಿಎಫ್‌ಸಿ ಬ್ಯಾಂಕುಗಳನ್ನೂ ಸಹ SIFI ಎಂದು ಹೆಸರಿಸಲಾಗಿತ್ತು. ಹೀಗೆ ಹೆಸರಿಸಲಾದ ಸಂಸ್ಥೆಗಳು ನಿಗಮದ ನಿರಂತರ ಪರಿವೀಕ್ಷಣೆಗೆ ಒಳಗಾಗಬೇಕಾಗುತ್ತದೆ. ಇದಲ್ಲದೇ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕಾಯ್ದೆಯ ಸೆಕ್ಷನ್ 45 ರ ನಂತರ ಸೆಕ್ಷನ್ 45(ಅ) ನ್ನು ಸೇರಿಸುವುದರ ಮೂಲಕ ಭಾರತೀಯ ಸ್ಟೇಟ್ ಬ್ಯಾಂಕಿನ ಮೇಲೆ ನಿಗಮದ ಅಧಿಕಾರವನ್ನು ಸ್ಥಾಪಿಸಲಾಗುತ್ತದೆ. ಈಗಿರುವ SBI Act ನಲ್ಲಿ ಯಾವುದೇ ಸಂದರ್ಭದಲ್ಲೂ SBI ಯನ್ನು ಸಮಾಪ್ತಿಗೊಳಿಸಲು ಅವಕಾಶವಿಲ್ಲದಿರುವುದರ ಹಿನ್ನೆಲೆಯಲ್ಲಿ ಈ ಕ್ರಮವನ್ನು ಗಮನಿಸಬೇಕಾಗುತ್ತದೆ.

ಈ ಉದ್ದೇಶಿತ ಮಸೂದೆಯಲ್ಲಿರುವ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು.

2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಮುಳುಗಿಯೇ ಹೋಗಿದ್ದ ಬ್ಯಾಂಕು ಮತ್ತಿತರ ಹಣಕಾಸು ಸಂಸ್ಥೆಗಳನ್ನು ಉಳಿಸಲೋಸುಗ ಅಮೇರಿಕಾ ಮತ್ತು ಯೂರೋಪಿನ ದೇಶಗಳಲ್ಲಿ ಅಪಾರ ಪ್ರಮಾಣದ ಆರ್ಥಿಕ ನೆರವನ್ನು ಸರ್ಕಾರಿ ಬೊಕ್ಕಸಗಳಿಂದ ಅವುಗಳಿಗೆ ನೀಡಲಾಗಿತ್ತು. ಅದರ ಹೊರೆಯನ್ನೆಲ್ಲಾ ಆನಂತರ ಜನ ಸಾಮಾನ್ಯರ ಅದರಲ್ಲೂ ದುಡಿಯುವ ಜನ ವಿಭಾಗಗಳ ಮೇಲೆ ವರ್ಗಾಯಿಸಲಾಗಿತ್ತು. ಈ ಪ್ರಕ್ರಿಯೆ ಇಂದಿಗೂ ಮುಂದುವರೆದಿದೆ.

ಇಂತಹ ಜನ ವಿರೋಧಿ ಕ್ರಮಗಳಿಂದಾಗಿ, ಜಗತ್ತಿನಾದ್ಯಂತ ಹಲವು ರಾಜಕೀಯ ಪಲ್ಲಟಗಳಾಗಿವೆ. ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅಭದ್ರತೆಗಳು ಬೇರೂರಿವೆ. ನಮ್ಮ ದೇಶದಲ್ಲೂ ಬ್ಯಾಂಕುಗಳು ಸಂಕಷ್ಟದಲ್ಲಿದ್ದು ಅಂತಹುದೇ ಪರಿಸ್ಥಿತಿ ಎದುರಾಗುವ ಎಲ್ಲಾ ಸಾಧ್ಯತೆಗಳು ಇವೆ ಮತ್ತು ಅಂತಹ ದೇಶಗಳಲ್ಲಿ ಆದಂತೆ ಜನಪ್ರಿಯತೆಯನ್ನು ಆಳುವ ಸರ್ಕಾರಗಳು ಸಂಪೂರ್ಣವಾಗಿ ಕಳೆದುಕೊಳ್ಳುವ ಸಾಧ್ಯತೆಗಳೂ ಇವೆ. ಅದನ್ನು ತಪ್ಪಿಸಲೋಸುಗ ಬ್ಯಾಂಕುಗಳು ಕುಸಿದರೆ ಅವುಗಳಿಗೆ ಬಾಹ್ಯನೆರವಿನ (Bail out) ಬದಲಾಗಿ ಆಂತರಿಕ ನೆರವಿನ (Bail in) ಕ್ರಮಗಳಿಗೆ ಈ ಮಸೂದೆಯಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ. ಅಂದರೆ, ಕುಸಿದ ಬ್ಯಾಂಕುಗಳ ಠೇವಣಿದಾರರು ತಮ್ಮ ಹಣವನ್ನು ಕಳೆದುಕೊಳ್ಳಲಿದ್ದು, ಆ ಹಣವನ್ನು ಬ್ಯಾಂಕುಗಳ ನಷ್ಟ ಸರಿದೂಗಿಸುವ ಸಲುವಾಗಿ ಬಳಕೆ ಮಾಡಿಕೊಳ್ಳಲಾಗುತ್ತದೆ.

ಹಾಗಾಗಿ ಬ್ಯಾಂಕುಗಳು ಕುಸಿದರೆ ಸರ್ಕಾರಕ್ಕೇನೂ ಆತಂಕವಿರುವುದಿಲ್ಲ. ಬಡಪಾಯಿ ಠೇವಣಿದಾರರು ಬೆಲೆ ತೆತ್ತು ಬ್ಯಾಂಕುಗಳನ್ನು ಉಳಿಸುತ್ತಾರೆ. ಇದೇ ಆಂತರಿಕ ನೆರವು!

ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳಲ್ಲಿ ವಸೂಲಾಗದ ಸಾಲದ (NPA) ಪ್ರಮಾಣದಲ್ಲಿ ಗಣನೀಯವಾಗಿ ಹೆಚ್ಚಳವಾಗಿರುತ್ತದೆ. ಇದರಲ್ಲಿ ಶೇಕಡಾ 88.4 ರಷ್ಟು ದೊಡ್ಡ ಉದ್ಯಮಪತಿಗಳಿಗೆ ನೀಡಿರುವ ರೂ. 5 ಕೋಟಿಗೂ ಮೀರಿದ ಸಾಲಗಳು ಸೇರಿವೆ. ಅಷ್ಟೇ ಅಲ್ಲ, ಅದರಲ್ಲಿ ಶೇಕಡಾ 25 ರಷ್ಟು ಪಾಲು ಕೇವಲ 12 ದೊಡ್ಡ ಸಾಲಗಾರರಿಗೆ ಸೇರಿದೆ. ಆದರೆ ಈಗಿರುವ ಸರ್ಕಾರವು ಈ ಸಾಲಗಳ ವಸೂಲಾತಿಗೆ ರಾಜಕೀಯ ಇಚ್ಚಾಶಕ್ತಿಯನ್ನು ತೋರಿಸುತ್ತಿಲ್ಲ. ಬದಲಾಗಿ ಈ ಸಾಲಗಳ ಮರುಪಾವತಿ ಅವಧಿಯನ್ನು ವಿಸ್ತರಿಸುವುದು, ಸಾಲಮನ್ನಾ ಮಾಡುವುದು ಮುಂತಾದ ಕ್ರಮಗಳನ್ನು ಕೈಗೊಳ್ಳುತ್ತಾ ಸಾರ್ವಜನಿಕ ಕ್ಷೇತ್ರಗಳ ಬ್ಯಾಂಕುಗಳ ಕಾರ್ಯಕ್ಷಮತೆಯನ್ನು ಕೀಳಾಗಿ ಚಿತ್ರಿಸಿ ಅವುಗಳನ್ನು ಖಾಸಗೀಕರಣದತ್ತ ದೂಡುತ್ತಿದೆ. ಈ ಉದ್ದೇಶಕ್ಕಾಗಿಯೇ FRDI ಮಸೂದೆಯನ್ನು ರೂಪಿಸಲಾಗಿದೆ.

ಅನೇಕ ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದಾಗ ನಮ್ಮ ದೇಶದಲ್ಲಿ ಬ್ಯಾಂಕಿಂಗ್ ಸೌಲಭ್ಯದಿಂದ ವಂಚಿತರಾದವರ ಸಂಖ್ಯೆ ಹೆಚ್ಚಿದೆ. ಆದ್ದರಿಂದ, ನಮ್ಮ ದೇಶದಲ್ಲಿ ಅಗತ್ಯವಾಗಿರುವುದು ಬ್ಯಾಂಕ್ ಶಾಖೆಗಳ ವಿಸ್ತರಣೆ. ಆದರೆ ಈ ಹೊಸ ಕಾಯ್ದೆಯು ಕಳೆದ 5 ದಶಕಗಳಿಂದ ಕಟ್ಟಿರುವ ಸುಭದ್ರ ಬ್ಯಾಂಕಿಂಗ್ ಹಾಗು ಹಣಕಾಸು ರಂಗವನ್ನು ನಾಶಗೊಳಿಸಲು ಹೊರಟಿದೆ. ಈ ಹಿನ್ನಲೆಯಲ್ಲಿ ಇದರ ವಿರುದ್ಧ ಪ್ರಬಲ ಜನಾಭಿಪ್ರಾಯ ಮೂಡಿಸುವ ಮೂಲಕ ಈ ಜನವಿರೋಧಿ ನೀತಿಯನ್ನು ಹಿಮ್ಮೆಟ್ಟಿಸಬೇಕಿದೆ. ●



ಪಿ ಸಾಯಿನಾಥ ಗೆ ಬಸವ ಪ್ರಶಸ್ತಿ

ಖ್ಯಾತ ಪತ್ರಕರ್ತ ಮತ್ತು ಗ್ರಾಮೀಣ ಮತ್ತು ಕೃಷಿ ಸಂಕಟಗಳ ತಜ್ಞ ಪಿ. ಸಾಯಿನಾಥ ಅವರಿಗೆ ಈ ವಾರ ಬಸವ ಪ್ರಶಸ್ತಿ ನೀಡಲಾಯಿತು. ಮಾಧ್ಯಮದ ಒಬ್ಬ ವ್ಯಕ್ತಿಗೆ ಬಸವ ಪ್ರಶಸ್ತಿ ನೀಡುತ್ತಿರುವುದು ಇದೇ ಮೊದಲ ಬಾರಿಗೆ ಎಂದು ಹೇಳಲಾಗಿದೆ. ಅವರು ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಾ ಅವರ ಪ್ರಿಯ ವಿಷಯವಾದ ಗ್ರಾಮೀಣ ಮತ್ತು ಕೃಷಿ ಸಂಕಟಗಳು, ಹೆಚ್ಚುತ್ತಿರುವ ಅಸಮಾನತೆಯ ಬಗ್ಗೆ ವಿವರವಾಗಿ ಮಾತನಾಡಿದರು. ಮಾಧ್ಯಮಗಳ ವಿಶ್ವಾಸಾರ್ಹತೆ ಕುಗ್ಗಿರುವ ಈ ಕಾಲಮಾನದಲ್ಲಿ ಪಿ. ಸಾಯಿನಾಥ ಅವರಂಥ ಅರ್ಹ ಪತ್ರಕರ್ತನಿಗೆ ಈ ಪ್ರಶಸ್ತಿ ಕೊಟ್ಟಿರುವುದು ಗಮನಾರ್ಹ.

ಕೇರಳದಲ್ಲಿ ಎರಡು ಎಲ್‌ಡಿಎಫ್ ಜನಜಾಗೃತಿ ಯಾತ್ರೆಗಳು

ಕೇರಳದ ಎಲ್‌ಡಿಎಫ್ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಜನ–ವಿರೋಧಿ ಧೋರಣೆಗಳು ಮತ್ತು ಕೋಮುವಾದದ ವಿರುದ್ಧ ಒಂದು ರಾಜ್ಯವ್ಯಾಪಿ ಯಾತ್ರೆಯನ್ನು ಅಕ್ಟೋಬರ್ 21ರಂದು ಆರಂಭಿಸಿದೆ.

ಎಲ್‌ಡಿಎಫ್ ಸರಕಾರದ ಕಲ್ಯಾಣ ಕ್ರಮಗಳು ಮತ್ತು ಆರೆಸ್ಸೆಸ್‌ನ ಕೋಮುವಾದಿ ಅಜೆಂಡಾದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ರಾಜ್ಯದ ಉತ್ತರ ತುದಿ ಮತ್ತು ದಕ್ಷಿಣ ತುದಿಯಿಂದ ಆರಂಭವಾಗಿ ರಾಜ್ಯದಾದ್ಯಂತ ಸಂಚರಿಸುತ್ತಿರುವ ಈ ಎರಡು ಯಾತ್ರೆಗಳ ಉದ್ದೇಶ ಎಂದು ಹೇಳಲಾಗಿದೆ.

ಉತ್ತರ ಭಾಗದ ಯಾತ್ರೆಯ ನೇತೃತ್ವವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ವಹಿಸಿದ್ದಾರೆ. ದಕ್ಷಿಣದ ಯಾತ್ರೆಗೆ ಸಿಪಿಐ ರಾಜ್ಯ ಕಾರ್ಯದರ್ಶಿ ಕಣಂ ರಾಜೇಂದ್ರನ್ ನೇತೃತ್ವ ನೀಡುತ್ತಿದ್ದಾರೆ.

ಕಾಸರಗೋಡಿನ ಮಂಜೇಶ್ವರದಿಂದ ಆರಂಭವಾದ ಉತ್ತರದ ಯಾತ್ರೆಯನ್ನು ಸಿಪಿಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಿ.ರಾಜ ಉದ್ಘಾಟಿಸಿದರು.

ಕೇರಳದ ಜಾತ್ಯತೀತ ಹಂದರವನ್ನು ನಾಶಪಡಿಸಲು ಆರೆಸ್ಸೆಸ್‌ಗೆ ಸಾಧ್ಯವಿಲ್ಲ ಎಂಬುದು ತ್ರೀಚೆಗಷ್ಟೇ ಮುಗಿದ ತಮ್ಮ 'ಜನರಕ್ಷಾ ಯಾತ್ರೆ'ಯಿಂದ ಬಿಜೆಪಿ–ಆರೆಸ್ಸೆಸ್‌ಗೆ ದೊರೆತ ಸಂದೇಶ, ಸಿಪಿಐ(ಎಂ) ವಿರುದ್ಧ ಗುರಿಯಿಟ್ಟು ಆರಂಭಿಸಿದ ಅವರ ಯಾತ್ರೆ ಬೇಗನೇ ಕೇರಳ–ವಿರೋಧಿ ಯಾತ್ರೆಯ ಮಟ್ಟಕ್ಕೆ ಇಳಿಯಿತು ಎಂದು ಕೊಡಿಯೇರಿ ಬಾಲಕೃಷ್ನನ್ ಟೀಕಿಸಿದರು..

ದಕ್ಷಿಣದ ಯಾತ್ರೆಯನ್ನು ಉದ್ಘಾಟಿಸುತ್ತ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆರೆಸ್ಸೆಸ್–ಬಿಜೆಪಿಯ ಹುಸಿ ಪ್ರಜಾಪ್ರಭುತ್ವ ಮುಖ ಅನಾವರಣಗೊಂಡಿದೆ ಎಂದು ವರ್ಣಿಸಿದರು.



ಬಿಜೆಪಿಯ ಜನರಕ್ಷಾಯಾತ್ರೆಯನ್ನು ನಿರ್ಲಕ್ಷಿಸಿದ ಜನಗಳು ಈ ಎರಡೂ ಯಾತ್ರೆಗಳಿಗೆ ವಿವಿಧೆಡೆಗಳಲ್ಲಿ ದೊಡ್ಡಪ್ರಮಾಣದಲ್ಲಿ ಸ್ಪಂದಿಸುತ್ತಿದ್ದಾರೆ ಎಂದು ವರದಿಯಾಗಿದೆ.

ಈ ಎರಡು ಯಾತ್ರೆಗಳು ನವಂಬರ್ 3ರಂದು ಎರ್ನಾಕುಳಂನಲ್ಲಿ ಸೇರಲಿವೆ.

ಉತ್ತರದ ಯಾತ್ರೆಯಲ್ಲಿ ಕೊಡಿಯೇರಿ ಬಾಲಕೃಷ್ಣನ್ ಜತೆಗೆ ಸಿಪಿಐನ ಸತ್ಯನ್ ಮೊಕೇರಿ, ಜೆಡಿಎಸ್‌ನ ಪಿಎಂ ಜಾಯ್, ಎನ್‌ಸಿಪಿಯ ಪಿ.ಕೆ. ರಾಜನ್, ಕಾಂಗ್ರೆಸ್–ಎಸ್‌ನ ಇಪಿಆರ್ ವೆಸಾಲ ಮತ್ತು ಕೇರಳ ಕಾಂಗ್ರೆಸ್‌ಪಕ್ಷದ ಸ್ಕಾರಿಯ ಥಾಮಸ್ ಇದ್ದಾರೆ.

ದಕ್ಷಿಣದ ಯಾತ್ರೆಯಲ್ಲಿ ಕಣಂ ರಾಜೇಂದ್ರನ್ ಜೊತೆಗೆ ಸಿಪಿಐ(ಎಂ)ನ ಎ. ವಿಜಯ ರಾಘವನ್, ಜೆಡಿಎಸ್‌ನ ಜಾರ್ಜ್ ಥಾಮಸ್, ಎನ್‌ಸಿಪಿಯ ಬಾಬು ಕಾರ್ತಿಕೇಯನ್,ಕಾಂಗ್ರೆಸ್–ಎಸ್‌ನ ಯು. ವೇಣುಗೋಪಾಲನ್ ಮತ್ತು ಕೇರಳ ಕಾಂಗ್ರೆಸ್–ಸ್ಕಾರಿಯ ದ ಪಿಎಂ ಮ್ಯಾಥ್ಯು ಇದ್ದಾರೆ.

40 ಸಾವಿರ ಹಳ್ಳಿಗಳನ್ನು ಮುಟ್ಟುವ 11 ಬಿಪಿಎಂಒ ರ್‍ಯಾಲಿಗಳು

ಬಿಪಿಎಂಒ ಅಂದರೆ ಬಂಗಾಲ ಸಾಮೂಹಿಕ ಸಂಘಟನೆಗಳ ವೇದಿಕೆ ಪಶ್ಚಿಮ ಬಂಗಾಲದಲ್ಲಿ ಒಂದು ಬೃಹತ್ ಪ್ರಚಾರಾಂದೋಲನವನ್ನು ನಡೆಸುತ್ತಿದೆ. ಕಾರ್ಮಿಕ ಸಂಘಟನೆಗಳು, ರೈತ ಸಂಘಟನೆಗಳು, ಮಹಿಳಾ, ವಿದ್ಯಾರ್ಥಿ, ಯುವಜನ ಮತ್ತಿತರ ಜನವಿಭಾಗಗಳನ್ನು ಪ್ರತಿನಿಧಿಸುವ ಸಾಮೂಹಿಕ ಸಂಘಟನೆಗಳ ವೇದಿಕೆಯಾಗಿರುವ ಬಿಪಿಎಂಒ ರಾಜ್ಯದ 11 ಸ್ಥಳಗಳಲ್ಲಿ ರ್‍ಯಾಲಿಗಳನ್ನು ನಡೆಸಿ ಜಾಥಾಗಳು ಹೊರಟಿವೆ. ಅವು ನವಂಬರ್ 3ರಂದು ಕೊಲ್ಕತಾ ತಲುಪಿ ಒಂದು ಬೃಹತ್ ರಾಜ್ಯಮಟ್ಟದ ರ್‍ಯಾಲಿ ನಡೆಯಲಿದೆ.



ಈ 11 ಜಾಥಾಗಳು ಎಲ್ಲ 77 ಸಾವಿರ ಮತಗಟ್ಟೆಗಳು, 40 ಸಾವಿರ ಹಳ್ಳಿಗಳು, 126 ಪಟ್ಟಣಗಳು ಮತ್ತು ನಗರಗಳನ್ನು ತಲುಪಲಿವೆ. ಒಟ್ಟು 25 ಸಾವಿರ ಕಿ.ಮೀ.ಗಳ ಬೃಹತ್ ನಡೆ ಇದಾಗಿದೆ.

ಪುರುಲಿಯ, ಅಸನ್‌ಸೋಲ್, ಝುರ್‌ಗ್ರಾಂ, ಸಿಯುರಿ, ಫರಕ್ಕ, ಹಲ್ದಿಯ, ದಿಘ, ಬಸಂತಿ ಮತ್ತು ರಾಯ್‌ದಿಘಿಯಿಂದ ಹೊರಡುವ ರ್‍ಯಾಲಿಗಳು ಎಲ್ಲ ಜಿಲ್ಲೆಗಳ ಮೂಲಕ ಕೊಲ್ಕತಾ ತಲುಪುತ್ತವೆ. ದಾರಿಯಲ್ಲಿ 400 ಸಾರ್ವಜನಿಕ ಸಭೆಗಳು ಮತ್ತು ಸಾವಿರಾರು ರಸ್ತೆ ಬದಿ ಸಭೆಗಳು ನಡೆಯಲಿವೆ.

ಅಂಗನವಾಡಿ ನೌಕರರ ಮೇಲೆ ಪಂಜಾಬ್ ಕಾಂಗ್ರೆಸ್ ಸರಕಾರದ ಜಲಫಿರಂಗಿ, ಉ.ಪ್ರ. ಬಿಜೆಪಿ ಸರಕಾರದ ಲಾಠಿಚಾರ್ಜ್

ಅಕ್ಟೋಬರ್ 24ರಂದು ಪಂಜಾಬಿನ ಪಾಟಿಯಾಲದಲ್ಲಿ ರಾಜ್ಯ ಸರಕಾರದ ಧೋರಣೆಗಳನ್ನು ವಿರೋಧಿಸಿ ಧರಣಿ ಕೂತಿದ್ದ ಅಂಗನವಾಡಿ ನೌಕರರ ಮೇಲೆ ಪೋಲಿಸರ ಅಮಾನುಷ ದಾಳಿಯನ್ನು ಅಖಿಲ ಭಾರತ ಅಂಗನವಾಡಿ ಕಾರ್ಮಿಕರು ಮತ್ತು ಸಹಾಯಕಿಯರ ಒಕ್ಕೂಟ ಬಲವಾಗಿ ಖಂಡಿಸಿದೆ.

ಪಂಜಾಬಿನ ಕಾಂಗ್ರೆಸ್ ಸರಕಾರ ಒಂದೆಡೆಯಲ್ಲಿ 800 ಪ್ರಾಥಮಿಕ ಶಾಲೆಗಳನ್ನು ಮುಚ್ಚುತ್ತಿದ್ದರೆ, ಇನ್ನೊಂದೆಡೆಯಲ್ಲಿ ಪ್ರಾಥಮಿಕ–ಪೂರ್ವ ತರಗತಿಗಳನ್ನು ತೆರೆದು ಅಂಗನವಾಡಿಗಳಲ್ಲಿರುವ 3–6 ವಯೋಗುಂಪಿನ ಮಕ್ಕಳನ್ನು ಅಲಲಿಗೆ ವರ್ಗಾಯಿಸಬೇಕೆಂದು ಆದೇಶಿಸಿದೆ. ಇದು ಆ ಪುಟ್ಟ ಮಕ್ಕಳಿಗೆ, ಅದರಲ್ಲೂ ವಂಚಿತ ವಿಭಾಗಗಳ ಮಕ್ಕಳಿಗೆ ಅನಾನುಕೂಲಗಳನ್ನು ಉಂಟು ಮಾಡಿರುವುದಲ್ಲದೆ ಹಲವಾರು ಅಂಗನವಾಡಿಗಳನ್ನು ಮುಚ್ಚುವಂತೆ ಮಾಡುತ್ತದೆ. ಜತೆಗೆ ಕೇಂದ್ರದ ಬಿಜೆಪಿ ಸರಕಾರ ನಿರ್ಧರಿಸಿದ ನೇರ ನಗದು ವರ್ಗಾವಣೆಯನ್ನು ಪಂಜಾಬಿನ ಕಾಂಗ್ರೆಸ್ ಸರಕಾರವೂ ಆರಂಭಿಸ ಹೊರಟಿದೆ. ಈ ಎರಡು ಕ್ರಮಗಳಿಗೆ ಪಂಜಾಬಿನ ಅಂಗನವಾಡಿ ಮುಲಾಜಿಂ ಯೂನಿಯನ್ ವಿರೋಧ ವ್ಯಕ್ತಪಡಿಸಿದ್ದು ಈ ಬಗ್ಗೆ ರಾಜ್ಯ ಸರಕಾರವನ್ನು ಆಗ್ರಹಿಸುತ್ತ ಬಂದಿದೆ. ಇದನ್ನು ಸರಕಾರ ಕಿವಿಗೆ ಹಾಕಿಕೊಳ್ಳದ್ದರಿಂದ ಕೊನೆಗೆ ಪಾಟಿಯಾಲದಲ್ಲಿ 'ಮಹಾಧರಣಿ' ಸಂಘಟಿಸಿತು. ಇದರಲ್ಲಿ ಸಾವಿರಾರು ಅಂಗನವಾಡಿ ನೌಕರರು ಭಾಗವಹಿಸಿದ್ದರು. ಇದರಿಂದ ಕುಪಿತಗೊಂಡ ಸರಕಾರ ಮಧ್ಯರಾತ್ರಿಯ ವೇಳೆಗೆ ಯಾವುದೇ ಮುನ್ಸೂಚನೆ ಕೊಡದೆ ಜಲಫಿರಂಗಿ ಪ್ರಯೋಗಿಸಿ ಧರಣಿಯನ್ನು ಬಲವಂತದಿಂದ ಕೊನೆಗೊಳಿಸಲು ಪ್ರಯತ್ನಿಸಿದೆ. ಇದರಲ್ಲಿ ರಾಜ್ಯ ಅಧ್ಯಕ್ಷೆ ಉಷಾ ರಾಣಿ ಸೇರಿದಂತೆ ಹಲವರು ಗಾಯಗೊಂಡಿದ್ದಾರೆ. ಎಂಟು ಮುಖಡರನ್ನು ಬಂಧಿಸಲಾಗಿದೆ.

ಅಕ್ಟೋಬರ್ 26 ರಂದು ಉತ್ತರ ಪ್ರದೇಶದ ಲಕ್ನೌನಲ್ಲಿ ಬಿಜೆಪಿ ಸರಕಾರದ ಪೋಲೀಸರು ಅಂಗನವಾಡಿ ನೌಕರರ ಮೇಲೆ ಲಾಠಿಪ್ರಹಾರ ಮಾಡಿದ್ದಾರೆ. ಕೆಲಸವನ್ನು ನಿಯಮಿತಗೊಳಿಸುವುದು, ಸಂಬಳವನ್ನು ಹೆಚ್ಚಿಸುವುದು ಮತ್ತು ರಾಜ್ಯ ಸರಕಾರಿ ನೌಕರರಿಗೆ ಸಮನಾಗಿ ಪರಿಗಣಿಸುವುದು ಮುಂತಾದ ತಮ್ಮ ಬೇಡಿಕೆಗಳಿಗೆ ಕಿವಿಗೊಡದ ಸರಕಾರದ ಗಮನವನ್ನು ಸೆಳೆಯಲು ಅವರು ಮುಖ್ಯಮಂತ್ರಿ ಕಚೇರಿಯತ್ತ ಪ್ರತಿಭಟನೆ ನಡೆಸಲು ಸಾಗಿದ್ದರು.





ರಾಜ್ಯಗಳ ಸುತ್ತ



ಗುಜರಾತ್: ಬಿಜೆಪಿ ಮೇಲೆ ಈಗ ಮುಖಂಡರ ಖರೀದಿಯ ಆಪಾದನೆ

ವಿಧಾನಸಭಾ ಚುನಾವಣೆಗಳ ಘೋಷಣೆಯನ್ನು ಹಿಂದೂಡಲು ಅಧಿಕಾರ ಬಳಸಿದ ಆಪಾದನೆಯ ನಂತರ ಬಿಜೆಪಿ ಈಗ ಗುಜರಾತಿನಲ್ಲಿ ಬಿಜೆಪಿಗೆ ತಿರುಗಿ ಬಿದ್ದಿರುವ ಪಟೇಲ್ ಸಮುದಾಯದ 'ಪಾಟೀದಾರ್ ಅನಾಮತ್ ಆಂದೋಲನ್ ಸಮಿತಿ(ಪಿಎಎಸ್) ಸಂಘಟನೆಯನ್ನು ನಿಷ್ಕ್ರಿಯಗೊಳಿಸಲು ಈ ಸಂಘಟನೆಯ ಯುವ ಮುಖಂಡರನ್ನು ಖರೀದಿಸುವ ಪ್ರಯತ್ನ ಮಾಡುತ್ತಿದೆ ಎಂಬ ಆಪಾದನೆ ಎದುರಿಸುತ್ತಿದೆ.

ಒಬ್ಬ ಮುಖಂಡ ವರುಣ್ ಪಟೇಲ್ ಬಿಜೆಪಿ ಸೇರಿದ ಸುದ್ದಿಯ ನಂತರ ಇನ್ನೊಬ್ಬ ಮುಖಂಡ ನರೇಂದ್ರ ಪಟೇಲ್ ಬಿಜೆಪಿ ಸೇರಿದ ಸುದ್ದಿಯೂ ಬಂತು. ಅದರ ಬೆನ್ನಿಗೇ ಆತ ತನಗೆ ಬಿಜೆಪಿ ಸೇರಲು 1 ಕೋಟಿ ರೂ. ಲಂಚದ ಆಮಿಷ ಕೊಡಲಾಯಿತು ಎಂದು ಹೇಳಿರುವುದಾಗಿ ವರದಿಯಾಗಿದೆ. ಇದನ್ನು ಬಿಜೆಪಿ ರಾಜ್ಯ ಮುಖಂಡರು ನಿರಾಕರಿಸಿದರೂ ಈ ಕುರಿತ 'ದಾಖಲೆ'ಯೊಂದು ಸಾಮಾಜಿಕ ಜಾಲತಾಣದಲ್ಲಿ ಓಡಾಡುತ್ತಿದೆ. ನರೇಂದ್ರ ಪಟೇಲ್ ಈಗ ಬಿಜೆಪಿಯಿಂದ ರಾಜೀನಾಮೆ ನೀಡಿ ಬಿಜೆಪಿ ಯುವ ಪಟೇಲ್ ಮುಖಂಡರನ್ನು ಖರೀದಿಸುತ್ತಿದ್ದಾರೆ ಎಂಬುದನ್ನು ಬಯಲು ಮಾಡಲಿಕ್ಕಾಗಿಯೇ ತಾನು ಬಿಜೆಪಿ ಸೇರಿದ್ದೆ ಎನ್ನುತ್ತಿದ್ದಾರೆ. ಅಕ್ಟೋಬರ್ 25ರಂದು ಗಾಂಧಿನಗರದ ಒಂದು ಕೋರ್ಟಿನಲ್ಲಿ ಬಿಜೆಪಿಯ ರಾಜ್ಯ ಅಧ್ಯಕ್ಷರು ಮತ್ತು ಯುವ ಬಿಜೆಪಿಯ ರಾಜ್ಯ ಅಧ್ಯಕ್ಷರು ಸೇರಿದಂತೆ ಐವರು ಬಿಜೆಪಿ ಮುಖಂಡರ ಮೇಲೆ ಚುನಾವಣೆಗೆ ಸಂಬಂಧಪಟ್ಟಂತೆ ಕಾನೂನುಬಾಹಿರ ಹಣ ನೀಡಿಕೆ, ಅಕ್ರಮ ಪ್ರಭಾವ, ವಂಚನೆ, ಕ್ರಿಮಿನಲ್ ಬೆದರಿಕೆ ಮತ್ತಿತರ ದೂರುಗಳನ್ನು ದಾಖಲಿಸಿದ್ದಾರೆ ಎಂದು ವರದಿಯಾಗಿದೆ.

ಅದೇ ದಿನ ಗುಜರಾತ್ ಸರಕಾರ ಈ ವರ್ಷದ ಫೆಬ್ರುವರಿಯಲ್ಲಿ ಸಾನಂದ್ ತಾಲೂಕಿನ 22 ರೈತರ ಮೇಲೆ ಹಾಕಿದ್ದ ಕೊಲೆಪ್ರಯತ್ನದ ಕೇಸನ್ನು ಹಿಂತೆಗೆದುಕೊಳ್ಳುವುದಾಗಿ ಪ್ರಕಟಿಸಿದೆ. ಇದಕ್ಕೆ ಮೊದಲು 2015ರಲ್ಲಿ ಪಾಟೀದಾರ್ ಚಳುವಳಿಯಲ್ಲಿ ಭಾಗವಹಿಸಿದವರ ಮೇಲೆ ಹಾಕಿದ್ದ ಕೇಸುಗಳಲ್ಲಿ 'ಗಂಭೀರವಲ್ಲ'ದವನ್ನು ಹಿಂತೆಗೆದುಕೊಳ್ಳುವುದಾಗಿಯೂ ಬಿಜೆಪಿ ಸರಕಾರ ಹೇಳಿತ್ತು.

ಆದರೆ ಸಾನಂದ್ ರೈತರಾಗಲೀ, ಪಾಟೀದಾರ್ ಯುವಕರಾಗಲಿ ಇದರಿಂದ ಸಂತುಷ್ಟರಾಗಿಲ್ಲ, ತಮ್ಮ ಮೂಲ ಬೇಡಿಕೆಗಳನ್ನು ಈಡೇರಿಸದೆ ಇಂತಹ ಆಮಿಷಗಳನ್ನು ಒಡ್ಡಿ ತಮ್ಮನ್ನು ಒಲಿಸಿಕೊಳ್ಳ ಸಾಧ್ಯವಿಲ್ಲ ಎಂದು ಅವರು ಹೇಳುತ್ತಿರುವುದಾಗಿ ವರದಿಯಾಗಿದೆ.

ಸಾರ್ವಜನಿಕ ಛೀಮಾರಿ

ಅಕ್ಟೋಬರ್ 14 ರಿಂದ 16ರ ವರೆಗೆ ನಡೆದ ಸಿಪಿಐ(ಎಂ)ನ ಕೇಂದ್ರ ಸಮಿತಿ ಗೌತಮ್ ದೇಬ್ ಅವರು ಒಮದು ಬಂಗಾಲೀ ಟಿವಿ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಮಾಡಿರುವ ಟಿಪ್ಪಣಿಯ ಬಗ್ಗೆ ಬಲವಾದ ಅಸಮ್ಮತಿ ವ್ಯಕ್ತಪಡಿಸುತ್ತ, ಇದು ಪಕ್ಷದ ಪ್ರತಿಷ್ಠೆಗೆ ಕುಂದು ತರುವಂತದ್ದು ಎಂದಿದೆ. ಕೇಂದ್ರ ಸಮಿತಿಯ ಸದಸ್ಯರಾಗಿರುವ ಗೌತಮ್ ದೇಬ್ ತನ್ನ ತಪ್ಪನ್ನು ಒಪ್ಪಿಕೊಂಡು ಖೇದ ವ್ಯಕ್ತಪಡಿಸಿದರು. ಕೇಂದ್ರ ಸಮಿತಿ ಅವರಿಗೆ ಸಾರ್ವಜನಿಕವಾಗಿ ಛೀಮಾರಿ ಹಾಕಿ ಇನ್ನು ಮುಂದೆ ಇಂತಹ ಟಿಪ್ಪಣಿಗಳನ್ನು ಮಾಡದಂತೆ ನೋಡಿಕೊಳ್ಳಬೇಕು ಎಂದಿದೆ.

ಇರಾನ್ ಒಪ್ಪಂದಕ್ಕೆ ತಿರಸ್ಕಾರ ಅಮೇರಿಕಾದ ಪತನದ ಆರಂಭವೇ?



ನಾಗರಾಜ ನಂಜುಂಡಯ್ಯ



ಕಳೆದ ವಾರವಷ್ಟೇ, ಅಮೇರಿಕಾದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಇರಾನಿನ ಜತೆಗೆ ಇದ್ದ ಅಣು ಒಪ್ಪಂದವನ್ನು ದೃಢೀಕರಿಸಲು ನಿರಾಕರಿಸಿದ್ದರು. ಆದರೆ ಜಂಟೀ ಸಮಗ್ರ ಕಾರ್ಯಯೋಜನೆ **(JCPOA-Joint Comprehensive Plan of Action)** ನಿಬಂಧನೆಗಳ ಪ್ರಕಾರ, ಒಪ್ಪಂದದಿಂದ ಹೊರ ಬರಲು ಸಾಧ್ಯವಾಗುವುದಿಲ್ಲ. ಆದಾಗ್ಯೂ, ಇರಾನ್ ಮೇಲೆ ಮತ್ತಷ್ಟು ಹೆಚ್ಚುವರಿ ಆರ್ಥಿಕ ದಿಗ್ಬಂಧನ ಹೇರುವಂತೆ, ಸಂಯುಕ್ತ ಸಂಸ್ಥಾನದ (ಯು.ಎಸ್) ಕಾಂಗ್ರೆಸ್ ಮೇಲೆ ಟ್ರಂಪ್ ಒತ್ತಾಯ ಮಾಡಿದ್ದಾರೆ. ಇದರಿಂದಾಗಿ ಅಮೇರಿಕಾ ಬಯಸುತ್ತಿರುವ ರೀತಿಯಲ್ಲಿ ಇರಾನ್ ನಡೆದುಕೊಳ್ಳುವಂತಾಗ ಬೇಕು ಎಂಬ ಅಂದಾಜು ಮಾಡಲಾಗಿದೆ.

ಟ್ರಂಪ್ ಈ ಹೇಳಿಕೆಯು 'ಒಪ್ಪಂದ ತ್ಯಜಿಸುವ ಬೆದರಿಕೆ' ಒಡ್ಡಿದ್ದ ಬಂದು ತಿಂಗಳ ನಂತರ – ಒಪ್ಪಂದದ ಪರಿಸ್ಥಿತಿ ಎಂದಿಗಿಂತಲು ತುಂಬ ಕೆಟ್ಟದಾಗಿದೆ ಮತ್ತು ಒಪ್ಪಂದದ ಸಾರವನ್ನು ಇರಾನ್ ಉಳಿಸಿಕೊಳ್ಳುವಲ್ಲಿ ಗಂಭೀರವಾಗಿ ಗಮನ ಹರಿಸುತ್ತಿಲ್ಲ' ಎಂದು ಟ್ರಂಪ್ ದೂಷಿಸಿದ್ದಾರೆ.

ಅಮೇರಿಕಾದ ಅಧಿಕಾರಿಗಳೇ ಇರಾನ್ ಸರಿಯಿದೆ ಎನ್ನುತ್ತಾರೆ

ಜೆ.ಸಿ.ಪಿ.ಓ.ಎ ಯಲ್ಲಿ ಭದ್ರತಾ ಮಂಡಳಿಯ ಐದು ಕಾಯಂ ಸದಸ್ಯರು ಇದ್ದಾರೆ. ಅವುಗಳೆಂದರೆ, ಅಮೇರಿಕಾ, ರಷ್ಯಾ, ಚೀನಾ, ಬ್ರಿಟನ್ ಹಾಗೂ ಫ್ರಾನ್ಸ್, ಇದರಲ್ಲಿ ಇರಾನನ್ನು ಹೊರತು ಪಡಿಸಲಾಗಿದೆ. 159 ಪುಟಗಳ ಒಪ್ಪಂದದ ದಾಖಲಾ ಪತ್ರದಲ್ಲಿ ಇರಾನ್ ಕೈಗೊಳ್ಳ ಬೇಕಾದ ಕ್ರಮಗಳ ಮಾರ್ಗಸೂಚಿಯನ್ನು ವಿವರಿಸಲಾಗಿದೆ. ಜೆ.ಸಿ.ಪಿ.ಓ.ಎ ನ ಅನುಷ್ಠಾನಗಳನ್ನು ಮೇಲ್ವಿಚಾರಣೆ ನಡೆಸುವ, ಅಂತರ ರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ (IAEA-International Atomic Energy Association) ನಿಖರವಾಗಿ ಪರಿಶೀಲನೆ ನಡೆಸಿ, ಇರಾನ್ 'ಜೆ.ಸಿ.ಪಿ.ಓ.ಎ'ನ ಎಲ್ಲ ನಿಬಂರ್ಧನೆಗಳನ್ನು ಪೂರ್ಣವಾಗಿ ಪಾಲಿಸಿದೆ ಎಂದು ಪ್ರಮಾಣ ಪತ್ರ ನೀಡಿದೆ. ಅಲ್ಲದೆ, ಅಮೇರಿಕಾದ ಪ್ರಮುಖರಾದ, ರಾಜ್ಯ ಕಾರ್ಯದರ್ಶಿ ರೆಕ್ಸ್ ಟೆಲ್ಲರ್ಸನ್, ಭದ್ರತಾ ಸಲಹೆಗಾರರಾದ ಹೆಚ್.ಆರ್.ಮ್ಯಾಕ್‌ಮಾಸ್ಟರ್ ಮತ್ತು ರಕ್ಷಣಾ ಕಾರ್ಯದರ್ಶಿಯಾದ ಜಿಮ್ ಮ್ಯಾಟ್ಟೀಸ್ ಮುಂತಾದ ಪ್ರಮುಖ ಅಧಿಕಾರಿಗಳು ಇರಾನ್ ಜೆಸಿಪಿಓಎ ಯನ್ನು ಸೂಕ್ತರೀತಿಯಲ್ಲಿ ಜಾರಿ ಮಾಡಿದೆ ಎಂದಿದೆ. ಅದು ಅಮೇರಿಕಾದ ಒಪ್ಪಂದದೊಂದಿಗೆ ಉಳಿಯಲು ಆಸಕ್ತಿ ಹೊಂದಿದೆ ಎಂದು ಸ್ಪಷ್ಟಗೊಳಿಸಿರುವುದು, ಟ್ರಂಪ್‌ನ ತೀರ್ಮಾನಕ್ಕೆ ತದ್ವಿರುದ್ಧವಾಗಿದೆ. ಇದು ಟ್ರಂಪ್‌ಗೆ ಮುಜುಗರ ತಂದಿದೆ.

ಒಪ್ಪಂದ ಕುರಿತಂತೆ: ದ್ರೋಹ ವೆಸಗುತ್ತಿರುವ ಟ್ರಂಪ್

ಟ್ರಂಪ್ ತೆಗೆದುಕೊಂಡಿರುವ ತೀರ್ಮಾನ ತಕ್ಷಣದಿಂದಲೇ ಜಾರಿಗೆ ಬಂದು, ಇರಾನ್ ನೊಂದಿಗಿನ ಅಣು ಒಪ್ಪಂದ ರದ್ದಾಗುವುದಿಲ್ಲ. ಏಕೆಂದರೆ, ಇದರಲ್ಲಿ ಎರಡು ಪ್ರಮುಖ ಕಾರ್ಯಾಂಶಗಳು ತಾಳೆ ಹಾಕಿಕೊಂಡಿವೆ. ಅವುಗಳು ಅನಿಶ್ಚಿತತೆಯ ಸನ್ನಿವೇಶವನ್ನು ಸೃಷ್ಟಿಸುತ್ತವೆ. ಇದರಿಂದಾಗಿ 'ಒಪ್ಪಂದವು ನಿಧಾನವಾಗಿ ತಾನಾಗಿಯೇ ಮುರಿದು ಬೀಳಬಹುದು.

ಅದರಲ್ಲಿ; ಮೊದಲನೆಯದು ಅಮೇರಿಕಾದ ಕಾಂಗ್ರೆಸ್ ಇರಾನಿನ ಮೇಲೆ ಹೆಚ್ಚುವರಿ ಆರ್ಥಿಕ ದಿಗ್ಬಂಧನವನ್ನು ವಿಧಿಸಲು ಶುರು ಮಾಡುವುದು. ಈ ಮಂಜೂರಾತಿಯನ್ನು ಇರಾನ್, ಅಮೇರಿಕಾ 'ಎಸಗುತ್ತಿರುವ ದ್ರೋಹ' ವೆಂದು ಪರಿಗಣಿಸಿ, ಒಪ್ಪಂದದಿಂದ ಹೊರ ಬರುವಂತಹ ಒತ್ತಡಕ್ಕೆ ಸಿಕ್ಕಿಹಾಕಿಕೊಳ್ಳಬಹುದು ಎಂದು ಟ್ರಂಪ್‌ನ ಅಂದಾಜಾಗಿದೆ. ಎರಡನೆಯದು ಭವಿಷ್ಯದಲ್ಲಿ ಅಂತಹ ಯಾವುದೇ ರೀತಿಯ ಒಪ್ಪಂದದ ಮೇಲೆ ಅಮೇರಿಕಾವು ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳಬಹುದು. ಉತ್ತರ ಕೊರಿಯಾಕ್ಕೆ ಸಂಬಂಧಿಸಿದಂತೆ ಟ್ರಂಪ್ ತೆಗೆದುಕೊಂಡಿರುವ ತೀರ್ಮಾನ ಎಲ್ಲರಿಗೂ ಸರಳ ಪಾಠವನ್ನು ಕಲಿಸಿ ಕೊಟ್ಟಂತಿದೆ. ಅಮೇರಿಕಾದ ವಿರುದ್ಧ ರಕ್ಷಿಸಿಕೊಳ್ಳಲು ರಾಜತಾಂತ್ರಿಕ ಒಪ್ಪಂದ ಪ್ರಯೋಗವಾಗುವುದಿಲ್ಲ ಅದು ಯಾವಾಗ ಬೇಕಾದರೂ ಕುಸಿದು ಬೀಳಬಹುದು. ಇದು ಪರಮಾಣು ಮತ್ತು ಕ್ಷಿಪಣಿ ಪ್ರಸಾರಕ್ಕೆ ಉತ್ತೇಜನ ಕೊಡುತ್ತದೆ. ಅವುಗಳ ತಡೆಗಟ್ಟುವಿಕೆ ಸಾಧ್ಯವಾಗದೆ ಹೋಗಬಹುದು. ವಿಶ್ವಸಂಸ್ಥೆಯ ಭದ್ರತಾ ಮಂಡಳಿ, ಜೆ.ಸಿ.ಪಿ.ಓ.ಎ ಎರಡೂ ಬೆಂಬಲಿಸಿದ್ದೂ, ಒಪ್ಪಂದವನ್ನು ಅಮೇರಿಕ ತಿಸ್ಕರಿಸುತ್ತದೆ ಎಂಬುದು ಏನನ್ನು ತಿಳಿಸುತ್ತದೆ?

ಹಾಗಾದರೆ, ಒಬಮಾ ಆಡಳಿತದ ಅವಧಿಯಲ್ಲಿ ಅಮೇರಿಕಾವು ಇರಾನ್‌ನೊಂದಿಗೆ ಮಾಡಿಕೊಂಡಿದ್ದ ಒಪ್ಪಂದವಾದರು ಏನು? ನೋಡೋಣ. ಇರಾನ್ ತನ್ನಲ್ಲಿದ್ದ 19,000 ಸೆಂಟ್ರಿಫ್ಯೂಜ್ ಅನ್ನು 600ಕ್ಕೆ ಇಳಿಸಿತು ಹಾಗೂ ಕಡಿಮೆ ಸಮೃದ್ಧ ಯುರೇನಿಯಂನ ತಪಶೀಲು ಪಟ್ಟಿಯ ಶೀ.98 ಅನ್ನು– 1000 ಕೆಜಿಯಿಂದ 300 ಕೆಜಿಗೆ ಕಡಿತ ಮಾಡಿತ್ತು. ಇದರಿಂದಾಗಿ ಜೆ.ಸಿ.ಪಿ.ಓ.ಎ ಯ ಮೂಲಕ ಇರಾನ್ ರೂ.100 ಶತಕೋಟಿಯ ತನ್ನದೆ ಹೆಪ್ಪುಗಟ್ಟಿ ಹೋಗಿದ್ದ ಹಣವನ್ನು–ಸ್ವತ್ತುಗಳನ್ನು ಮರಳಿ ಪಡೆಯಲು ಸಾಧ್ಯವಾಯಿತು. ಈ ಹಣ ಇರಾನ್‌ನದ್ದೇ ಆಗಿತ್ತು. ಅಕ್ರಮವಾಗಿ ಅಮೇರಿಕಾವು ವಶಪಡಿಸಿ ಕೊಂಡಿದ್ದರಿಂದ ಇದು ಹೆಪ್ಪುಗಟ್ಟಲಾಗಿತ್ತು.

ಇತ್ತೀಚಿನ ಟ್ರಂಪ್‌ನ ತೀರ್ಮಾನದಿಂದಾಗಿ, ಈ ಎರಡು ರಾಷ್ಟ್ರಗಳ ನಡುವೆ ಸಮಸ್ಯೆಗಳು ಗಂಭೀರ ಸ್ವರೂಪ ತಾಳಿದೆ. ಈ ವಿಷಯವನ್ನು ಟ್ರಂಪ್, ಯು.ಎಸ್.ನ ಕಾಂಗ್ರೆಸ್‌ಗೆ ಒಯ್ದಿದ್ದಾರೆ. ಕಾಂಗ್ರೆಸ್ ಇರಾನನ್ನು ಒಪ್ಪಂದದಿಂದ ಅಮಾನತುಗೊಳಿಸುವ ನಿರ್ಬಂಧಗಳನ್ನು ಪುನರೂಪಿಸುವುದೇ? ಹಾಗೇನಾದರೂ ಆದರೆ, ಪರಿಸ್ಥಿತಿ ಉಲ್ಬಣಕ್ಕೆ ಕಾರಣವಾಗಿ, ಸ್ಫೋಟಗೊಳ್ಳುವುದನ್ನು ತಡೆಯಲು ಸಾಧ್ಯವಿಲ್ಲ?

ಇರಾನ್‌ಗೆ–ಇಸ್ರೇಲ್ ಅಡ್ಡಿ

ಯು.ಎಸ್ ಕಾಂಗ್ರೆಸ್‌ನ ಮೇಲೆ ಇಸ್ರೇಲ್‌ನ ವಕ್ರದೃಷ್ಟಿ ಪ್ರಮುಖವಾಗುವ ಸಂಭವವಿದೆ, ಇಸ್ರೇಲ್ ಅಧ್ಯಕ್ಷ ನೇತಾನ್ಯಾಹು ಅಂದಿನ ಅಧ್ಯಕ್ಷ ಒಬಾಮಾಗಿಂತ. ಹೆಚ್ಚು ಪ್ರಭಾವವನ್ನು ಯು.ಎಸ್ ಕಾಂಗ್ರೆಸ್ ಮೇಲೆ ಹೊಂದಿದ್ದರು. ಅನೇಕ ಶ್ರೀಮಂತ ಬಲಪಂಥೀಯ ಟ್ರಂಪ್‌ನ ಬೆಂಬಲಿಗರು ಇಸ್ರೇಲ್‌ನ ಬೆಂಬಲಿಗರೂ ಹೌದು. ಇರಾನ್'ಅನ್ನು ಪರಮಾಣು ಶಸ್ತ್ರಾಸ್ತ್ರಗಳೊಂದಿಗೆ ಹೊಡೆಯ (ಸ್ಟ್ರೈಕ್) ಬೇಕೆಂದು ಕೆಲವು ಬೆಂಬಲಿಗರು ಅಮೇರಿಕಾಕ್ಕೆ ಸೂಚಿಸಿದ್ದಾರೆ. ಆ ಪ್ರದೇಶದಲ್ಲಿ ಇರಾನನ್ನು ಹೊರಹಾಕಿ, ಇಸ್ರೇಲ್ ಏಕೈಕ ಮಿಲಿಟರಿ ಶಕ್ತಿಯಾಗಿ ಉಳಿಯಬೇಕೆಂದು ಯು.ಎಸ್ ಬಯಸುತ್ತಿದೆ. ಹಿಜ್ಬೊಲ್ಲಾ, ಇರಾನಿನ ದೀರ್ಘಕಾಲದ ಮಿತ್ರರಾಗಿದ್ದಾರೆ. ಇರಾಕ್, ಸಿರಿಯಾ ಮತ್ತು ಲೆಬನಾನಿನಲ್ಲಿರುವ ಹಿಜ್ಬೊಲ್ಲಾ, ರಷ್ಯಾದ ಬೆಂಬಲದೊಂದಿಗೆ ಈ ಪ್ರದೇಶದಲ್ಲಿ ಇಸ್ರೇಲ್‌ನ ಅಸಾಧಾರಣ ವೈರಿಯಾಗಿದೆ. ಈ ಕಾರಣಕ್ಕಾಗಿ ಇಸ್ರೇಲ್‌ಗೆ ಅಮೇರಿಕದ ಬೆಂಬಲದ ಅಗತ್ಯವಿದೆ.

ಈ ಹಿಂದೆ ಇರಾಕನ್ನು ನಾಶ ಮಾಡಿದ ರೀತಿಯಲ್ಲಿಯೇ, ಇರಾನನ್ನು ಕೂಡ ನಾಶ ಮಾಡಬೇಕೆಂದು ಇಸ್ರೇಲ್ ಬಯಸುತ್ತಿದೆ.

ಹಾಗಾದರೆ, ಇರಾನನ್ನು ಒಪ್ಪಂದದಿಂದ ಹೊರ ಹಾಕಲು ಟ್ರಂಪ್ ದೃಢೀಕರಣ ನಿರಾಕರಿಸಲು ನೀಡಿದ ಕಾರಣಗಳು ಯಾವುವು? ಅಥವಾ ಇರಾನ್ ಒಪ್ಪಂದದ ಸಾರವನ್ನು ಜಾರಿ ಮಾಡುವಲ್ಲಿ ಗಮನಕೊಡಲಿಲ್ಲವೆ?

ಟ್ರಂಪ್‌ನ ಹೇಳಿಕೆಗಳನ್ನು ಅರ್ಥಮಾಡಿಕೊಳ್ಳಲು ಅಸಾಧ್ಯ. ಏಕೆಂದರೆ. ಏನು ಹೇಳುತ್ತಿದ್ದಾರೆ ಎಂದು ಅವರಿಗೆ ಗೊತ್ತಿರುವುದಿಲ್ಲ. ಅವರ ಪ್ರಕಾರ, 1983 ರಲ್ಲಿ 'ಬೈರುತ್'ನಲ್ಲಿ ಅಮೇರಿಕಾದ ಮರೀನ್ ಪಡೆಯ ನೆಲೆಯ ಮೇಲೆ (Marine Military Base) ನಡೆದ ಭಯೋತ್ಪಾದಕ ದಾಳಿಯಲ್ಲಿ ಇರಾನ್ ಕೂಡ ಒಳಗೊಂಡಿತ್ತು. ಆ ನಂತರ ಎರಡನೆಯ ಕಾರಣ 'ವಿಶ್ವ ವಾಣಿಜ್ಯ ಗೋಪುರ'(World Trade Tower)ದ ಮೇಲಿನ ಆಲ್–ಖೈದಾ ದಾಳಿಯ ನಂತರ, ಆಲ್–ಖೈದಾದ ಸಹಯೋಗದೊಂದಿಗೆ ಬಾಲಿಸ್ಟಿಕ್ ಕ್ಷಿಪಣಿಗಳ ನಿರಂತರ ಪರೀಕ್ಷೆ ಮಾಡಿದೆ. ಮೂರನೆಯದು, ಯೆಮನ್ ಮತ್ತು ಸಿರಿಯಾದಲ್ಲಿನ ಪ್ರದೇಶಗಳಲ್ಲಿ ಅಮೇರಿಕಾದ ನೀತಿಗಳನ್ನು ಉಲಂಘಿಸಿ, ಅದರ ಯೋಜನೆಗಳನ್ನು ಅಸ್ಥಿರಗೊಳಿಸಿದೆ. ಇರಾನ್ ಒಪ್ಪಂದದ ಕರ್ತವ್ಯವನ್ನು ಸರಿಯಾಗಿ ಅನುಸರಿಸುತ್ತಿಲ್ಲ ಎಂಬ ಕಾರಣಗಳನ್ನು ಟ್ರಂಪ್ ಇದೀಗ ನೀಡಿದ್ದಾರೆ.

ಅಮೇರಿಕಾ ನಡೆಸಿರುವ ಹತ್ಯೆಗಳನ್ನು–ಜಗತ್ತು ಮರೆತಿಲ್ಲ

ಲೆಬನಾನಿನ ಸಂಘರ್ಷದಲ್ಲಿ ಬೈರುತ್ ನಲ್ಲಿರುವ ತನ್ನ ಮರೀನ್ ಪಡೆಗಳು ತಟಸ್ಥವಾಗಿಲ್ಲವೆಂದು ಅಮೇರಿಕಾಕ್ಕೆ ತಿಳಿದಿದೆ. ಅವು ಇಸ್ರೇಲ್ ಜತೆ ಸಖ್ಯದಿಂದಿದ್ದವು. 'ತೆವಳು ಮಿಷನ್' ಮೂಲಕ ಆಕ್ರಮಣ ನಡೆಸಿ ಲೆಬನಾನನ್ನು ವಶಪಡಿಸಿಕೊಂಡಿತ್ತು.



ಪ್ಯಾಲೇಸ್ತೀನಿಯನ್‌ನ ಶಿಬಿರಗಳಾದ ಸಾಬಾ ಮತ್ತು ಶತಿಲಾ ಮೇಲೆ ನಡೆಸಿದ ಸಾಮೂಹಿಕ ಹತ್ಯೆಗಳನ್ನು ಅಮೆರಿಕಾ ಮರೆತಿರಬಹುದು, ಆದರೆ ಜಗತ್ತಿನ ಬೇರೆ ಬೇರೆ ದೇಶಗಳು ಖಂಡಿತ ಮರೆತಿರಲಾರರು. ಈ ಪ್ರದೇಶಗಳಲ್ಲಿಯೂ 'ಭಯೋತ್ಪಾದನೆ'ಯನ್ನು ಇರಾನ್ ಬೆಂಬಲಿಸುತ್ತಿದೆಯೆಂದು ಅಮೆರಿಕಾ ಆರೋಪಿಸಿದೆ. ಹಾಗೆಯೇ ಸರ್ಕಾರಗಳನ್ನು ಅಸ್ಥಿರಗೊಳಿಸುತ್ತಿದೆ. ಮಾತ್ರವಲ್ಲದೆ, ಹಲವಾರು ಭಯೋತ್ಪಾದಕ ಸಂಘಟನೆಗಳಿಗೆ ಬೆಂಬಲಿಸುತ್ತಿದೆ. ಹಾಗೆಯೇ, ಇರಾನಿನ ಮಣ್ಣಿನಲ್ಲಿಯೇ ಅವರ ಪರಮಾಣು ವಿಜ್ಞಾನಿಗಳನ್ನು ಹತ್ಯೆಯನ್ನು ಕೂಡ ನಡೆಸಿರುವ ಆರೋಪಗಳೂ ಇವೆ.

ಟ್ರಂಪ್ ಮಾಡಿರುವ ಕೊನೆಯ ಆರೋಪವೆಂದರೆ, ಬ್ಯಾಲಿಸ್ಟಿಕ್ ಕ್ಷಿಪಣಿ ಪರೀಕ್ಷೆಗಳು, ಕ್ಷಿಪಣಿಗಳ ಅಂದಾಜು 2000 ಕಿ.ಮೀ. ವ್ಯಾಪ್ತಿಯನ್ನು ಹೊಂದಿದ್ದು, ಅಮೇರಿಕಾಕ್ಕೆ ಇದು ಅಪಾಯವನ್ನು ಉಂಟು ಮಾಡುತ್ತದೆ. ಆದರೆ, ಸೌದಿ ಅರೇಬಿಯಾ, ಮತ್ತು ಯು.ಇ.ಎ. ನೆರೆಹೊರೆಯವರು ಇರಾನಿಗಿಂತಲೂ ಹೆಚ್ಚು ಕ್ಷಿಪಣಿಗಳು ಮತ್ತು ಆಕ್ರಮಣಕಾರಿ ವಿಮಾನಗಳನ್ನು ಶಸ್ತ್ರಾಸ್ತ್ರಗಳನ್ನು ಹೊಂದಿದ್ದಾರೆ ಮತ್ತು ಅವರ ಮಿಲಿಟರಿ ಬಜೆಟ್‌ನಲ್ಲಿ ಇರಾನ್‌ಗಿಂತ ಹದಿಮೂರು ಪಟ್ಟು ಹೆಚ್ಚು ಖರ್ಚು ಮಾಡುತ್ತಾರೆ. ಆದರೆ ಟ್ರಂಪ್ ಇದಕ್ಕೆ ಟುಟಿ–ಪಿಟಿಕ್ ಎನ್ನದೆ ಗಪ್–ಚುಪ್ ಆಗಿದ್ದಾರೆ. ಇದು ಅದರ ಇಬ್ಬಂದಿತನಕ್ಕೆ ಹಿಡಿದ ಕನ್ನಡಿಯಾಗಿದೆ.

ಜೆ.ಸಿ.ಪಿ.ಓ.ಎ. ಯ ನಿಬಂಧನೆಗಳು ಬ್ಯಾಲಿಸ್ಟಿಕ್ ಕ್ಷಿಪಣಿಗಳಿಗೆ ಅನ್ವಯಿಸುವುದಿಲ್ಲ ಅಂತಹ ಶಸ್ತ್ರಾಸ್ತ್ರಗಳನ್ನೂ ಪರೀಕ್ಷಿಸಲು ಇರಾನ್‌ಗೆ ಹಕ್ಕುಗಳಿವೆ. ಏಕೆಂದರೆ ಇಸ್ರೇಲ್ ಕೂಡ ಈ ಪರೀಕ್ಷೆ ನಡೆಸುತ್ತಲೇ ಇರುತ್ತದೆ ಎಂದು ಇರಾನ್ ಪ್ರಶ್ನಿಸುತ್ತಿದೆ. ಇದು ಕೂಡ ಟ್ರಂಪ್‌ನ ಕೋಪಕ್ಕೆ ಕಾರಣವಾಗಿದೆ.

ಪತನದತ್ತ ಸಾಗುತ್ತಿದೆಯೇ?

ವಾಸ್ತವವೆಂದರೆ, ಅಮೆರಿಕಾವು ತನ್ನ ಜಾಗತಿಕ ಯಜಮಾನಿಕೆಯ ಬಲಹೀನತೆಯನ್ನು ಎದುರಿಸುತ್ತಿದೆ. ಅದಕ್ಕೆ ಏನು ಮಾಡಬೇಕೆಂದು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಇರಾನ್ ಮತ್ತು ಉತ್ತರ ಕೊರಿಯಾದಂತ ಪ್ರಾದೇಶಿಕ ಶಕ್ತಿಗಳೊಂದಿಗೆ ಹೊಂದಾಣಿಕೆಗೆ ಪ್ರಯತ್ನ ನಡೆಸಲು ಅದಕ್ಕೆ ಇಷ್ಟವಿಲ್ಲ. ಅದು ತನ್ನ ಪ್ರಾಬಲ್ಯಕ್ಕೆ ಕುಂದು ತರಬಹುದೆಂಬ ನಡುಕ ಶುರುವಾಗಿದೆ. ಅವುಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಟ್ರಂಪ್ ಕಳೆದುಕೊಂಡಂತೆ ಕಾಣುತ್ತಿದೆ. ನಿಧಾನವಾಗಿ ಮತ್ತು ಖಂಡಿತವಾಗಿ ಸವೆದು ಹೋಗುತ್ತಿರುವ ತನ್ನ ಜಾಗತಿಕ ಪ್ರಾಬಲ್ಯವನ್ನೂ ಪುನಃ ದೃಢೀಕರಿಸಲು ಅಥವಾ ಪ್ರದರ್ಶಿಸಲು ಅದು ನಡೆಸುತ್ತಿರುವ ಪ್ರಯತ್ನಗಳು ಜಗತ್ತಿಗೆ ಗೊತ್ತಾಗುತ್ತಿರುವ ಸಂಗತಿ. ಆದ್ದರಿಂದ ಅಮೆರಿಕ ಟ್ರಂಪ್‌ನ ಅಧ್ಯಕ್ಷತೆಯಲ್ಲಿ ಹಿಂದೆಂದಿಗಿಂತ ಹೆಚ್ಚು ಧೃತಿಗೆಟ್ಟಿದೆ. ತನ್ನ ಯುದ್ಧ ಪಡೆಗಳನ್ನೂ ಬಳಸಿಕೊಂಡು 'ಬತ್ತಳಿಕೆಯಲ್ಲಿರುವ ಎಲ್ಲ ರೀತಿಯ ಬಾಣಗಳನ್ನು ಬಿಡುವ ಪಂಥ್ಯವಾಡುತ್ತಿದೆ. ಅದರ ಈ ಆಟದಲ್ಲಿ ಅದು ಪತನದತ್ತ ಸಾಗುತ್ತಿದೆಯೇ? ಕಾದು ನೋಡೋಣ. ●

JANASHAKTHI KANNADA VARA PATRIKE OCTOBER 30-November 5, 2017 Price: Rs. 10/- Date of Publication: 27 OCTOBER 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283





ಅಕ್ಟೋಬರ್ 25: ರಾಜ್ಯದಾದ್ಯಂತ ಪ್ರತಿಭಟನೆ ಸೆಪ್ಟೆಂಬರ್ 14ರ ಭರವಸೆಗಳನ್ನು ಕಾರ್ಮಿಕರು ನೆನಪಿಸಿದರು

ಕರ್ನಾಟಕ ಕಾರ್ಮಿಕ ಸಮ್ಮೇಳನ ನಡೆಸುವ ಮೂಲಕ ವಿವಿಧ ವಿಭಾಗದ ಕಾರ್ಮಿಕರ ಕನಿಷ್ಠ ಕೂಲಿ, ಸಾಮಾಜಿಕ ಭದ್ರತೆ, ಗುತ್ತಿಗೆ ಪದ್ಧತಿ ನಿಷೇಧ ಮುಂತಾದ ಬೇಡಿಕೆಗಳ ಬಗ್ಗೆ ಸಮಗ್ರ ಚರ್ಚೆ ನಡೆಯಬೇಕೆಂದು ಆಗ್ರಹಿಸಿ ವಿವಿಧ ವಿಭಾಗದ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ 25–10–2017ರಂದು ಹಲವು ಜಿಲ್ಲೆಗಳಲ್ಲಿ ಕಾರ್ಮಿಕ ಇಲಾಖೆಯ ಕಚೇರಿಯೆದುರು ಪ್ರತಿಭಟಾ ಪ್ರದರ್ಶನ ನಡೆಸಿದರು. ಕನಿಷ್ಟ ಕೂಲಿ ರೂ. 18 ಸಾವಿರ ನಿಗದಿ ಪಡಿಸಬೇಕು, ಗುತ್ತಿಗೆ ಪದ್ಧತಿ ನಾಶವಾಗಬೇಕು, ಸ್ಕೀಂ ನೌಕರರ ಸಂಕಷ್ಟಗಳಿಗೆ ಸ್ಪಂದಿಸಿರಿ, ಸಾಮಾಜಿಕ ಭದ್ರತೆ ಒದಗಿಸಿರಿ, ಅಸಂಘಟಿತ ಕಾರ್ಮಿಕರಿಗೆ ರಕ್ಷಣೆ ಒದಗಿಸಿ, ಎಲ್ಲಾ ಜಿಲ್ಲೆಗಳಲ್ಲೂ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಎಂಬಿತ್ಯಾದಿ ಘೋಷಣೆಗಳನ್ನು ಕೂಗಿದರು.



ಸಂವಿಧಾನ ಶಿಲ್ಪಿ ಡಾ। ಬಿ.ಆರ್. ಅಂಬೇಡ್ಕರ್‌ರವರು ಕಾರ್ಮಿಕ ಸಚಿವರಾಗಿದ್ದ 75ನೇ ವರ್ಷಾಚರಣೆಯ ಅಂಗವಾಗಿ ಡಿಸೆಂಬರ್ 6ರಂದು ಕರ್ನಾಟಕ ಕಾರ್ಮಿಕ ಸಮ್ಮೇಳನವನ್ನು ನಡೆಸಬೇಕು ಮತ್ತು ಇತರ ಹಕ್ಕೊತ್ತಾಯಗಳ ಬಗ್ಗೆ ಕಾರ್ಮಿಕ ಮಂತ್ರಿ ಕೊಟ್ಟಿದ್ದ ಭರವಸೆಗಳು ಈಡೇರಿಲ್ಲ. ಅದನ್ನು ಈಡೇರಿಸಬೇಕು ಎಂದು ನೆನಪಿಸಲು ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರು, ಮಂಗಳೂರು, ಹಾಸನ, ಉತ್ತರ ಕನ್ನಡ, ಮಂಡ್ಯ ಮುಂತಾದ ಜಿಲ್ಲೆಗಳಿಂದ ಪ್ರತಿಭಟನಾ ಪ್ರದರ್ಶನಗಳು ನಡೆದ ವರದಿಗಳು ಬಂದಿವೆ.









ಸೌಹಾರ್ದಕ್ಕಾಗಿ ಮಾನವ ಸರಪಣಿ - ಬಳ್ಳಾರಿ ಜಿಲ್ಲಾ ಸಮಾವೇಶ

ಸೌಹಾರ್ದಕ್ಕಾಗಿ ಜನವರಿ 30ರಂದು ಮಾನವ ಸರಪಣಿ ನಡೆಸುವ ಬಗ್ಗೆ ಚರ್ಚಿಸಲು ಬಳ್ಳಾರಿಯಲ್ಲಿ ವಿವಿಧ ಪ್ರಗತಿಪರ ಸಂಘಟನೆಗಳ ಜಿಲ್ಲಾ ಸಮಾವೇಶ ಅಕ್ಟೋಬರ್ 22ರಂದು ನಡೆಯಿತು. ಸಿಪಿಐ(ಎಂ) ಕಾರ್ಯದರ್ಶಿ ಕಾ. ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐ(ಎಂ) ಸೆಕ್ರೆಟಾರಿಯಟ್ ಸದಸ್ಯ ಕಾ. ಯು. ಬಸವರಾಜ್ ಮತ್ತು ಬಳ್ಳಾರಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾ. ಆರ್.ಎಸ್. ಬಸವರಾಜ್ ಸಮಾವೇಶದಲ್ಲಿ ಭಾಗವಹಿಸಿದ್ದರು.


ರೈತ ಸಂಘದ ಅಹೋರಾತ್ರಿ ಧರಣಿ – ಅ. 12–30

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಅಕ್ಟೋಬರ್ 12ರಿಂದ ಬಗರ್ ಹುಕುಂ ಸಾಗುವಳಿ ಅರ್ಜಿಗಳನ್ನು ಇತ್ಯರ್ಥ ಮಾಡುವಂತೆ ರಾಜ್ಯದ ಹಲವು ಕಡೆ ರೈತರು ತಾಲೂಕು ಕಚೇರಿಗಳ ಎದುರು ಅಹೋರಾತ್ರಿ ಧರಣಿ ನಡೆಸಿದರು. ರಾಜ್ಯದಲ್ಲಿ ಲಕ್ಷಾಂತರ ರೈತರು ಬಗರ್ ಹುಕುಂ ಸಾಗುವಳಿಯನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಅದನ್ನು ಸಕ್ರಮಗೊಳಿಸುವ 12 ಲಕ್ಷ ಅರ್ಜಿಗಳು ನಾನಾ ಕಾರಣದಿಂದ ವಜಾಗೊಂಡಿವೆ. 3 ಲಕ್ಷ ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿವೆ. ಇದಕ್ಕೆ ಪ್ರಮುಖವಾಗಿ ಕಾನೂನಾತ್ಮಕ ತೊಡಕುಗಳಿವೆ. ಅಗತ್ಯ ಕಾನೂನು ತಿದ್ದುಪಡಿಗಳನ್ನು ಮಾಡಿ ಸಚಿವ ಕಾಗೋಡು ತಿಮ್ಮಪ್ಪ 2016 ನವೆಂಬರ್ 17ರ ಜೈಲುಭರೋ ಸಮಯದಲ್ಲಿ ಆಶ್ವಾಸನೆ ಇತ್ತಿದ್ದು ಅದು ಹುಸಿಯಾಗಿದೆ. ಅದನ್ನು ಮುಂದಿನ ಅಧಿವೇಶನದಲ್ಲಿ ಎತ್ತಿಕೊಂಡು ಸಕ್ರಮಗೊಳಿಸುವಂತೆ ಒತ್ತಾಯಿಸಲು ಈ ಅಹೋರಾತ್ರಿ ಧರಣಿಗೆ ಕರೆ ಕೊಡಲಾಗಿತ್ತು.

ರಾಜ್ಯದ ಹಲವು ಕಡೆ ಅಕ್ಟೋಬರ್ 10 ರಿಂದ 30 ರವರೆಗೆ ಈಗಾಗಲೇ ಹಲವು ಕಡೆ ಅಹೋರಾತ್ರಿ ಧರಣಿಗಳು ನಡೆದಿವೆ. ಈ ವಾರ ಯಾದಗೀರ, ತುಮಕೂರು. ಹಾಸನಗಳಿಂದ ನೂರಾರು ಬಗರ ಹುಕುಂ ರೈತರ ಪಾಲುಗೊಳ್ಳುವಿಕೆಯೊಂದಿಗೆ ಅಹೋ ರಾತ್ರಿ ಧರಣಿ ನಡೆದ ವರದಿಗಳು ಬಂದಿವೆ.







JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**